# ಜನತಾ ವಾಣಿ

ಸಂಪಾದಕರು :
ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಅಕ್ಟೋಬರ್ 01, 2024

ಸಂಪುಟ : 51 ಸಂಚಿಕೆ : 139 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com







## ಚನ್ನಗಿರಿಯಲ್ಲಿ ಶೇ.10 ಮಳೆ ಕೊರತೆ

### ಜಿಲ್ಲೆಯಲ್ಲಿ ವಾಡಿಕೆಗಿಂತ ಶೇ.29ರಷ್ಟು ಹೆಚ್ಚು ಮಳೆ

ದಾವಣಗೆರೆ, ಸೆ. 30 - ಮಳೆಗಾಲದಲ್ಲಿ ಜಿಲ್ಲಾದ್ಯಂತ ಉತ್ತಮ ಮಳೆಯಾಗಿದ್ದರೂ ಸಹ, ಚನ್ನಗಿರಿಯಲ್ಲಿ ಮಾತ್ರ ಶೇ.10ರಷ್ಟು ಮಳೆಯ ಕೊರತೆಯಾಗಿದೆ.



ಮಳೆಗಾಲದ ಅವಧಿಯಾದ ಜೂನ್ 1ರಿಂದ ಸೆಪ್ಟೆಂಬರ್ 30ರ ನಡುವೆ ಚನ್ನಗಿರಿಯಲ್ಲಿ ವಾಡಿಕೆಯ ಮಳೆಯ ಪ್ರಮಾಣ 533 ಮಿ.ಮೀ. ಆಗಿದ್ದರೆ, ವಾಸ್ತವಿಕವಾಗಿ 479 ಮಿ.ಮೀ. ಮಾತ್ರ ಮಳೆ ಸುರಿದಿದೆ.

ಉಳಿದಂತೆ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಮಳೆ ಪ್ರಮಾಣ ವಾಡಿಕೆಗಿಂತ ಹೆಚ್ಚಾಗಿದೆ. ಜಗಳೂರಿನಲ್ಲಿ ವಾಡಿಕೆಗಿಂತ ಶೇ.80ರಷ್ಟು ಹೆಚ್ಚು ಮಳೆಯಾಗಿದೆ.

ದಾವಣಗೆರೆಯಲ್ಲಿ 373 ಮಿ.ಮೀ. ವಾಡಿಕೆ ಮಳೆಯಾಗಿದ್ದರೆ, ವಾಸ್ತವಿಕವಾಗಿ 534 ಮಿ.ಮೀ. ಮಳೆಯಾಗಿದೆ. ಮಳೆ ಪ್ರಮಾಣ ಶೇ.43ರಷ್ಟು ಹೆಚ್ಚಾಗಿದೆ. ಹರಿಹರದಲ್ಲಿ 347 ಮಿ.ಮೀ. (4ನೇ ಪುಟಕ್ಕೆ)

## ಮುಡಾ: ಸಿಎಂಗೆ ಈಗ ಇ.ಡಿ. ಸಂಕಟ

ನವದೆಹಲಿ, ಸೆ. 30- ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ದಾಖಲಿಸಿರುವ ಎಫ್.ಐ.ಆರ್. ಆಧಾರದ ಮೇಲೆ ಜಾರಿ ನಿರ್ದೇಶನಾಲಯ ಸಹ ಪ್ರಕರಣವನ್ನು ದಾಖಲಿಸಿದೆ. ಇದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಪತ್ನಿ ಹಾಗೂ ಇತರ ಕೆಲವರು ಆರೋಪಿಗಳಾಗಿದ್ದಾರೆ.

ಅಕ್ರಮ ಹಣ ತಡೆ ಕಾಯ್ದೆಯ ಅನ್ವಯ ಸಿದ್ದರಾಮಯ್ಯ ವಿರುದ್ಧ ಇ.ಸಿ.ಐ.ಆರ್. ದಾಖಲಿಸಲಾಗಿದೆ. ಇದು ಎಫ್.ಐ.ಆರ್.ಗೆ ಸಮನಾಗಿದೆ. ಇದರಿಂದ ಸಿದ್ದರಾಮಯ್ಯ ಸಮಸ್ಯೆಗಳು ಮತ್ತಷ್ಟು ಹೆಚ್ಚಾಗಿವೆ.

ಈ ಪ್ರಕ್ರಿಯೆಯ ಅನ್ವಯ ಜಾರಿ ನಿರ್ದೇಶನಾಲಯವು ಆರೋಪಿಯ ಪ್ರಶ್ನಿಸಲು ಸಮನ್ಸ್ ಕಳಿಸುವ ಹಾಗೂ ಆಸ್ತಿ ಜಪ್ತಿ ಮಾಡಿಕೊಳ್ಳುವ ಅಧಿಕಾರ ಹೊಂದಿದೆ.

**ಇ.ಸಿ.ಐ.ಆರ್. ದಾಖಲಿಸಿದ ಜಾರಿ ನಿರ್ದೇಶನಾಲಯ**

ಕಳೆದ ವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಲೋಕಾಯುಕ್ತರು ಎಫ್.ಐ.ಆರ್. ದಾಖಲಿಸಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕುಟುಂಬದವರು ಕೋಟ್ಯಂತರ ರೂ. ಬೆಲೆ ಬಾಳುವ 14 ನಿವೇಶನಗಳನ್ನು ಪಡೆದಿರುವ ಸಂಬಂಧ ನ್ಯಾಯಾಲಯ ಮಹತ್ವದ ತೀರ್ಪು ನೀಡಿತ್ತು. ಆ ನಂತರ ಲೋಕಾಯುಕ್ತರು ಮುಖ್ಯಮಂತ್ರಿ ಅವರನ್ನೇ ಮೊದಲ ಆರೋಪಿಯನ್ನಾಗಿ ಮಾಡಿ ಎಫ್ಐಆರ್ ದಾಖಲಿಸಿದ್ದರು.

ಜಾರಿ ನಿರ್ದೇಶನಾಲಯದ ಕ್ರಮವನ್ನು ಖಂಡಿಸಿರುವ ಕಾಂಗ್ರೆಸ್, ಜಾರಿ ನಿರ್ದೇಶನಾಲಯವು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ದ್ವೇಷ ಸಾಧನವಾಗಿ ಮಾರ್ಪಟ್ಟಿದೆ ಎಂದು ಆರೋಪಿಸಿದೆ.

ಜಾರಿ ನಿರ್ದೇಶನಾಲಯವು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ರಾಜಕೀಯ ಎದುರಾಳಿಗಳ ಪೀಡಿಸುವ, ದ್ವೇಷ ಸಾಧಿಸುವ ಹಾಗೂ ಸೇಡು ತೀರಿಸಿಕೊಳ್ಳುವ ಉಪಕರಣವಾಗಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ. ಮತ್ತೊಂದೆಡೆ (4ನೇ ಪುಟಕ್ಕೆ)

## ಬಾಂಡ್ : ನಿರ್ಮಲಾ ವಿರುದ್ಧದ ಎಫ್‌ಐಆರ್ ಗೆ ತಡೆ

ಬೆಂಗಳೂರು, ಸೆ. 30 – ಚುನಾವಣಾ ಬಾಂಡ್ ಮೂಲಕ ಹಣ ವಸೂಲಿ ಮಾಡಲಾಗಿದೆ ಎಂಬ ಆರೋಪದ ಮೇಲೆ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಮತ್ತಿತರರ ವಿರುದ್ಧ ದಾಖಲಿಸಿದ್ದ ಎಫ್.ಐ.ಆರ್.ಗೆ ಕರ್ನಾಟಕ ಹೈಕೋರ್ಟ್ ತಡೆಯಾಜ್ಞೆ ಹೊರಡಿಸಿದೆ.

ಬಿಜೆಪಿ ನಾಯಕ ನಳಿನ್ ಕುಮಾರ್ ಕಟೀಲ್, ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಹಾಗೂ ಬಿಜೆಪಿಯ ಪದಾಧಿಕಾರಿಗಳ ವಿರುದ್ಧ ಜನಾಧಿಕಾರ ಸಂಘರ್ಷ ಪರಿಷತ್ (ಜೆ.ಎಸ್.ಪಿ.) ಸಂಘಟನೆಯ ಆದರ್ಶ್ ಆರ್. ಅಯ್ಯರ್ ಎಂಬುವವರು ತಿಲಕ್ ನಗರ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್. ದಾಖಲಿಸಿದ್ದರು.

ಜನಪ್ರತಿನಿಧಿಗಳ ನ್ಯಾಯಾಲಯದ ಆದೇಶದ ನಂತರ ಎಫ್.ಐ.ಆರ್. ದಾಖಲಿಸಲಾಗಿತ್ತು. ಇದನ್ನು ಪ್ರಶ್ನಿಸಿ ಕಟೀಲ್ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು.

ಈ ಬಗ್ಗೆ ವಿಚಾರಣೆ ನಡೆಸಿ ಮಧ್ಯಂತರ ಆದೇಶ ಹೊರಡಿಸಿರುವ ನ್ಯಾಯಮೂರ್ತಿ ಎಂ. ನಾಗಪ್ರಸನ್ನ, ಸೆಕ್ಷನ್ 383 ಅನ್ವಯ ದೂರು ದಾಖಲಿಸಲಾಗಿದೆ. ಆದರೆ, ಬೆದರಿಕೆ ಕಾರಣದಿಂದಾಗಿ ಆಸ್ತಿ ಕಳೆದುಕೊಂಡವರು ಮಾತ್ರ ಈ ಸೆಕ್ಷನ್ ಬಳಸಿ ದೂರು ಸಲ್ಲಿಸಬಹುದು ಎಂದು ಹೇಳಿದ್ದಾರೆ.

ಬೆದರಿಕೆ ಕಾರಣದಿಂದ ಆಸ್ತಿ ಕಳೆದುಕೊಂಡಿರುವುದು ಎಲ್ಲಿಯೂ ಕಂಡು ಬಂದಿಲ್ಲ. ಪ್ರಕರಣ ಮುಂದುವರೆಯಲು ಬಿಡುವುದು ಕಾನೂನು ಪ್ರಕ್ರಿಯೆಯ ದುರ್ಬಳಕೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ತನಿಖೆಗೆ ತಡೆಯಾಜ್ಞೆ ನೀಡುವುದಾಗಿ ನ್ಯಾಯಮೂರ್ತಿ (4ನೇ ಪುಟಕ್ಕೆ)

## ನಿವೇಶನ ಮರಳಿಸಲು ಮುಂದಾದ ಸಿಎಂ ಪತ್ನಿ

ಮೈಸೂರು, ಸೆ. 30 - ಮುಡಾ ವಿವಾದದ ಹಿನ್ನೆಲೆಯಲ್ಲಿ ನಿವೇಶನಗಳನ್ನು ವಾಪಸ್ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಬಿ.ಎಂ. ಪಾರ್ವತಿ ಅವರು ನಿರ್ಧರಿಸಿದ್ದಾರೆ. ಈ ಸಂಬಂಧ ಮುಡಾ ಆಯುಕ್ತರಿಗೆ ಅವರು ಪತ್ರ ಬರೆದಿದ್ದಾರೆ.


ಮುಡಾ ಹಗರಣ ಸಂಬಂಧ ಸಿದ್ದರಾಮಯ್ಯ ಅವರ ವಿರುದ್ಧ ಇತ್ತೀಚಿಗೆ ದಾಖಲಾಗಿದ್ದ ಲೋಕಾಯುಕ್ತ ಎಫ್ಐಆರ್ ದಾಖಲಿಸಿತ್ತು. ನಂತರ ಜಾರಿ ನಿರ್ದೇಶನಾಲಯ ಸಹ ಇ.ಸಿ.ಐ.ಆರ್. ದಾಖಲಿಸಿತ್ತು. ಇದರ ಬೆನ್ನಲ್ಲೇ ಪಾರ್ವತಿ ಅವರು ಪರಿಹಾರವಾಗಿ ಪಡೆಯಲಾದ 14 ನಿವೇಶಗಳನ್ನು ಮುಡಾಗೆ ಹಿಂತಿರುಗಿಸಲು ಮುಂದಾಗಿದ್ದಾರೆ.

ತಮಗೆ ಸೇರಿದ 3 ಎಕರೆ 16 ಗುಂಟೆ ವಿಸ್ತೀರ್ಣದ ಜಮೀನನ್ನು ಪ್ರಾಧಿಕಾರ ಭೂಸ್ವಾಧೀನವಿಲ್ಲದೆ ಉಪಯೋಗಿಸಿಕೊಂಡಿದ್ದಾಗಿ ಮುಡಾದಿಂದ ಪರಿಹಾರವಾಗಿ ವಿಜಯನಗರ 3 ಮತ್ತು 4ನೇ ಹಂತದಲ್ಲಿ ವಿವಿಧ ಅಳತೆಯ 14 ನಿವೇಶನಗಳ ಕ್ರಯ ಪತ್ರಗಳನ್ನು ನೀಡಲಾಗಿತ್ತು. ಇವುಗಳನ್ನು ರದ್ದುಗೊಳಿಸುವ ಮೂಲಕ ಪರಿಹಾರದ ನಿವೇಶನಗಳನ್ನು ಒಪ್ಪಿಸಲು ಹಾಗೂ ಹಿಂತಿರುಗಿಸಲು ಒಪ್ಪಿರುತ್ತೇನೆ. ಈ ನಿಟ್ಟಿನಲ್ಲಿ ಆದಷ್ಟು ಬೇಗ ಅಗತ್ಯ ಕ್ರಮ ಕೈಗೊಳ್ಳಿ ಎಂದು ಮುಡಾ ಆಯುಕ್ತರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

## ಅನುಪಮ್ ಖೇರ್ ಚಿತ್ರದ ನೋಟು ನೀಡಿ ವಂಚನೆ


### 2.1 ಕೆಜಿ ಬಂಗಾರ ಕಳೆದುಕೊಂಡ ವರ್ತಕ

ಅಹಮದಾಬಾದ್, ಸೆ. 30 - ಬಾಲಿವುಡ್ ನಟ ಅನುಪಮ್ ಖೇರ್ ಅವರ ಚಿತ್ರವಿರುವ ನಕಲಿ ನೋಟುಗಳನ್ನು ನೀಡಿ 2.1 ಕೆಜಿ ಬಂಗಾರವನ್ನು ವರ್ತಕನಿಂದ ಖರೀದಿಸಿ ವಂಚಿಸಿದ ಘಟನೆ ನಡೆದಿದೆ.




ಸ್ಥಳೀಯ ಬಂಗಾರದ ವ್ಯಾಪಾರಿ ಮೆಹುಲ್ ಠಕ್ಕರ್ ಅವರು ಈ ವಂಚನೆಗೆ ಸಿಲುಕಿದ್ದಾರೆ. ಠಕ್ಕರ್ ಅವರು ನವರಂಗಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ದ್ದಾರೆ. 500 ರೂ.ಗಳ ಮುಖಬೆಲೆಯ 26 ಬಂಡಲ್‌ಗಳಲ್ಲಿ ಹಣ ನೀಡಲಾಗಿತ್ತು. ಆದರೆ, ಇದು ನಕಲಿ ಎಂಬುದು ನಂತರ ಕಂಡು ಬಂದಿತು. ಈ ನೋಟುಗಳ ಮೇಲೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಎಂಬ ಉಲ್ಲೇಖವಿರುವ ಬದಲು ರಿಸೋಲ್ ಬ್ಯಾಂಕ್ ಆಫ್ ಇಂಡಿಯಾ ಎಂದಿತ್ತು.

ಪ್ರಶಾಂತ್ ಪಟೇಲ್ ಎಂಬ ಠಕ್ಕರ್ ಪರಿಚಯಸ್ಥರೊಬ್ಬರು ಕರೆ ಮಾಡಿ ತನಗೆ 2.1 ಕೆ.ಜಿ. ಬಂಗಾರ ಬೇಕಿದೆ ಎಂದು ಹೇಳಿದ್ದರು. ಇದಕ್ಕಾಗಿ (4ನೇ ಪುಟಕ್ಕೆ)



## ನಟ ಮಿಥುನ್ ಚಕ್ರವರ್ತಿಗೆ ಫಾಲ್ಕೆ



ನವದೆಹಲಿ, ಸೆ. 30 - ಹಿರಿಯ ನಟ ಮಿಥುನ್ ಚಕ್ರವರ್ತಿ ಅವರಿಗೆ ಚಿತ್ರರಂಗದ ಅತ್ಯುನ್ನತ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪ್ರಕಟಿಸಲಾಗಿದೆ. ಮೃಗಯಾ, ಡಿಸ್ಕೋ ಡ್ಯಾನ್ಸರ್ ಹಾಗೂ ಪ್ರೇಮ್ ಪ್ರತಿಗ್ಯಾ ಮುಂತಾದ ಚಿತ್ರಗಳಿಂದ ಮಿಥುನ್ ಹೆಸರು ಮಾಡಿದ್ದಾರೆ. ಈ ಹಿಂದೆ ಅವರಿಗೆ ಪದ್ಮ ಭೂಷಣ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು.

## ಷಡ್ಯಂತ್ರದಿಂದ ನೊಂದು ನಿವೇಶನ ವಾಪಸ್ : ಸಿಎಂ

ಬೆಂಗಳೂರು, ಸೆ. 30 – ನನ್ನ ವಿರುದ್ಧ ನಡೆಯುತ್ತಿರುವ ರಾಜಕೀಯ ಷಡ್ಯಂತ್ರದಿಂದ ನೊಂದಿರುವ ನನ್ನ ಪತ್ನಿ ಪಾರ್ವತಿ ಮುಡಾಗೆ ನಿವೇಶನಗಳನ್ನು ಹಿಂದಿರುಗಿಸುವ ನಿರ್ಧಾರ ಕೈಗೊಂಡಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಮೈಸೂರಿನ ಮುಡಾ ಭೂಸ್ವಾಧೀನ ನಡೆಸದೇ ವಶಕ್ಕೆ ಪಡೆದಿದ್ದ ಜಮೀನಿಗೆ ಪರಿಹಾರ ರೂಪದಲ್ಲಿ ನೀಡಿದ್ದ ನಿವೇಶನಗಳನ್ನು ನನ್ನ ಪತ್ನಿ ಪಾರ್ವತಿ ಹಿಂದಿರುಗಿಸಿ (2ನೇ ಪುಟಕ್ಕೆ)

## ಎನ್.ಪೂರ್ಣಚಂದ್ರ ರಾವ್ ನಿಧನ



ದಾವಣಗೆರೆ ತಾಲ್ಲೂಕು ಪಾಮೇನಹಳ್ಳಿ ವಾಸಿ
ಶ್ರೀ ಮಂಜುನಾಥ ಪೌಲ್ಟ್ರಿ ಫಾರಂ ಮಾಲೀಕರಾದ

**ಎನ್. ಪೂರ್ಣಚಂದ್ರರಾವ್**

ಅವರು ದಿನಾಂಕ 30.9.2024ರ ಸೋಮವಾರ ಸಂಜೆ 5.00 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 85 ವರ್ಷ ವಯಸ್ಸಾಗಿತ್ತು. ಪತ್ನಿ, ಮಕ್ಕಳಾದ ದಿವಂಗತ ಎನ್. ಶ್ರೀಧರ್ (ರವಿ), ಎನ್.ಶ್ರೀಕಾಂತ್ (ರಘು), ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ: 01.10.2024 ರ ಮಂಗಳವಾರದಂದು ಮಧ್ಯಾಹ್ನ 12 ಗಂಟೆಗೆ ಪಾಮೇನಹಳ್ಳಿ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬದವರು**




Authorised Distributor :
ಅಧಿಕೃತ ವಿತರಕರು :
SRI HULLUMANE SOUHARDHA SAHAKARA LTD
ಶ್ರೀ ಹುಲ್ಲುಮನೆ ಸೌಹಾರ್ದ ಸಹಕಾರ ಲಿ
#644, ಶ್ರೀ ದುರ್ಗಾಕೃಪ, 60 ಅಡಿ ರಸ್ತೆ, ನಿಟುವಳ್ಳಿ, ದಾವಣಗೆರೆ.
ಫೋನ್ : 08192 260019, 90363 02031, 90366 12091, 95130 29000, 99160 01506

## ನಗರದಲ್ಲಿ ಪಂಚಮಸಾಲಿ ವಧು - ವರರ ಸಮಾವೇಶ



ದಾವಣಗೆರೆ, ಸೆ.30- ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಪಂಚಮಸಾಲಿ ವಧು-ವರರ ಮಾಹಿತಿ ಕೇಂದ್ರದಿಂದ ನಗರದ ಸದ್ಯೋಜಾತ ಸ್ವಾಮಿ ಹಿರೇಮಠದಲ್ಲಿ ಇತ್ತೀಚೆಗೆ ಪಂಚಮಸಾಲಿ ವಧು-ವರರ ಸಮಾವೇಶ ನಡೆಯಿತು.

ಪಂಚಮಸಾಲಿ ಜಗದ್ಗುರು ಪೀಠದ ಪ್ರಧಾನ ಧರ್ಮದರ್ಶಿ ಬಿ.ಸಿ. ಉಮಾಪತಿ ಸಮಾವೇಶ ಉದ್ಘಾಟಿಸಿದರು. ಸಮಾಜದ ಉಪಾಧ್ಯಕ್ಷೆ ವಾಣಿ ಶಿವಣ್ಣನವರು, ಬಸವರಾಜ್ ಅಣಪೂರ್, ಎಸ್.ಕೆ. ಶ್ರೀಧರ್, ವಧು-ವರರ ಮಾಹಿತಿ ಕೇಂದ್ರದ ಅಧ್ಯಕ್ಷ ಮಾಸೂರು ಮಹೇಶ್ವರಪ್ಪ, ಕಾರ್ಯದರ್ಶಿ ಶ್ರೀಧರ್ ಸಿ. ಸಣ್ಣಪ್ಪನವರ್, ಉಪಾಧ್ಯಕ್ಷ ಬಾದಾಮಿ ಕರಿಬಸಪ್ಪ, ಖಜಾಂಚಿ ಮಂಜುನಾಥ ಪುರವಂತರ, ಕೆ.ಕೆ. ನಾಗರಾಜ್, ಬಾದಾಮಿ ಜಯಣ್ಣ, ಚನ್ನ ಮಲ್ಲಿಕಾರ್ಜುನ್, ಎನ್.ಎಚ್. ಲಿಂಗರಾಜು, ಜಿ. ಷಣ್ಮುಖಪ್ಪ, ಎನ್. ಶಿವಾನಂದಪ್ಪ, ಕೆ.ಸಿ ಉಮಾಕಾಂತ್, ಬಾತಿ ರವಿಕುಮಾರ್ ಪೂಜಾರ್, ಎಂ. ದೊಡ್ಡಪ್ಪ, ಮಹಡಿ ತಿಪ್ಪೇಸ್ವಾಮಿ, ವೀಣಾ ನಟರಾಜ್ ಬೆಳ್ಳೂಡಿ, ಸಿ. ಪುಟ್ಟಪ್ಪ, ಕುಮಾರ್ ಹುಂಬಿ, ಪಂಚಮಸಾಲಿ ಸಮಾಜದ ಎಲ್ಲಾ ಘಟಕಗಳ ಸದಸ್ಯರಿದ್ದರು.

# ಗ್ರಾ.ಪಂ. ಚುನಾಯಿತರು ಜನರ ಹಿತರಕ್ಷಣೆಗೆ ಕೆಲಸ ಮಾಡಲಿ

**ಹನುಮಸಾಗರ ಗ್ರಾಮ ಪಂಚಾಯಿತಿ ಉದ್ಘಾಟನೆಯಲ್ಲಿ ಶಾಸಕ ಡಿ.ಜಿ. ಶಾಂತನಗೌಡ**



ಹೊನ್ನಾಳಿ, ಸೆ.30- ಪ್ರಜಾತಂತ್ರ ವ್ಯವಸ್ಥೆಯಲ್ಲಿ ಜನಪ್ರತಿನಿಧಿಗಳ ಪೈಕಿ ಪ್ರಧಾನಿ ಹಾಗೂ ಮುಖ್ಯಮಂತ್ರಿಗಳಿಗಿರದೇ ಇರುವ ಮಹತ್ತರವಾದ ಅಧಿಕಾರ ಅಂದರೆ ಚೆಕ್‌ಗಳಿಗೆ ಸಹಿ ಮಾಡುವ ಅಧಿಕಾರ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಮಾತ್ರ ಇದೆ. ಗ್ರಾಮ ಪಂಚಾಯಿತಿ ಅಧ್ಯಕ್ಷರ ಸ್ಥಾನ ಅಷ್ಟು ಮಹತ್ವದ್ದಾಗಿದೆ ಎಂದು ಶಾಸಕ ಡಿ.ಜಿ.ಶಾಂತನಗೌಡ ಹೇಳಿದರು.

ತಾಲ್ಲೂಕಿನ ಹನುಮಸಾಗರದಲ್ಲಿ ಇಂದು ಏರ್ಪಾಡಾಗಿದ್ದ ನೂತನ ಗ್ರಾಮ ಪಂಚಾಯಿತಿ ಕಟ್ಟಡ ಉದ್ಘಾಟಿಸಿ ಅವರು ಮಾತನಾಡಿದರು.

ಹಿಂದಿನ ಕಾಲದಲ್ಲಿ ಪಂಚಾಯಿತಿಗಳಲ್ಲಿ ಯಾವಾಗಲೂ ಸಭೆಗಳನ್ನು ನಡೆಸುತ್ತಿದ್ದರೆ, ಇದೀಗ ಪಂಚಾಯತ್ ರಾಜ್ ವ್ಯವಸ್ಥೆ ಜಾರಿಗೆ ಬಂದ ಮೇಲೆ ಗ್ರಾಮ ಪಂಚಾಯಿತಿ ಆಡಳಿತದಲ್ಲಿ ಸರ್ಕಾರದ ಅನುದಾನ, ಯೋಜನೆಗಳನ್ನು ಬಳಸಿಕೊಂಡು ಗ್ರಾಮೀಣಾಭಿವೃದ್ಧಿ ಕೆಲಸಗಳು ತೃಪ್ತಿಕರವಾಗಿ ನಡೆಯುತ್ತಿವೆ ಎಂದರು.

ಗ್ರಾಮಪಂಚಾಯಿತಿ ಚುನಾಯಿತ ಪ್ರತಿನಿಧಿಗಳು ಆದಷ್ಟು ಪ್ರಾಮಾಣಿಕವಾಗಿ ತಮ್ಮ ಸುತ್ತ ಮುತ್ತಲ ಗ್ರಾಮ, ಜನರ ಹಿತರಕ್ಷಣೆಗಾಗಿ ಕೆಲಸ ಮಾಡಬೇಕು. ಆಗ ಮಾತ್ರ ಗ್ರಾಮ ಸ್ವರಾಜ್ಯಕ್ಕೆ ನಿಜವಾದ ಅರ್ಥ ಬರುತ್ತದೆ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ವಿಧಾನ ಪರಿಷತ್ ಸದಸ್ಯ ಡಾ.ಧನಂಜಯ ಸರ್ಜಿ ಮಾತನಾಡಿ, ದೇಶದಲ್ಲಿ ಕ್ರಾಂತಿವೀರ ಬಸವಣ್ಣ ಮತ್ತು ಡಾ. ಅಂಬೇಡ್ಕರ್ ಅವರು ಮಹಿಳಾ ಸಬಲೀಕರಣಕ್ಕಾಗಿ ಹೋರಾಡಿದ ಮಹನೀಯರು. ಇದರ ಪರಿಣಾಮ ಇಂದು ಗ್ರಾಮ ಪಂಚಾಯಿತಿಗಳಲ್ಲಿ ಶೇ.50 ರಷ್ಟು ಹಾಗೂ ಇತರೆ ಚುನಾವಣೆಗಳಲ್ಲಿ ಶೇ.33ರಷ್ಟು ಮಹಿಳಾ ಮೀಸಲಾತಿ ದೊರೆತಿದೆ ಎಂದರು.

ಗ್ರಾ.ಪಂ. ಅಧ್ಯಕ್ಷರಾದ ಶೃತಿ ಮಂಜುನಾಥ್ ಮಾತನಾಡಿ, ಈ ಹಿಂದೆ ಕಟ್ಟಡ ಮಳೆಗಾಲದಲ್ಲಿ ಸೋರುತ್ತಿತ್ತು. ಇದನ್ನು ಕಂಡು ಉತ್ತಮ ಕಟ್ಟಡ ನಿರ್ಮಿಸಬೇಕು ಎಂಬ ಕನಸು ಇಲ್ಲಿನ ಗ್ರಾಮಸ್ಥರಿಗಿತ್ತು. ಎಲ್ಲರ ಸಹಕಾರದಿಂದ ಅದು ನನಸಾಗಿದೆ ಎಂದರು.

ತಾಲ್ಲೂಕು ಪಂಚಾಯಿತಿ ಇ.ಓ ಪ್ರಕಾಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಗ್ರಾಪಂ. ಪಿ.ಡಿ.ಓ. ಶಿವಕುಮಾರ್ ಡಿ. ಸ್ವಾಗತಿಸಿದರು. ಗ್ರಾ.ಪಂ. ಅಧ್ಯಕ್ಷೆ ಶೃತಿ ಮಂಜುನಾಥ್, ಉಪಾಧ್ಯಕ್ಷ ನಾಗರಾಜ್ ನಾಯ್ಕ ಸೇರಿದಂತೆ ಎಲ್ಲಾ ಸದಸ್ಯರನ್ನು ಸನ್ಮಾನಿಸಲಾಯಿತು.

ಜಿ.ಪಂ.ಇಂಜಿನಿಯರಿಂಗ್ ಉಪವಿಭಾಗದ ಎ.ಇ.ಇ. ಮೋತಿಲಾಲ್, ತಾ.ಪಂ., ವ್ಯವಸ್ಥಾಪಕ ಮಹಮ್ಮದ್ ರಫಿ, ಮುಖಂಡ ಕೊನಾಯ್ಕನಹಳ್ಳಿ ಮಂಜುನಾಥ್, ಗ್ರಾ.ಪಂ. ಕಾರ್ಯದರ್ಶಿ ಎಸ್. ಮಂಜುನಾಥ್ , ಪಂಚಾಯತ್ ರಾಜ್ ಸಹಾಯಕ ನಿರ್ದೇಶಕ ನಾಗರಾಜ್ ಮತ್ತು ಇತರರು ಭಾಗವಹಿಸಿದ್ದರು.

# ಶೋಷಿತ ಸಮುದಾಯಕ್ಕೆ ಒಳಮೀಸಲಾತಿ ಹಕ್ಕು ಸಿಗಬೇಕು

**ಜಗಳೂರು : ಆದಿ ಜಾಂಬವ ಮಾದಿಗ ಸಮಾಜ ಸೇವಾ ಸಂಘದ ಕಾರ್ಯಕ್ರಮದಲ್ಲಿ ಮಾಜಿ ಸಂಸದ ಎ.ನಾರಾಯಣಸ್ವಾಮಿ**



ಜಗಳೂರು, ಸೆ.30- ಶೋಷಿತ ಸಮುದಾಯಕ್ಕೆ ಸಂವಿಧಾನ ಬದ್ಧ ಒಳ ಮೀಸಲಾತಿ ಹಕ್ಕು ಜಾರಿಗೊಳಿಸಬೇಕು ಎಂದು ಮಾಜಿ ಸಂಸದ ಎ.ನಾರಾಯಣಸ್ವಾಮಿ ಒತ್ತಾಯಿಸಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಆದಿ ಜಾಂಬವ ಮಾದಿಗ ಸಮಾಜ ಸೇವಾ ಸಂಘದ ವತಿಯಿಂದ ನೂತನವಾಗಿ ಆಯ್ಕೆಯಾಗಿರುವ ನಿಗಮ, ಮಂಡಳಿ ಅಧ್ಯಕ್ಷರುಗಳಿಗೆ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದೇಶದಲ್ಲಿನ ಪ್ರತಿ ರಾಷ್ಟ್ರೀಯ ಪಕ್ಷಗಳು ಒಳಮೀಸಲಾತಿ ಆಮಿಷಯೊಡ್ಡಿ ಮಾದಿಗ ಸಮಾಜವನ್ನು ಮತ ಬ್ಯಾಂಕ್ ಗಳನ್ನಾಗಿ ಪರಿವರ್ತಿಸಿಕೊಂಡಿವೆ. ಒಳ ಮೀಸಲಾತಿ ಹೋರಾಟದ ಸಂದರ್ಭದಲ್ಲಿ ಯಾವೊಬ್ಬ ರಾಜಕಾರಣಿಗಳೂ ಬೆನ್ನೆಲು ಬಾಗಿ ನಿಂತು ಧ್ವನಿಯಾಗದೇ ತಾತ್ಸಾರ ಮಾಡಿರುವುದು ಮಾದಿಗ ಸಮಾಜದ ದುರಂತ ಎಂದು ಬೇಸರ ವ್ಯಕ್ತಪಡಿಸಿದರು.

ಮಾದಿಗ ಸಮಾಜದ ನ್ಯಾಯಕ್ಕಾಗಿ ರಾಜಕೀಯ ಅಧಿಕಾರದ ಕುರ್ಚಿ ತೊರೆದಿರುವೆ. ದಕ್ಷಿಣ ಭಾರತದ ಎಲ್ಲಾ ಮೀಸಲಾತಿ ಆಯೋಗಗಳನ್ನು ಒಗ್ಗೂಡಿಸಿ, ಛಲದಿಂದ ಹೋರಾಟಕ್ಕೆ ಸಿದ್ದನಾಗಿದ್ದು, ಮಾದಿಗ ಸಮಾಜ ಜಾಗೃತವಾಗಿ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಆದಿಜಾಂಬವ ಅಭಿವೃದ್ದಿ ನಿಗಮದ ಅಧ್ಯಕ್ಷ ಜಿ.ಎಸ್. ಮಂಜುನಾಥ್ ಸನ್ಮಾನ ಸ್ವೀಕರಿಸಿ ಮಾತನಾಡುತ್ತಾ, ರಾಜ್ಯದಲ್ಲಿ ಮಾದಿಗ ಸಮಾಜದಲ್ಲಿ ಅಸಹಿಷ್ಣುತೆ ಬಾಂಧವ್ಯದ ಕೊರತೆಯಿಂದ ರಾಜಕೀಯ ಅಧಿಕಾರ ಸಿಗುತ್ತಿಲ್ಲ.

ಒಗ್ಗಟ್ಟಿನ ಶಕ್ತಿಯಿದ್ದರೂ ಹೊಂದಾಣಿಕೆಯಿಲ್ಲದ ಕಾರಣ ಯಾವುದೇ ಪಕ್ಷವಾಗಲೀ ಮಾದಿಗರ ಕುರಿತು ಅಸಡ್ಡೆ ಮನೋಭಾವ ತೋರುತ್ತಿವೆ. ಸೈದ್ಧಾಂತಿಕ ಸಂಘಟನಾತ್ಮಕ ಹಿನ್ನಡೆಯಿಂದ ರಾಜಕೀಯ ಶಕ್ತಿ ಕುಂಠಿತಗೊಳ್ಳುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ದೇಶವ್ಯಾಪಿ ಮಾದಿಗ ಸಮಾಜದಲ್ಲಿ 6000 ಸಂಘಟನೆಗಳು ಮುಂಚೂಣಿ ಯಲ್ಲಿದ್ದರೂ ನಾಯಕರ ಮಧ್ಯೆ ಸಾಮರಸ್ಯತೆಯಿಲ್ಲ. ಪಕ್ಷಾತೀತವಾಗಿ ಒಗ್ಗಟ್ಟಿನ ಪ್ರದರ್ಶನದ ಅಗತ್ಯವಿದೆ. ಅಂಬೇಡ್ಕರ್, ಬಾಬು ಜಗಜೀವನ್ ರಾಮ್ ಅವರ ಆದರ್ಶಗಳಡಿ ಮಾದಿಗ ಸಮಾಜ ರೂಪುಗೊಂಡರೆ ಮಾತ್ರ ಸಮಾಜದ ಅಭಿವೃದ್ಧಿ ಸಾಧ್ಯ ಎಂದರು.

ಶಾಸಕ ಬಿ.ದೇವೇಂದ್ರಪ್ಪ ಮಾತನಾಡಿ, ತಳಸಮುದಾಯಗಳು ಡಾ.ಬಿ.ಆರ್.ಅಂಬೇಡ್ಕರ್ ಅವರು ಕಲ್ಪಿಸಿದ ಸಂವಿಧಾನ ಬದ್ದ ಹಕ್ಕುಗಳ ಸದುಪಯೋಗ ಪಡೆದುಕೊಂಡು ಶಿಕ್ಷಣದೊಂದಿಗೆ ಮುಖ್ಯವಾಹಿನಿಗೆ ಬರಬೇಕಿದೆ. ಶಿಕ್ಷಣದಿಂದ ಮಾತ್ರ ಸಮಾಜದ ಅಭಿವೃದ್ದಿ ಸಾಧ್ಯ ಎಂದರು.

ಹಿರಿಯೂರು ಆದಿಜಾಂಬವ ಪೀಠದ ಷಡಕ್ಷರಿ ಮುನಿ ಸ್ವಾಮಿಜಿ ಸಾನ್ನಿಧ್ಯ ವಹಿಸಿ ಮಾತನಾಡಿದರು. ಸಂದರ್ಭದಲ್ಲಿ ಬ್ರಾಹ್ಮಣ ಅಭಿವೃದ್ದಿ ನಿಗಮದ ಅಧ್ಯಕ್ಷ ಅಸಗೋಡು ಜಯಸಿಂಹ, ಮಾಜಿ ಶಾಸಕರಾದ ಎಸ್.ವಿ.ರಾಮಚಂದ್ರ, ಎಚ್.ಪಿ.ರಾಜೇಶ್, ಕಾಂಗ್ರೆಸ್ ಮುಖಂಡರಾದ ಕೆ.ಪಿ. ಪಾಲಯ್ಯ, ಷಂಷೀರ್ ಅಹಮ್ಮದ್, ಮಾದಿಗ ಸಮಾಜದ ಮುಖಂಡರಾದ ಪಲ್ಲಾಗಟ್ಟೆ ಶೇಖರಪ್ಪ, ಶಂಭುಲಿಗಪ್ಪ, ಶಿವಕುಮಾರ್, ಪೂಜಾರ ಮರಿಯಪ್ಪ, ಸತೀಶ್, ಹಾಲೇಶ್, ಕುಬೇರಪ್ಪ, ಹೊನ್ನೂರಪ್ಪ, ಪಿ.ಮಂಜುನಾಥ್, ಪೂಜಾರ ಸಿದ್ದಪ್ಪ, ವಕೀಲ ಹನುಮಂತಪ್ಪ, ಎಚ್. ಆರ್.ಬಸವರಾಜ್, ಕುಬೇಂದ್ರಪ್ಪ ಮುಂತಾದವರು ಇದ್ದರು.

## ನಗರದಲ್ಲಿ ಇಂದು ನಿವೃತ್ತ ನೌಕರರಿಂದ ಕಪ್ಪು ಪಟ್ಟಿ ಧರಿಸಿ ಧರಣಿ ಸತ್ಯಾಗ್ರಹ

ದಾವಣಗೆರೆ, ಸೆ. 30- ಕರ್ನಾಟಕ ನಿವೃತ್ತ ನೌಕರರ ವೇದಿಕೆ ವತಿಯಿಂದ ವಿಶ್ವ ಹಿರಿಯ ನಾಗರಿಕರ ದಿನಾಚರಣೆಯಂದು ನಾಳೆ ದಿನಾಂಕ 1 ರಂದು ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ನಿವೃತ್ತ ನೌಕರರಿಂದ ಕಪ್ಪು ಪಟ್ಟಿ ಧರಿಸಿ ಒಂದು ದಿನದ ಸಾಂಕೇತಿಕ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ ಎಂದು ವೇದಿಕೆ ರಾಜ್ಯ ಮಹಾಪ್ರಧಾನ ಸಂಚಾಲಕ ಎಂ.ಪಿ.ಎಂ. ಷಣ್ಮುಖಯ್ಯ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ರಾಜ್ಯದಾದ್ಯಂತ ಏಕಕಾಲಕ್ಕೆ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ನಾಳೆ ದಿನಾಂಕ 1 ರಂದು ಬೆಳಿಗ್ಗೆ 10.30 ರಿಂದ ಸಂಜೆ 6 ರವರೆಗೆ ಸಾಂಕೇತಿಕವಾಗಿ ಧರಣಿ ಸತ್ಯಾಗ್ರಹ ನಡೆಸಲಾಗುವುದು ಎಂದು ಅವರು ಹೇಳಿದರು.

2022 ಜುಲೈ 1 ರಿಂದ 2024 ಜುಲೈ 31 ರ ಅವಧಿಯಲ್ಲಿ ನಿವೃತ್ತರಾದ ನೌಕರರಾಗಿದ್ದು, ನಮಗೆ 6ನೇ ವೇತನ ಆಯೋಗದ ಲೆಕ್ಕಾಚಾರದ ಅನುಸಾರ ಡಿಸಿಆರ್‌ಜಿ ಕಮ್ಯುಟೇಶನ್, ಗಳಿಕೆ ರಜೆ ನಗದೀಕರಣಗಳ ನಿವೃತ್ತಿ ಆರ್ಥಿಕ ಸೌಲಭ್ಯವನ್ನು ನೀಡಬೇಕೆಂದು ಆಗ್ರಹಿಸಿ ಈಗಾಗಲೇ ರಾಜ್ಯದ ಎಲ್ಲಾ ಜಿಲ್ಲಾ ಉಸ್ತುವಾರಿ ಸಚಿವರು, ಎಲ್ಲಾ ಕ್ಷೇತ್ರಗಳ ಶಾಸಕರು, ಎಲ್ಲಾ ಜಿಲ್ಲಾಧಿಕಾರಿಗಳ ಹಾಗೂ ಎಲ್ಲಾ ತಹಶೀಲ್ದಾರ್‌ಗಳ ಮುಖಾಂತರ ನೂರಾರು ನಿವೃತ್ತ ನೌಕರರು ಮನವಿಯನ್ನು ರಾಜ್ಯದ ಮುಖ್ಯಮಂತ್ರಿಗಳಿಗೆ ಸಲ್ಲಿಸಲಾಗಿದ್ದರೂ ಯಾವುದೇ ಪ್ರಯೋಜನ ಆಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಇದೇ ತಿಂಗಳು 18 ರಂದು ರಾಜ್ಯದ 12 ಸಾವಿರ ನಿವೃತ್ತ ನೌಕರರ ರಾಜ್ಯಮಟ್ಟದ ಬೃಹತ್ ಪ್ರತಿಭಟನಾ ಸಮಾವೇಶವನ್ನು ವಿಶ್ರಾಂತ ನ್ಯಾಯಮೂರ್ತಿ ಸಂತೋಷ್ ಹೆಗಡೆ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಕ್ಷರಿ, ಕರ್ನಾಟಕ ರಾಜ್ಯ ನಿವೃತ್ತ ನೌಕರರ ಸಂಘದ ರಾಜ್ಯಾ ಧ್ಯಕ್ಷ ಡಾ. ಎಲ್. ಭೈರಪ್ಪ ಅವರುಗಳ ಸಮ್ಮುಖದಲ್ಲಿ ನಮಗೆ ಆಗಿರುವ ಅನ್ಯಾಯದ ಕುರಿತು ರಾಜ್ಯದ ಮುಖ್ಯಮಂತ್ರಿಗಳಿಗೆ, ಉಪಮುಖ್ಯಮಂತ್ರಿಗಳಿಗೆ ನೀಡಲಾಗಿದ್ದರೂ ಸ್ಪಂದಿಸುತ್ತಿಲ್ಲ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ರಾಜ್ಯ ಸಂಚಾಲಕ ಕೆ. ಹೆಚ್. ಮಂಜುನಾಥ್ ರೆಡ್ಡಿ, ಕೆ. ಶಿವಶಂಕರ್, ಡಿ. ಆನಂದಪ್ಪ, ಜಿಲ್ಲಾ ಸಂಚಾಲಕರಾದ ಎಂ.ವಿ. ಹೊರಕೇರಿ, ಎ.ಕೆ. ಭೂಮೇಶ್, ಎಸ್.ಎನ್. ಗಂಗಪ್ಪಳವರ್, ಹೆಚ್. ಗುರಪ್ಪ, ಅರ್ಜುನಪ್ಪ, ಡಿ. ತಿಪ್ಪೇಸ್ವಾಮಿ, ಜಿ.ಎಸ್. ನಾಗರಾಜ್ ಉಪಸ್ಥಿತರಿದ್ದರು.

## ಲಯನ್ಸ್ ಕ್ಲಬ್‌ನಿಂದ ಇಂಜಿನಿಯರ್ಸ್ ದಿನಾಚರಣೆ



ದಾವಣಗೆರೆ, ಸೆ. 30 - ಲಯನ್ಸ್ ಕ್ಲಬ್ ಭವನದಲ್ಲಿ ಲಯನ್ಸ್ ಕ್ಲಬ್ ವತಿಯಿಂದ ಸರ್ ಎಂ ವಿಶ್ವೇಶ್ವರಯ್ಯ ನವರ ಜನ್ಮ ದಿನಾಚರಣೆಯ ಅಂಗವಾಗಿ ಇಂಜೀನಿಯರ್ಸ್‌ಗಳಿಗೆ ಸನ್ಮಾನ ಸಮಾರಂಭ ಏರ್ಪಡಿಸಲಾಗಿತ್ತು.

ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್.ಜಿ. ಉಳವಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಡಾ. ಬಿ.ಎಸ್. ನಾಗಪ್ರಕಾಶ್, ಪ್ರಾಂತೀಯ ಅಧ್ಯಕ್ಷ ವೈ.ಬಿ. ಸತೀಶ್ ಆಗಮಿಸಿದ್ದರು.

ಇದೇ ಸಂದರ್ಭದಲ್ಲಿ ನಗರದ ಇಂಜಿನಿಯರ್‌ಗಳಾದ ಬಿ.ಹೆಚ್. ಶಿವಕುಮಾರ್, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹಾಗೂ ಇಂಜಿನಿಯರ್ ದಿನೇಶ್ ಶೆಟ್ಟಿ, ಹೆಚ್.ವಿ.ಮಂಜುನಾಥ್ ಸ್ವಾಮಿ, ಎ.ಬಿ. ಪ್ರತಾಪ್, ಎಂ.ಎಸ್. ಉದಯ್ ಕುಮಾರ್, ಆರ್. ವೆಂಕಟರೆಡ್ಡಿ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಲಯನ್ಸ್ ಕಾರ್ಯದರ್ಶಿ ಅಜಯ್ ನಾರಾಯಣ್ ವಿಶ್ವೇಶ್ವರಯ್ಯ ನವರ ಬದುಕು ಮತ್ತು ಸಾಧನೆ ಎಂಬ ವಿಷಯವಾಗಿ ಉಪನ್ಯಾಸ ನೀಡಿ, ವಿಶ್ವೇಶ್ವರಯ್ಯ ನವರ ಬದುಕು ಇಂದಿನ ಪೀಳಿಗೆಗೆ ದಾರಿದೀಪ ಎಂದರು ಮತ್ತು ವಿಶ್ವೇಶ್ವರಯ್ಯ ನವರ ವೈಶಿಷ್ಟ್ಯಪೂರ್ಣ ಸಾಧನೆಯ ಮಜಲುಗಳನ್ನು ಕೊಂಡಾಡಿದರು.

ಹೆಚ್.ವಿ. ಮಂಜುನಾಥ ಸ್ವಾಮಿ ಕಾರ್ಯಕ್ರಮ ನಿರೂಪಿಸಿದರು. ಖಜಾಂಚಿ ಎಸ್. ನಾಗರಾಜ್, ಸಹ ಕಾರ್ಯದರ್ಶಿ ಹೆಚ್.ಎಂ. ನಾಗರಾಜ್ ಮತ್ತು ಇತರರು ಸಮಾರಂಭದಲ್ಲಿ ಉಪಸ್ಥಿತರಿದ್ದರು.


## ಷಡ್ಯಂತ್ರದಿಂದ ನೊಂದು ನಿವೇಶನ ವಾಪಸ್ : ಸಿಎಂ ಸಿದ್ದರಾಮಯ್ಯ

**(1ನೇ ಪುಟದಿಂದ)** ದ್ದಾರೆ. ನನ್ನ ವಿರುದ್ದ ರಾಜಕೀಯ ದ್ವೇಷ ಸಾಧನೆಗಾಗಿ ವಿರೋಧ ಪಕ್ಷಗಳು ಸುಳ್ಳು ದೂರನ್ನು ಸೃಷ್ಟಿಸಿ ನನ್ನ ಕುಟುಂಬವನ್ನು ವಿವಾದಕ್ಕೆ ಎಳೆದು ತಂದಿರುವುದು ರಾಜ್ಯದ ಜನತೆಗೂ ತಿಳಿದಿದೆ ಎಂದು ಹೇಳಿದ್ದಾರೆ.

ಈ ಅನ್ಯಾಯಕ್ಕೆ ತಲೆಬಾಗದೆ ಹೋರಾಟ ಮಾಡಬೇಕೆಂಬುದು ನನ್ನ ನಿಲುವಾಗಿತ್ತು. ಆದರೆ ನನ್ನ ವಿರುದ್ಧ ನಡೆಯುತ್ತಿರುವ ರಾಜಕೀಯ ಷಡ್ಯಂತ್ರದಿಂದ ನೊಂದಿರುವ ನನ್ನ ಪತ್ನಿ ಈ ನಿವೇಶನಗಳನ್ನು ಹಿಂದಿರುಗಿಸುವ ನಿರ್ಧಾರ ಕೈಗೊಂಡು, ನನಗೂ ಆಶ್ಚರ್ಯ ಉಂಟು ಮಾಡಿದ್ದಾರೆ ಎಂದು ತಿಳಿಸಿದ್ದಾರೆ.

ನನ್ನ ನಾಲ್ಕು ದಶಕಗಳ ಸುದೀರ್ಘ ರಾಜಕಾರಣದಲ್ಲಿ ಎಂದೂ ಕೂಡಾ ಮಧ್ಯೆ ಪ್ರವೇಶಿಸದೇ ಕುಟುಂಬಕ್ಕಷ್ಟೇ ಸೀಮಿತವಾಗಿದ್ದ ನನ್ನ ಪತ್ನಿ, ನನ್ನ ವಿರುದ್ಧದ ದ್ವೇಷದ ರಾಜಕಾರಣಕ್ಕೆ ಬಲಿಯಾಗಿ ಮಾನಸಿಕವಾಗಿ ಹಿಂಸೆ ಅನುಭವಿಸುವಂತಾಗಿರುವುದಕ್ಕೆ ವಿಷಾದ ಇದೆ. ಹೀಗಿದ್ದರೂ ನಿವೇಶನಗಳನ್ನು ಹಿಂದಿರುಗಿಸಿದ ನನ್ನ ಪತ್ನಿಯ ನಿರ್ಧಾರವನ್ನು ನಾನು ಗೌರವಿಸುತ್ತೇನೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

## ಗಾಂಧೀಜಿ ಜಯಂತಿ : ಬಾಪೂಜಿ ಪ್ರಬಂಧ ಸ್ಪರ್ಧೆ



ದಾವಣಗೆರೆ, ಸೆ. 30 - ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಗಾಂಧೀಜಿಯವರ 155ನೇ ಜಯಂತಿ ಅಂಗವಾಗಿ ಪ್ರೌಢಶಾಲಾ, ಪದವಿ ಪೂರ್ವ ಹಾಗೂ ಪದವಿ ವಿಭಾಗದ ವಿದ್ಯಾರ್ಥಿಗಳಿಗೆ 'ಬಾಪೂಜಿ' ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಿ ವಿಜೇತರನ್ನು ಆಯ್ಕೆ ಮಾಡಲಾಗಿದೆ.

ವಿಜೇತರಿಗೆ ನಾಡಿದ್ದು ದಿನಾಂಕ 2 ರಂದು ಬೆಳಿಗ್ಗೆ 9ಕ್ಕೆ ರಾಮನಗರದಲ್ಲಿನ ಗಾಂಧಿ ಭವನದಲ್ಲಿ ನಡೆಯುವ ಗಾಂಧಿ ಜಯಂತಿಯಂದು ವಿಜೇತರಿಗೆ ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರ ನೀಡಲಾಗುತ್ತದೆ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ತಿಳಿಸಿದ್ದಾರೆ.

ಇಂದಿನ ಯುವ ಪೀಳಿಗೆಯಲ್ಲಿ ಗಾಂಧಿ ವಿಚಾರ ಧಾರೆಗಳು ಹಾಗೂ ಚಿಂತನೆಗಳನ್ನು ಬೆಳೆಸುವುದು ಪ್ರಬಂಧ ಸ್ಪರ್ಧೆಯ ಉದ್ದೇಶವಾಗಿದ್ದು, ವಿಜೇತರಿಗೆ ನಗದು ಬಹುಮಾನವಾಗಿ ಪ್ರಥಮ ರೂ. 3000, ದ್ವಿತೀಯ ರೂ. 2000 ಹಾಗೂ ತೃತೀಯ ರೂ. 1000 ನಗದು ಮತ್ತು ಪ್ರಶಸ್ತಿ ಪತ್ರ ನೀಡಲಾಗುತ್ತದೆ.

**ವಿಜೇತರ ವಿವರ ;** ಪ್ರೌಢ ಶಾಲಾ ವಿಭಾಗ, ದಾವಣಗೆರೆ ತಾ. ಮೆಳ್ಳೇಕಟ್ಟೆ ಸರ್ಕಾರಿ ಪ್ರೌಢಶಾಲೆ 10ನೇ ತರಗತಿ ಧನುಷ್ ಬಿ.ಎನ್. ಪ್ರಥಮ, ಜಗಳೂರು ತಾ. ದೊಣೆಹಳ್ಳಿ ಸರ್ಕಾರಿ ಪ್ರೌಢ ಶಾಲೆಯ 9ನೇ ತರಗತಿಯ ಕೆ.ಆರ್. ಕಾವ್ಯ ದ್ವಿತೀಯ, ದಾವಣಗೆರೆ ತಾ. ಕಬ್ಬೂರು ಸರ್ಕಾರಿ ಪ್ರೌಢ ಶಾಲೆ 10ನೇ ತರಗತಿ ಬಿಂದುಶ್ರೀ ತೃತೀಯ ಸ್ಥಾನ ಪಡೆದಿದ್ದಾರೆ.


**ಪದವಿ ಪೂರ್ವ ಶಿಕ್ಷಣ ವಿಭಾಗ;** ದಾವಣಗೆರೆ ಅಂಜುಂ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಕಲಾ ವಿಭಾಗದ ಪ್ರಥಮ ಪಿಯುಸಿ ಕೈಫಿಯಾ ಮಸ್ರೂರ್ ಪ್ರಥಮ, ಇದೇ ಕಾಲೇಜಿನ ದ್ವಿತೀಯ ಪಿ.ಯು.ಸಿ ವಿಜ್ಞಾನ ವಿಭಾಗದ ರಬಿಯಾ ಬಸ್ರಿ ದ್ವಿತೀಯ, ಮೋತಿ ವೀರಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪಿ.ಯು.ಸಿ.ಯ ಗುರುಕೀರ್ತಿ ಎಂ.ಹೆಚ್. ತೃತೀಯ ಸ್ಥಾನ ಪಡೆದಿದ್ದಾರೆ.

**ಪದವಿ ವಿಭಾಗ;** ದಾವಣಗೆರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ತೃತೀಯ ಬಿ.ಕಾಂ. ಹನುಮಂತ ನಾಯಕ್ ಡಿ. ಪ್ರಥಮ, ತೃತೀಯ ಬಿ.ಎಸ್ಸಿ ವಿನುತ ಎಂ. ದ್ವಿತೀಯ, ಬಿ.ಎ.ಕೆ. ಸುದೀಪ್ ತೃತೀಯ ಸ್ಥಾನ ಪಡೆದಿದ್ದಾರೆ.

## ಮಲೇಬೆನ್ನೂರಿನಲ್ಲಿ ಇಂದು ಪುರಸಭೆ ಸಭೆ

ಪುರಸಭೆಯ ಸಭಾಂಗಣದಲ್ಲಿ ಇಂದು ಬೆಳಗ್ಗೆ 11 ಗಂಟೆಗೆ ಪುರಸಭೆ ಪ್ರಭಾರಿ ಅಧ್ಯಕ್ಷರಾದ ಶ್ರೀಮತಿ ನಫ್ಸಿಯಾ ಬಾನು ಚಮನ್ ಷಾ ಅವರ ಅಧ್ಯಕ್ಷತೆಯಲ್ಲಿ ಪುರಸಭೆಯ ಸಾಮಾನ್ಯ ಸಭೆಯನ್ನು ಕರೆಯಲಾಗಿದೆ ಎಂದು ಮುಖ್ಯಾಧಿಕಾರಿ ಭಜಕ್ಕನವರ್ ತಿಳಿಸಿದ್ದಾರೆ.

### ಕೊಮಾರನಹಳ್ಳಿ ಗ್ರಾಮದ ಚಂದಣ್ಣರ ಯಲ್ಲಪ್ಪ ನಿಧನ



ಹರಿಹರ ತಾಲ್ಲೂಕಿನ ಕೊಮಾರನಹಳ್ಳಿ ಗ್ರಾಮದ ಮುಖಂಡರೂ, ಶ್ರೀ ಬಸವೇಶ್ವರ ನೀರು ಬಳಕೆದಾರರ ಸಹಕಾರ ಸಂಘದ ನಿರ್ದೇಶಕರೂ ಆದ **ಚಂದಣ್ಣರ ಯಲ್ಲಪ್ಪ (88 ವರ್ಷ)** ಇವರು ದಿನಾಂಕ 30.9.2024ರ ಸೋಮವಾರ ಮಧ್ಯಾಹ್ನ 1.45ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 01.10.2024ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಕೊಮಾರನಹಳ್ಳಿ ಗ್ರಾಮದ ರುದ್ರಭೂಮಿಯಲ್ಲಿ ನರವೇರಲಿದೆ.

**ದುಃಖತಪ್ತರು : ಶ್ರೀಮತಿ ಹನುಮಮ್ಮ ಚಂದಣ್ಣರ ಯಲ್ಲಪ್ಪ, ಶ್ರೀಮತಿ ಮಂಜುಳಾ, ಚಂದಣ್ಣರ ರಂಗಪ್ಪ • ಶ್ರೀಮತಿ ದಾಕ್ಷಾಯಣಮ್ಮ ರಾಜಪ್ಪ ಯಕ್ಕನಹಳ್ಳಿ. ಮತ್ತು ಮೊಮ್ಮಕ್ಕಳು, ಚಂದಣ್ಣರ ವಂಶಸ್ಥರು ಹಾಗೂ ಗ್ರಾಮಸ್ಥರು, ಕೊಮಾರನಹಳ್ಳಿ.**

### ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ಮಂಜುನಾಥ ಪೌಲ್ಟ್ರಿ ಫಾರಂ ಮಾಲೀಕರು, ನಮ್ಮ ಹಿತೈಷಿಗಳು, ಮಾರ್ಗದರ್ಶಕರು, ಹಿರಿಯರೂ ಆದ

**ಎನ್. ಪೂರ್ಣಚಂದ್ರರಾವ್**

ಇವರು ದಿನಾಂಕ : 30.09.2024 ರಂದು ವೈಕುಂಠವಾಸಿಗಳಾಗಿದ್ದು, ಇವರ ಅಗಲಿಕೆಯಿಂದ ನಮಗೆ, ನಮ್ಮ ಸಮಾಜಕ್ಕೆ ತುಂಬಾ ನಷ್ಟವಾಗಿದೆ. ಶ್ರೀಯುತರ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಎಂದು ಪ್ರಾರ್ಥಿಸುವರು.

**ದುಃಖತಪ್ತರು : ದಿನೇಶ್ & ಕೋ, ದಿನೇಶ್ ಮತ್ತು ಕುಟುಂಬ, ಮಧು, ಡಾ. ಎಂ.ಎಸ್. ಮಲ್ಲಿಕಾರ್ಜುನ, ಎಲ್.ಸಿ. ಮಸ್ತಾನ್ ರೆಡ್ಡಿ**

**ಮೊ : 94481 80019**

# ಶಿಕ್ಷಣದ ಜೊತೆಗಿನ ಸಂಸ್ಕಾರವೇ ಗುಣಮಟ್ಟದ ಶಿಕ್ಷಣ

**ಹೊಸದುರ್ಗ ಭಗೀರಥ ಪೀಠದ ಡಾ. ಪುರುಷೋತ್ತಮಾನಂದಪುರಿ ಸ್ವಾಮೀಜಿ**



**ಹರಪನಹಳ್ಳಿ**

ಹರಪನಹಳ್ಳಿ, ಸೆ.30- ಸಂಸ್ಕಾರವನ್ನು ಹೊಂದಿರು ವುದೇ ಗುಣ ಮಟ್ಟದ ಶಿಕ್ಷಣ ಎಂದು ಹೊಸದುರ್ಗ ಭಗೀರಥ ಪೀಠದ ಡಾ.ಪುರುಷೋತ್ತಮಾ ನಂದಪುರಿ ಸ್ವಾಮೀಜಿ ಹೇಳಿದರು.

ಪಟ್ಟಣದ ವಾಸವಿ ಕಲ್ಯಾಣ ಮಂಟಪದಲ್ಲಿ ತಾಲ್ಲೂಕು ಉಪ್ಪಾರ ನೌಕರರ ಸಂಘದ ವತಿಯಿಂದ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಬಡ್ತಿ ಹಾಗೂ ನಿವೃತ್ತಿ ಹೊಂದಿದ ನೌಕರರಿಗೆ ನೀಡಲಾದ ಸನ್ಮಾನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಜ್ಞಾನವನ್ನು ಒಂದು ಸಾರಿ ಪಡೆದುಕೊಂಡರೆ, ಬಂಡೆಗಲ್ಲಿನ ಹಾಗೆ ಅದು ಗಟ್ಟಿ ಆಗುತ್ತದೆ, ನಾವು ಇರುವವರೆಗೂ ನಮ್ಮ ಜೊತೆಗಿರುತ್ತದೆ, ವಿದ್ಯೆ ಪಡೆದ ಜ್ಞಾನಿಗಳು ಎಲ್ಲರಿಂದಲೂ ಗೌರವ ಪ್ರೀತಿಗೆ ಪಾತ್ರರಾಗುತ್ತಾರೆ ಎಂದು ಹೇಳಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್. ಲೇಪಾಕ್ಷಪ್ಪ ವಿಶೇಷ ಉಪನ್ಯಾಸ ನೀಡಿ, ಇದು ಸ್ಫೂರ್ತಿ ನೀಡುವಂತಹ ಕಾರ್ಯಕ್ರಮವಾಗಿದ್ದು, ನಾವು ವಿಚಾರ ವಂತರು, ಬುದ್ಧಿವಂತರು ಮತ್ತು ಸೃಜನಶೀಲರಾದಾಗ ಮಾತ್ರ ಸುಸಜ್ಜಿತ ಸಮಾಜ ನಿರ್ಮಾಣವಾಗುತ್ತದೆ ಎಂದರು.

ರಾಜ್ಯ ಉಪ್ಪಾರ ನೌಕರರ ಸಂಘದ ಅಧ್ಯಕ್ಷ ಎಸ್. ಎನ್. ಚಂದ್ರಪ್ಪ ಮಾತನಾಡಿ, ಪ್ರತಿ ವರ್ಷ ನಾನು ಉಪ್ಪಾರ ಸಮಾಜದ ಬಡ ಮಕ್ಕಳಿಗೆ 1 ಲಕ್ಷ ರೂ. ಗಳಷ್ಟು ಪುಸ್ತಕಗಳನ್ನು ನೀಡುತ್ತಿದ್ದೇನೆ ಎಂದರು.

ಡಾ. ಉಮೇಶ್ ಬಾಬು ಅವರು ತಾಲೂಕು ಉಪ್ಪಾರ ನೌಕರರ ಸಂಘಕ್ಕೆ 50ಸಾವಿರ ರೂ.ಗಳ ಚೆಕ್ಕನ್ನು ನೀಡಿದರು.ಜಿಲ್ಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಸವರಾಜ್ ಸಂಗಪ್ಪನವರ ಮಾತನಾಡಿ. ತಬ್ಬಲಿ ಸಮುದಾಯ ಗಳು ಶಿಕ್ಷಣ ಸಂಘಟನೆ ಹೋರಾಟದ ಮೂಲಕ ಮುಖ್ಯ ವಾಹಿನಿಗೆ ಬರಬೇಕು ಎಂದರು.

ನೌಕರ ಸಂಘದ ಅಧ್ಯಕ್ಷ ಕೆ. ಅಂಜನಪ್ಪ, ಸಾರಿಗೆ ಘಟಕದ ವ್ಯವಸ್ಥಾಪಕರಾದ ಎಂ. ಮಂಜುಳಾ, ಉಪ್ಪಾರ ಸಮಾಜದ ಅಧ್ಯಕ್ಷ ಟಿ. ತಿಮ್ಮಪ್ಪ, ಕೆ ತಿಮ್ಮಪ್ಪ, ಸವಿತಾ ಎಂ, ಪಿ. ಗಣೇಶ, ಅಂಜಿನಪ್ಪ, ಪಿ. ಸುಮಾ, ಬಸವರಾಜ್ ಸಂಗಪ್ಪನವರು, ಕಾಡಜ್ಜಿ ಮಂಜುನಾಥ, ಎಸ್. ರಾಮಪ್ಪ, ಶಿಕ್ಷಕರ ಸಂಘದ ಅಧ್ಯಕ್ಷ ಬಿ. ರಾಜಶೇಖರ್, ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಬಿ. ಚಂದ್ರಮೌಳಿ, ಸುಭದ್ರಮ್ಮ, ಕೆ. ಶೈಲಜಾ, ಕಬ್ಬಳ್ಳಿ ಗೀತಾ, ಗಿರಿಜಾ, ಲಕ್ಷ್ಮಿ ದೇವಿ, ನಾಗರಾಜ್ ಯು, ಹುಚ್ಚಪ್ಪ ಬಣಕಾರ್, ಬಸವರಾಜ, ರಾಮಚಂದ್ರಪ್ಪ, ಪ್ರಕಾಶ ಮತ್ತಿತರರು ಉಪಸ್ಥಿತರಿದ್ದರು.

## ದುಷ್ಕರ್ಮಿಗಳನ್ನು ಬಂಧಿಸಲು ಮಡಿವಾಳ ಸಮಾಜದ ಒತ್ತಾಯ

ದಾವಣಗೆರೆ, ಸೆ.30- ಚನ್ನಗಿರಿ ತಾಲ್ಲೂಕು ಸಾರಥಿ ಗ್ರಾಮದ ಮಡಿವಾಳರ ಅಣ್ಣಪ್ಪ ಎಂಬುವವನಿಗೆ ಚಾಕು ಇರಿದ ದುಷ್ಕರ್ಮಿಗಳನ್ನು ಕೂಡಲೇ ಬಂಧಿಸಬೇಕು. ಇಲ್ಲವಾದಲ್ಲಿ ನಗರದ ಎಸ್ಪಿ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಗುವುದು ಎಂದು ಜಿಲ್ಲಾ ಮಡಿವಾಳರ ಸಂಘದ ಅಧ್ಯಕ್ಷ ಯರಬಳ್ಳಿ ಉಮಾಪತಿ ಹೇಳಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೆ.12 ರಂದು ಅಣ್ಣಪ್ಪ ಎಂದಿನಂತೆ ಕೆಲಸ ಮುಗಿಸಿಕೊಂಡು ತನ್ನ ಸ್ನೇಹಿತ ಸುನೀಲ್‌ನನ್ನು ಕರೆದುಕೊಂಡು ಹತ್ತಿರದ ಕೆ. ಗಾಣದಕಟ್ಟೆ ಗ್ರಾಮಕ್ಕೆ ಆಳು ಬಟವಾಡಿ ಮಾಡಿ ಬರುವಾಗ, ಅಣ್ಣಪ್ಪನ ಮೇಲೆ ಕ್ಷುಲ್ಲಕ ಕಾರಣಕ್ಕಾಗಿ ರಾಕೇಶ್ ಎಂಬಾತ ಚಾಕುವಿನಿಂದ ಹಲ್ಲೆ ಮಾಡಿದ್ದಾನೆ ಎಂದು ಆರೋಪಿಸಿದರು.

ಸಂಘದ ಪದಾಧಿಕಾರಿಗಳಾದ ಕೆ.ಎಚ್. ಗುಡ್ಡಪ್ಪ, ಲೋಕೇಶಪ್ಪ, ಮಹಾಂತೇಶ್, ಹಾಲಸ್ವಾಮಿ, ಮಂಜಪ್ಪ ಸಾರಥಿ, ಮೈಲಾರಪ್ಪ, ನಾಗರಾಜ ಸೇರಿದಂತೆ ಇತರರು ಸುದ್ದಿಗೋಷ್ಠಿಯಲ್ಲಿದ್ದರು.

## ಮುಡಾ ದೂರುದಾರ ವಿರುದ್ಧ ಬೆದರಿಕೆ

ಮೈಸೂರು, ಸೆ. 30 - ಮುಡಾ ವಿವಾದಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ದೂರು ದಾಖಲಿಸಿರುವ ಸ್ನೇಹಮಯಿ ಕೃಷ್ಣ ವಿರುದ್ಧ ಮಹಿಳೆಗೆ ಬೆದರಿಕೆ ಹಾಕಿದ ಆರೋಪದ ಮೇಲೆ ಪ್ರಕರಣ ದಾಖಲಿಸಲಾಗಿದೆ. ಮೈಸೂರು ಜಿಲ್ಲೆಯ ನಂಜನಗೂಡಿನ 30 ವರ್ಷದ ಮಹಿಳೆ ಪೊಲೀಸರಲ್ಲಿ ದೂರು ದಾಖಲಿಸಿದ್ದಾರೆ.

ತನ್ನ ಅತ್ತೆ - ಮಾವಂದಿರ ಜೊತೆಗಿನ ಆಸ್ತಿ ವಿವಾದಕ್ಕೆ ಸಂಬಂಧಿಸಿದಂತೆ ಸ್ನೇಹಮಯಿ ಕೃಷ್ಣ ಜುಲೈ 18ರಂದು ಬೆದರಿಕೆ ಹಾಕಿರುವುದಾಗಿ ಮಹಿಳೆ ದೂರು ನೀಡಿದ್ದಾರೆ. ಈ ಬಗ್ಗೆ ಆಗಸ್ಟ್ 21ರಂದು ಎಫ್‌ಐಆರ್ ದಾಖಲಿಸಲಾಗಿತ್ತು. ಇದು ಹುಸಿ ಆರೋಪ ಎಂದು ಹೇಳಿರುವ ಕೃಷ್ಣ, ಘಟನೆ ನಡೆದಿದೆ ಎಂದು ಹೇಳಲಾದ ದಿನದಂದು ನಾನು ಎಲ್ಲಿದ್ದೆ ಎಂಬುದರ ಸಮಗ್ರ ಪೊಲೀಸ್ ತನಿಖೆಯಾಗಬೇಕು ಎಂದಿದ್ದಾರೆ.

# ಉದ್ಯಮಿ ಒಸ್ವಾಲ್‌ಗೆ 7 ಕೋಟಿ ಸೈಬರ್ ವಂಚನೆ

ಲುಧಿಯಾನ, ಸೆ. 30 – ಅಂತರರಾಜ್ಯ ಸೈಬರ್ ವಂಚಕರ ತಂಡವೊಂದು ವರ್ಧಮಾನ್ ಸಮೂಹದ ಅಧ್ಯಕ್ಷ ಭೂಷಣ್ ಎಸ್.ಪಿ. ಒಸ್ವಾಲ್ ಅವರಿಗೆ 7 ಕೋಟಿ ರೂ.ಗಳ ವಂಚನೆ ಮಾಡಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಕಲಿ ಸುಪ್ರೀಂ ಕೋರ್ಟ್ ವಿಚಾರಣೆ, ನಕಲಿ ಬಂಧನದ ವಾರಂಟ್ ಹಾಗೂ ಡಿಜಿಟಲ್ ಬಂಧನ ಸೇರಿದಂತೆ ಸುದೀರ್ಘ ಯೋಜನೆಯ ಮೂಲಕ ಈ ವಂಚನೆ ಮಾಡಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಮಲೇಷಿಯಾಗೆ ತೆರಳುತ್ತಿದ್ದ 58 ನಕಲಿ ಪಾಸ್‌ಪೋರ್ಟ್, 16 ಡೆಬಿಟ್ ಕಾರ್ಡ್ ಹಾಗೂ ಇತರೆ ಶಂಕಾಸ್ಪದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಇದೆಲ್ಲವೂ ಒಸ್ವಾಲ್ ಅವರ ಆಧಾರ್ ಕಾರ್ಡ್ ಜೊತೆ ಸಂಬಂಧ ಹೊಂದಿದೆ ಎಂದು ಸಿ.ಬಿ.ಐ. ಅಧಿಕಾರಿಯ ಸೋಗಿನಲ್ಲಿದ್ದ ಒಬ್ಬರು ಬೆದರಿಕೆ ಹಾಕಿದ್ದಾರೆ.

ಒಸ್ವಾಲ್ ಹೆಸರಾಂತ ಉದ್ಯಮಿಯಾಗಿದ್ದು, ಪದ್ಮ ಭೂಷಣ ಪುರಸ್ಕೃತರೂ ಆಗಿದ್ದಾರೆ. ಈ ವಿಷಯ ಬೆಳಕಿಗೆ ಬಂದರೆ ಮುಜುಗರವಾಗಲಿದೆ ಎಂದು ಹೆದರಿಸಲಾಗಿತ್ತು.

ವಂಚಕರು ಸುಪ್ರೀಂ ಕೋರ್ಟ್‌ನ ಬಂಧನದ ವಾರಂಟ್ ಸಹ ನಕಲು ಮಾಡಿ, ಅದನ್ನು ಒಸ್ವಾಲ್ ಅವರ ವಾಟ್ಸ್‌ಆಪ್‌ಗೆ ಕಳಿಸಿದ್ದರು. ಸಾರ್ವಜನಿಕರ ಗಮನಕ್ಕೆ ಬಾರದ ರೀತಿಯಲ್ಲಿ ಡಿಜಿಟಲ್ ವಿಚಾರಣೆ ನಡೆಸುವುದಾಗಿ ವಂಚಕರು ನಂಬಿಸಿದ್ದರು.

ಈ ನೆರವಿಗಾಗಿ ಎರಡು ಬ್ಯಾಂಕ್ ಖಾತೆಗಳಿಗೆ 7 ಕೋಟಿ ರೂ.ಗಳನ್ನು ಜಮಾ ಮಾಡುವಂತೆ ತಿಳಿಸಲಾಗಿತ್ತು. ಆರೋಪ ಮುಕ್ತವಾದ ನಂತರ ಈ ಹಣ ಮರಳಿಸಲಾಗುವುದು ಎಂದು ತಿಳಿಸಲಾಗಿತ್ತು.

ನಂತರ ಒಸ್ವಾಲ್ ಅವರು ತಮ್ಮ ವ್ಯವಸ್ಥಾಪಕರ ಜೊತೆ ಈ ವಿಷಯದ ಬಗ್ಗೆ ಚರ್ಚಿಸಿದರು. ನಂತರ ಇಡೀ ವಿಷಯದ ಬಗ್ಗೆ ಅನುಮಾನಗೊಂಡು ಪೊಲೀಸರ ಬಳಿ ದೂರು ದಾಖಲಿಸಿದ್ದಾರೆ.

ಈ ಬಗ್ಗೆ ತನಿಖೆ ನಡೆಸಿದ ಲುಧಿಯಾನದ ಸೈಬರ್ ಪೊಲೀಸರು, ಅಸ್ಸಾಂನ ಗುವಾಹತಿಯ ಅತನೂ ಚೌಧರಿ ಹಾಗೂ ಆನಂದ್ ಕುಮಾರ್ ಚೌಧರಿ ಎಂಬುವವರನ್ನು ಬಂಧಿಸಿದ್ದಾರೆ. ಇವರ ಬ್ಯಾಂಕ್ ಖಾತೆಗಳಿಂದ 5.25 ಕೋಟಿ ರೂ.ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಈ ಪ್ರಕರಣದಲ್ಲಿ ಭಾಗಿಯಾದ ಇನ್ನೂ ಐವರು ಕಣ್ಮರೆಯಾಗಿದ್ದಾರೆ. ಬಂಧಿತ ವ್ಯಕ್ತಿಗಳು ಇದೇ ರೀತಿಯ ವಂಚನೆಯ ದೊಡ್ಡ ಜಾಲದ ಭಾಗವಾಗಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

# ಎಂಬ್ರಾಯಿಡರಿ, ಆರಿ ವರ್ಕ್ ಉಚಿತ ತರಬೇತಿಗೆ ಅರ್ಜಿ ಆಹ್ವಾನ

ದಾವಣಗೆರೆ, ಸೆ. 30- ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಟ್ರಸ್ಟ್ ಮತ್ತು ಕೆನರಾ ಬ್ಯಾಂಕ್‌ನ ಸಹಯೋಗದಲ್ಲಿ ನಡೆಸುತ್ತಿರುವ ರುಡ್‌ಸೆಟ್ ಸಂಸ್ಥೆಯ ವತಿಯಿಂದ ಎಂಬ್ರಾಯ್ಡರಿ, ಆರಿ ವರ್ಕ್ ಮತ್ತು ಫ್ಯಾಬ್ರಿಕ್ ಪೇಟಿಂಗ್ ಕುರಿತ 30 ದಿನಗಳ ಉಚಿತ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಅಕ್ಟೋ ಬರ್ 8 ಕೊನೆ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ರುಡ್‌ಸೆಟ್ ಸಂಸ್ಥೆ, ಅರಿಶಿನಕುಂಟೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಅಥವಾ ದೂ.ಸಂ. 9740982585, 9380162042 ಗೆ ಸಂಪರ್ಕಿಸಬಹುದಾಗಿದೆ ಎಂದು ರುಡ್‌ಸೆಟ್ ಸಂಸ್ಥೆಯ ಶಾಖೆಯ ನಿರ್ದೇಶಕ ರವಿಕುಮಾರ್ ತಿಳಿಸಿದ್ದಾರೆ.

# ಶಿಕ್ಷಣ, ಆರ್ಥಿಕತೆಗೆ ಒತ್ತು ನೀಡಿದರೆ ಸಮಾಜ ಬಲಿಷ್ಟ

## ಹರಪನಹಳ್ಳಿಯ ಕಂಚಿಕೆರೆ ಗ್ರಾಮದ ಬೀರೇಶ್ವರ ಜಾತ್ರೆಯಲ್ಲಿ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ



ಹರಪನಹಳ್ಳಿ, ಸೆ. 30- ಶಿಕ್ಷಣ ಮತ್ತು ಆರ್ಥಿಕತೆಗೆ ಒತ್ತು ನೀಡಿದರೆ, ಸಮಾಜ ಬಲಿಷ್ಟವಾಗುತ್ತದೆ ಎಂದು ಕಾಗಿನೆಲೆಯ ಕನಕ ಗುರುಪೀಠದ ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಕಂಚಿಕೇರಿ ಗ್ರಾಮದಲ್ಲಿ ನಡೆಯುತ್ತಿರುವ ಬೀರೇಶ್ವರ ಸ್ವಾಮಿ ಜಾತ್ರೆಯ ಅಂಗವಾಗಿ ಜರುಗಿದ ಧರ್ಮಸಭೆಯ ಸಾನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಉತ್ತಮ ಸಮಾಜ ನಿರ್ಮಾಣವಾಗಬೇಕಾದರೆ ಶಿಕ್ಷಣಕ್ಕೆ ಹಾಗೂ ದುಡಿಮೆಗೆ ಒತ್ತು ಕೊಟ್ಟು, ನಾವು ದುಡಿದಂತಹ ಹಣವನ್ನು ಯಾವ ರೀತಿಯಾಗಿ ಉಪಯೋಗ ಮಾಡಬೇಕೆಂಬ ಸಾಮಾನ್ಯ ಜ್ಞಾನವಿರಬೇಕು. ದೇವರಿಗೆ ಪ್ರಾರ್ಥನೆ ಸಲ್ಲಿಸುವುದಕ್ಕೆ ನಮಗೆ ದೇವಸ್ಥಾನಗಳು ಬೇಕು. ಆದರೆ ಬರೀ ದೇವಸ್ಥಾನದ ಗಂಟೆಯನ್ನು ಭಾರಿಸುವುದೊಂದೇ ಪರಿಹಾರ ಅಲ್ಲ. ಅದರ ಬದಲಾಗಿ ಶಾಲೆಗಳಲ್ಲಿ ಶಿಕ್ಷಣವೆಂಬ ಗಂಟೆ ಬಾರಿಸಿದರೆ ಊರು, ತಾಲೂಕು, ಜಿಲ್ಲೆ, ರಾಜ್ಯ, ದೇಶ ಅಭಿವೃದ್ಧಿಯಾಗುತ್ತದೆ ಎಂದು ನುಡಿದರು.

ದೇವಸ್ಥಾನದಲ್ಲಿ ಭಾರಿಸುವ ಗಂಟೆ ಅಧ್ಯಾತ್ಮಿಕ ಆತ್ಮ ಚೈತನ್ಯ ನೀಡಿದರೆ, ಶಾಲೆಗಳಲ್ಲಿ ಬಾರಿಸುವ ಗಂಟೆ ಜ್ಞಾನಾರ್ಜನೆ ನೀಡುತ್ತದೆ. ಮುಖ್ಯವಾಗಿ ಮೌಢ್ಯತೆ ಹಾಗೂ ಬಾಯಿ ಚಪಲದ ಹಬ್ಬಗಳನ್ನು ಹೋಗಲಾಡಿಸಿದರೆ ನಿಮ್ಮ ಹಣಕಾಸಿನ ಸಮಸ್ಯೆ ಸುಧಾರಿಸುತ್ತದೆ ಎಂದು ಹೇಳಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ. ಅಂಜಿನಪ್ಪ ಮಾತನಾಡಿ, ನಿಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಟ್ಟು ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಿ. ನಾವು ಇವತ್ತು ಏನನ್ನಾದರು ಸಾಧಿಸಬೇಕಾದರೆ ಶಿಕ್ಷಣದಿಂದ ಮಾತ್ರ ಸಾಧ್ಯ ಎಂದು ಹೇಳಿದರು.

ಹಗರಿಬೊಮ್ಮನಹಳ್ಳಿ ಉಪನ್ಯಾಸಕ ಗುಳೆಯಪ್ಪ ಹುಲಿಮನೆ ಮಾತನಾಡಿ, ಕಂಚಿಕೆರೆ ಗ್ರಾಮ ಬಾಂಧವರ ಮಕ್ಕಳಿಗೆ ಶಿಕ್ಷಣದ ಕೊರತೆ ಎದ್ದು ಕಾಣುತ್ತದೆ, ನಮ್ಮ ಸಮಾಜದವರು ಕಷ್ಟಪಟ್ಟು ದುಡಿದರೂ ಸಹ ಅಭಿವೃದ್ಧಿಯಾಗಿಲ್ಲ ಎಂದರು.

ಜಿ.ಪಂ ಮಾಜಿ ಸದಸ್ಯ ಹೆಚ್.ಬಿ. ಪರಶುರಾಮಪ್ಪ ಡೊಳ್ಳು ಭಾರಿಸುವ ಮುಖಾಂತರ ಕಾರ್ಯಕ್ರಮ ಉದ್ಘಾಟಿಸಿದರು.

ಹೆಚ್. ಪರುಸಪ್ಪ ಅಧ್ಯಕ್ಷತೆ ವಹಿಸಿದ್ದರು. ಎಂ.ನಾಗರಾಜ್, ಜೆ. ಮಂಜಪ್ಪ, ಕೆ. ಕೆಂಚಪ್ಪ, ಎಂ. ಹನುಮಂತಪ್ಪ, ಬಿ.ಅಂಜಿನಪ್ಪ, ಕೆಂಚನಗೌಡ, ಕೊಟ್ರೇಶ್, ಅಲ್ಲಾಭಕ್ಷಿ ಸಾಬ್, ಡಿ.ದೇವೇಂದ್ರಪ್ಪ, ಮುತ್ತಿಗೆ ಜಂಭಣ್ಣ, ವಕೀಲ ಗೋಣಿಬಸಪ್ಪ, ಚಲವಾದಿ ಹನುಮಂತಪ್ಪ, ವೆಂಕಟೇಶ್, ಬಾರಿಕರ ಮಂಜಪ್ಪ, ಪಿಎಸ್ಐ ಕೆ. ರಂಗಯ್ಯ ಮತ್ತಿತರರು ಉಪಸ್ಥಿತರಿದ್ದರು.

# ಗ್ರಾಮಾಂತರ ಕೈಗಾರಿಕಾ ಇಲಾಖೆಯಿಂದ ವಿವಿಧ ಸೌಲಭ್ಯಗಳಿಗೆ ಅರ್ಜಿ ಆಹ್ವಾನ

ದಾವಣಗೆರೆ, ಸೆ. 30- ಗ್ರಾಮಾಂತರ ಕೈಗಾರಿಕಾ ವಿಭಾಗದಿಂದ ಹೊಲಿಗೆಯಂತ್ರ ವಿತರಣೆ, ಕುಶಲಕರ್ಮಿಗಳಿಗೆ ಬ್ಯಾಂಕ್ ಸಾಲದ ಮೇಲೆ ವಿಧಿಸುವ ಬಡ್ಡಿ ಮೊತ್ತದ ಮೇಲೆ ಬಡ್ಡಿ ಸಹಾಯಧನ ಹಾಗೂ ಟೈಲರಿಂಗ್, ಹ್ಯಾಂಡ್ ಎಂಬ್ರಾಯ್ಡರಿ, ಡೊಮೆಸ್ಟಿಕ್ ಎಲೆಕ್ಟ್ರಿಷಿಯನ್, ಮೋಟಾರ್ ರೀವೈಂಡಿಂಗ್, ಮೊಬೈಲ್ ರಿಪೇರಿ, ಬ್ಯೂಟಿ ಥೆರಪಿಸ್ಟ್, ಕಂಪ್ಯೂಟರ್, ಎಫ್.ಟಿ.ಸಿ.ಪಿ. ತರಬೇತಿ ನೀಡಿ ಉಚಿತವಾಗಿ 5 ಸಾವಿರ ರೂ. ಮೌಲ್ಯದ ಉಪಕರಣಗಳ ಕಿಟ್ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಗ್ರಾಮೀಣ ಅಭ್ಯರ್ಥಿಗಳು ಅಕ್ಟೋಬರ್ 24 ರೊಳಗೆ davanagere.nic.in ವೆಬ್‌ಸೈಟ್‌ಮೂಲಕ ಅರ್ಜಿ ಸಲ್ಲಿಸಿ, ಅಗತ್ಯ ದಾಖಲೆಗಳೊಂದಿಗೆ ಅಕ್ಟೋಬರ್ 31 ರೊಳಗೆ ಗ್ರಾಮಾಂತರ ಕೈಗಾರಿಕಾ ವಿಭಾಗ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ದಾವಣಗೆರೆ ಕಚೇರಿಗೆ ಸಲ್ಲಿಸಬೇಕು.

ಮಾಹಿತಿಗೆ ಕಚೇರಿಯ ದೂ.ಸಂ. 9448944050, 9448758540, 9448929717. ಗೆ ಸಂಪರ್ಕಿಸಬಹುದಾಗಿದೆ ಎಂದು ಗ್ರಾಮಾಂತರ ಕೈಗಾರಿಕಾ ವಿಭಾಗದ ಉಪ ನಿದೇಶಕ ವೀರೇಶನಾಯ್ಕ ತಿಳಿಸಿದ್ದಾರೆ.

# ನಗರದಲ್ಲಿ ಇಂದು ವಿಶ್ವ ಹಿರಿಯ ನಾಗರಿಕರ ದಿನಾಚರಣೆ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ, ಜಿಲ್ಲಾ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಹಿರಿಯ ನಾಗರಿಕರ ಸಂಘ ಹಾಗೂ ಹಿರಿಯ ನಾಗರಿಕರ ಶ್ರೇಯೋಭಿವೃದ್ದಿಗಾಗಿ ಶ್ರಮಿಸುತ್ತಿರುವ ಸ್ವಯಂ ಸೇವಾ ಸಂಘ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 10.30 ಕ್ಕೆ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಕಾರ್ಯಕ್ರಮವನ್ನು ಶ್ರೀ ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮಿಗಳ ಮಠದಲ್ಲಿ ಆಯೋಜಿಸಲಾಗಿದೆ.

ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟನೆ ಮಾಡುವರು. ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಅವರು ಅಧ್ಯಕ್ಷತೆ ವಹಿಸುವರು.

ಬೆಳಿಗ್ಗೆ 9 ಗಂಟೆಯಿಂದ ಮಧ್ಯಾಹ್ನ 2 ರವರೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಆಯುಷ್ ಇಲಾಖೆ, ಇವರ ಸಹಯೋಗದೊಂದಿಗೆ ಹಿರಿಯ ನಾಗರಿಕರಿಗೆ ಉಚಿತ ಆರೋಗ್ಯ ತಪಾಸಣೆ ಶಿಬಿರ ಆಯೋಜಿಸಲಾಗಿದೆ.

ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್.ಅರುಣ್‌ಕುಮಾರ್ ಹಿರಿಯ ನಾಗರಿಕರಿಗೆ ಕಾನೂನಿನಲ್ಲಿರುವ ಅವಕಾಶಗಳ ಕುರಿತು ಮಾಹಿತಿ ನೀಡುವರು.

# ಆಧುನಿಕ ಕಲಿಕಾ ಮನೋಬಲವನ್ನು ಹೆಚ್ಚಿಸಿಕೊಳ್ಳಬೇಕು

## ಬಿಐಇಟಿ ಕಾಲೇಜಿನ ಕಾರ್ಯಕ್ರಮದಲ್ಲಿ ಡಾ.ಸುರೇಂದ್ರನಾಥ್ ನಿಶಾನಿಮಠ



ದಾವಣಗೆರೆ, ಸೆ. 30- ಸಂವಹನ ಸಾಮರ್ಥ್ಯ ಹೆಚ್ಚಿಸಿಕೊಳ್ಳಬೇಕು. ಚನ್ನಾಗಿ ಇಂಗ್ಲಿಷ್ ಮಾತನಾಡುವುದನ್ನು ಕಲಿಯಬೇಕು. ಕಲಿಕೆಗೆ ಬೇಕಾದ ಜ್ಞಾನವನ್ನು ವೃದ್ಧಿ ಮಾಡಿಕೊಳ್ಳಬೇಕು. ಆಧುನಿಕ ಕಲಿಕಾ ಮನೋಬಲವನ್ನು ಹೆಚ್ಚಿಸಿಕೊಂಡಾಗ ಮಾತ್ರ ಬದಲಾಗುತ್ತಿರುವ ಪ್ರಪಂಚಕ್ಕೆ ಸವಾಲನ್ನು ಒಡ್ಡಬಹುದು ಎಂದು ಸುವೇದ ಎಜುಕೇಶನ್ ಮತ್ತು ರಿಸರ್ಚ್ ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಡಾ.ಸುರೇಂದ್ರನಾಥ್ ಪಿ. ನಿಶಾನಿಮಠ ಹೇಳಿದರು.

ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿನ ಎಸ್.ಎಸ್. ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿ (ಒಳಾಂಗಣ ಸಭಾಂಗಣ) ಪ್ರಥಮ ವರ್ಷದ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸ್ವಾಗತ ಹಾಗೂ ವಿಕಸನ ಶಿಬಿರದ ಸಮಾರಂಭದಲ್ಲಿ ಮಾತನಾಡಿದರು. ವಿದ್ಯಾರ್ಥಿಗಳು ಇನ್ನೂ ಹೆಚ್ಚಿನ ಕಲಿಕೆಗೆ ತೆರೆದುಕೊಳ್ಳಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ ಮಾತ ನಾಡಿ, ವಿದ್ಯಾರ್ಥಿಗಳು ಪಠ್ಯಕ್ರ ಮದ ಜೊತೆಗೆ ಇತರೆ ಚಟುವ ಟಿಕೆಗಳಿಗೆ ತಮ್ಮನ್ನು ತಾವು ತೊಡಗಿ ಸಿಕೊಳ್ಳಬೇಕು. ಹಾಗಾದರೆ ಮಾತ್ರ ನಿಮ್ಮ ಸಂಪೂರ್ಣ ಏಳಿಗೆ ಸಾಧ್ಯ ಎಂದರು.

ಸಂಚಾಲಕ ಡಾ.ಎನ್.ಎಸ್. ಬಸವರಾಜಪ್ಪ ಕಾರ್ಯಾಗಾರದ ಮಹತ್ವ ತಿಳಿಸಿದರು. ಪ್ರಾಚಾರ್ಯ ಡಾ.ಹೆಚ್.ಬಿ. ಅರವಿಂದ್, ವಿವಿಧ ವಿಭಾಗಗಳ ಮುಖ್ಯಸ್ಥರು, ಉಪನ್ಯಾಸಕರು, ಪ್ರಥಮ ವರ್ಷದ ವಿದ್ಯಾರ್ಥಿಗಳು ಮತ್ತು ಅವರ ಪೋಷಕರು ಉಪಸ್ಥಿತರಿದ್ದರು.

ಡಾ. ಅಶ್ವಿನಿ ರಾವ್ ಮತ್ತು ಸಂಗಡಿಗರು ಪ್ರಾರ್ಥಿಸಿದರು. ಪ್ರೊ. ಮಾಳವಿಕಾ ಮತ್ತು ಪ್ರೊ. ಜಿ.ಎಸ್. ಪಲ್ಲವಿ ನಿರೂಪಿಸಿದರು.

# ಪ್ರಥಮ ಚಿಕಿತ್ಸೆ ಜಾಗೃತಿ ಕಾರ್ಯಕ್ರಮ ಯಶಸ್ವಿ



ದಾವಣಗೆರೆ, ಸೆ.30- ಸುವಿದ್ಯಾ ನಿಧಿ ವತಿಯಿಂದ ಸುಶ್ರುತ ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಸಹಯೋಗದಲ್ಲಿ ಕಾಲೇಜಿನಲ್ಲಿ ಪ್ರಥಮ ಚಿಕಿತ್ಸೆ ಜಾಗೃತಿ ಕಾರ್ಯಕ್ರಮ ನಡೆಯಿತು.

ತುರ್ತುಸ್ಥಿತಿ ನಿರ್ವಹಣೆ ಮತ್ತು ಜೀವ ಉಳಿಸುವ ಪ್ರಥಮ ಚಿಕಿತ್ಸೆ ಕುರಿತು ರಾಷ್ಟ್ರೀಯ ತರಬೇತುದಾರ ಡಾ.ವಿ.ಎಲ್. ಎಸ್. ಕುಮಾರ್ ಕಾಲೇಜಿನ ವಿದ್ಯಾರ್ಥಿಗಳಿಗೆ ಉಪನ್ಯಾಸ ನೀಡಿದರು. ಕಿವಿ, ಮೂಗು, ಗಂಟಲು ತಜ್ಞ ಡಾ.ಎ.ಎಂ. ಶಿವಕುಮಾರ್, ಸುವಿದ್ಯಾ ನಿಧಿ ಗುಂಪಿನ ಸದಸ್ಯ ಎಂ. ಕುಮಾರ್, ಸುಶೃತ ಆರೋಗ್ಯ ಪ್ರತಿಷ್ಠಾನದ ಕಾರ್ಯದರ್ಶಿ ಡಾ.ಬಿ.ಜಿ. ಸತೀಶ್, ಸುಶೃತ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನ ಪ್ರಾಚಾರ್ಯ ಡಾ. ಕೆ.ಹೆಚ್. ಅಕ್ಬರ್ ಖಾನ್, ಉಪನ್ಯಾಸಕ ಡಾ. ಸ್ಟೇಸಿ ಜೋಸೆಫ್, ಡಾ. ಸಹನ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ರೈಲುಗಳ ತಾತ್ಕಾಲಿಕ ನಿಲುಗಡೆ ಮುಂದುವರಿಕೆ

ದಾವಣಗೆರೆ, ಸೆ. 30 - ರಾಮಗಿರಿ, ಬೀರೂರು ಮತ್ತು ಆಲೂರು ನಿಲ್ದಾಣಗಳಲ್ಲಿ ಕೆಲವು ರೈಲುಗಳಿಗೆ ಇದ್ದ ಒಂದು ನಿಮಿಷದ ತಾತ್ಕಾಲಿಕ ನಿಲುಗಡೆಯನ್ನು ನೈಋತ್ಯ ರೈಲ್ವೆ ಮುಂದುವರೆಸಲು ನಿರ್ಧರಿಸಿದೆ ಎಂದು ಹುಬ್ಬಳ್ಳಿಯ ನೈರುತ್ಯ ರೈಲ್ವೆಯ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಡಾ.ಮಂಜುನಾಥ್ ಕನಮಡಿ ತಿಳಿಸಿದ್ದಾರೆ.



**ರೈಲು ಸಂಖ್ಯೆ:** 17325/17326 ಬೆಳಗಾವಿ-ಮೈಸೂರು-ಬೆಳಗಾವಿ ವಿಶ್ವಮಾನವ ಡೈಲಿ ಎಕ್ಸ್‌ಪ್ರೆಸ್, ರೈಲು ಸಂಖ್ಯೆ: 17391/17392 ಕೆಎಸ್‌ಆರ್ ಬೆಂಗಳೂರು-ಎಸ್‌ಎಸ್‌ಎಸ್ ಹುಬ್ಬಳ್ಳಿ, ಕೆಎಸ್‌ಆರ್ ಬೆಂಗಳೂರು ಡೈಲಿ ಎಕ್ಸ್‌ಪ್ರೆಸ್ ರೈಲುಗಳಿಗೆ ರಾಮಗಿರಿ ನಿಲ್ದಾಣದಲ್ಲಿ ಇರುವ ಒಂದು ನಿಮಿಷದ ತಾತ್ಕಾಲಿಕ ನಿಲುಗಡೆಯನ್ನು ಅ. 1 ರಿಂದ ಡಿ. 31 ರವರೆಗೆ ಮೂರು ತಿಂಗಳ ಕಾಲ ಮುಂದುವರೆಸಲಾಗಿದೆ.

**ರೈಲು ಸಂಖ್ಯೆ:** 16587/16588 ಯಶವಂತಪುರ-ಬಿಕ್‌ನೇರ್-ಯಶವಂತಪುರ- ಬೀ ವೀಕ್ಲಿ ಎಕ್ಸ್‌ಪ್ರೆಸ್ ರೈಲುಗಳಿಗೆ ಬೀರೂರು ನಿಲ್ದಾಣದಲ್ಲಿ ಇರುವ ಒಂದು ನಿಮಿಷದ ತಾತ್ಕಾಲಿಕ ನಿಲುಗಡೆ ಅ. 1 ರಿಂದ ಡಿ. 31 ರವರೆಗೆ ಮೂರು ತಿಂಗಳು ನಿಲುಗಡೆ ಮುಂದುವರಿಯಲಿದೆ.

ರೈಲು ಸಂಖ್ಯೆ 16515/16516 ಯಶವಂತಪುರ-ಕಾರವಾರ-ಯಶವಂತಪುರ ಟ್ರೈ-ವೀಕ್ಲಿ ಎಕ್ಸ್‌ಪ್ರೆಸ್, ರೈಲು ಸಂಖ್ಯೆ 16575 / 16576 ಯಶವಂತಪುರ-ಮಂಗಳೂರು ಜಂಕ್ಷನ್-ಯಶವಂತಪುರ ಗೋಮಟೇಶ್ವರ ಟ್ರೈ-ವೀಕ್ಲಿ ಎಕ್ಸ್‌ಪ್ರೆಸ್ ರೈಲು ಸಂಖ್ಯೆ 16539 / 16540 ಯಶವಂತಪುರ-ಮಂಗಳೂರು-ಜಂಕ್ಷನ್-ಯಶವಂತಪುರ ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲುಗಳಿಗೆ ಆಲೂರು ನಿಲ್ದಾಣದಲ್ಲಿದ್ದ ಒಂದು ನಿಮಿಷದ ತಾತ್ಕಾಲಿಕ ನಿಲುಗಡೆಯನ್ನು ನವೆಂಬರ್ 30 ರವರೆಗೆ ಮುಂದುವರಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

# ಜಿಟಿಟಿಸಿ ಹರಿಹರ ಕೇಂದ್ರಕ್ಕೆ ಎನ್‌ಬಿಎ ಮಾನ್ಯತೆ

ದಾವಣಗೆರೆ, ಸೆ.30- ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿ ಹರಿಹರದ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ ಸಂಸ್ಥೆ (ಜಿಟಿಟಿಸಿ)ಯ ಡಿಪ್ಲೋಮಾ ಇನ್ ಟೂಲ್ ಮತ್ತು ಡೈ ಮೇಕಿಂಗ್ ಕೋರ್ಸ್‌ಗೆ ರಾಷ್ಟ್ರೀಯ ಮಾನ್ಯತಾ ಮಂಡಳಿಯಿಂದ ಎನ್.ಬಿ.ಎ ಮಾನ್ಯತೆ ದೊರೆತಿದೆ ಎಂದು ಕಾಲೇಜಿನ ಪ್ರಾಚಾರ್ಯರು ತಿಳಿಸಿದ್ದಾರೆ.

# 'ಯುಬಿಡಿಟಿ ಉಳಿಸಿ' : ಎಸ್ಸೆಸ್‌ಗೆ ಮನವಿ



ದಾವಣಗೆರೆ, ಸೆ. 30- ಕರ್ನಾಟಕದ ಮೊದಲ ಹೆಮ್ಮೆಯ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಇಂದು ಅಳಿವಿನ ಅಂಚಿನಲ್ಲಿದೆ. ಈ ಶೈಕ್ಷಣಿಕ ವರ್ಷದಿಂದ ಉನ್ನತ ಕೇಇಎ ಶುಲ್ಕದ ಹೆಸರಲ್ಲಿ 50% ಸೀಟುಗಳಿಗೆ ಹೆಚ್ಚಿನ ಶುಲ್ಕ ಪಡೆಯಲಾಗುತ್ತಿದೆ.

ಸರ್ಕಾರಿ ಶುಲ್ಕ 42,866 ರೂ ಇದ್ದು, 250 ಸೀಟುಗಳಿಗೆ ಈ ಶುಲ್ಕದಡಿ ಪ್ರವೇಶ ನೀಡಲಾಗುತ್ತಿದೆ. ಇನ್ನುಳಿದ 254 ಸೀಟುಗಳಿಗೆ 97,495 ರೂ ಶುಲ್ಕವನ್ನು ನಿಗದಿ ಪಡಿಸಲಾಗಿದೆ. ಸರ್ಕಾರವೇ 50% ಬಡ ವಿದ್ಯಾರ್ಥಿಗಳ ಸೀಟುಗಳನ್ನು ಪೇಮೆಂಟಿಗೆ ಮಾರುತ್ತಿದೆ. ಸರ್ಕಾರಿ ಕಾಲೇಜಿನಲ್ಲಿ ಈ ಇಬ್ಬಗೆಯ ನೀತಿಯು ವಿದ್ಯಾರ್ಥಿ ವಿರೋಧಿಯಾಗಿದೆ. ಇದು ಅತ್ಯಂತ ಖಂಡನೀಯ.

ಈ ಹಿನ್ನೆಲೆಯಲ್ಲಿ ಎಐಡಿಎಸ್‌ಓ ಮತ್ತು ಯುಬಿಡಿಟಿ ಉಳಿಸಿ ವಿದ್ಯಾರ್ಥಿಗಳ ಹೋರಾಟ ಸಮಿತಿಯಿಂದ ಮಾನ್ಯ ಶಾಸಕ ಶಾಮನೂರು ಶಿವಶಂಕರಪ್ಪ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಯಿತು.

ನಗರದ ಯುಬಿಡಿಟಿಯಲ್ಲಿ ಈ ರೀತಿಯಾದರೆ ಬಡ ರೈತ-ಕಾರ್ಮಿಕರ ಮಕ್ಕಳು ಇಂಜಿನಿಯರಿಂಗ್ ಶಿಕ್ಷಣದಿಂದ ದೂರ ಉಳಿಯಬೇಕಾಗುತ್ತದೆ. ಆದ್ದರಿಂದ ಸರ್ಕಾರದ ಮೇಲೆ ಒತ್ತಡ ಹೇರಿ ಯುಬಿಡಿಟಿ ಯನ್ನು ಉಳಿಸಬೇಕೆಂದು ಹಿರಿಯ ಶಾಸಕರನ್ನು ಕೋರಲಾಯಿತು.

ಈ ಸಂದರ್ಭದಲ್ಲಿ ಎಐಡಿಎಸ್‌ಓ ರಾಜ್ಯ ಕಚೇರಿ ಕಾರ್ಯದರ್ಶಿ ಮಹಾಂತೇಶ ಬೀಳೂರ, ಜಿಲ್ಲಾಧ್ಯಕ್ಷರಾದ ಪೂಜಾ ನಂದಿಹಳ್ಳಿ, ಜಿಲ್ಲಾ ಕಾರ್ಯದರ್ಶಿ ಸುಮನ್ ಟಿ ಎಸ್ ಸೇರಿದಂತೆ ಹೋರಾಟ ಸಮಿತಿ ಸದಸ್ಯರಾದ ಅಭಿಷೇಕ್, ಸಂತೋಷ್, ರಾಜಶೇಖರ್, ಆದರ್ಶ್, ಚಂದನಾ, ರೀಮಾ ಹಾಗೂ ಕಾಲೇಜಿನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ನಗರದಲ್ಲಿ ವಿಜ್ಞಾನ, ವಾಣಿಜ್ಯ ಪ್ರದರ್ಶನ

ಸೇಂಟ್ ಪೌಲ್ಸ್ ಪ್ರಿ-ಯೂನಿವರ್ಸಿಟಿ ಕಾಲೇಜಿನಲ್ಲಿ ವಿಜ್ಞಾನ ಮತ್ತು ವಾಣಿಜ್ಯ ಪ್ರದರ್ಶನ 2024-25, ಥೀಮ್: ವೀಕ್ಷಿತ್ ಭಾರತ್-2047 ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 10 ಗಂಟೆಗೆ ಕಾಲೇಜಿನ ಸೆಮಿನಾರ್ ಹಾಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ.

ಸೇಂಟ್ ಪಾಲ್ಸ್ ಪಿ.ಯು. ಕಾಲೇಜು ಆಡಳಿತಾಧಿಕಾರಿ ಮೆಟ್ಟಿಲ್ಡಾ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ವಾಣಿಜ್ಯಶಾಸ್ತ್ರ ಉಪನ್ಯಾಸಕ ಆರ್. ವಿಶ್ವನಾಥ್ ಥೀಮ್ ವಿವರಣೆ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಲಾ ಶಿಕ್ಷಣ ಇಲಾಖೆ (ಪಿಯು) ಉಪ ನಿರ್ದೇಶಕ ಎಸ್. ಜಿ. ಕರಿಸಿದ್ದಪ್ಪ ಪಾಲ್ಗೊಳ್ಳಲಿದ್ದು, ಸೇಂಟ್ ಪಾಲ್ಸ್ ಸಂಸ್ಥೆಯ ಮ್ಯಾನೇಜರ್ ಮಾರ್ಜೋರಿ, ಸೇಂಟ್ ಪಾಲ್ಸ್ ಕಾನ್ವೆಂಟ್ ಬಾಲಕಿಯರ ಪ್ರೌಢಶಾಲೆಯ ಮುಖ್ಯೋಪಾಧ್ಯಾಯಿನಿ ವೆನೆಸ್ಸಾ, ಸೇಂಟ್ ಪಾಲ್ಸ್ ಎಚ್.ಪಿ.ಕಾನ್. ಮಾಧ್ಯಮ ಶಾಲೆಯ ಮುಖ್ಯೋಪಾಧ್ಯಾಯಿನಿ ಸುಪ್ರಿಯಾ, ಸೇಂಟ್ ಪಾಲ್ಸ್ ನರ್ಸರಿ ಶಾಲೆಯ ಪ್ರಭಾರಿ ಲಿಂಡಾ ಸೇರಿದಂತೆ ಮತ್ತಿತರರು ಉಪಸ್ಥಿತರಿರುವರು.

# ಮಹಿಳೆಯರಿಂದ ಮಾತ್ರ ಪರಿಪೂರ್ಣ ಕೆಲಸ ಸಾಧ್ಯ

## ರಾಣೇಬೆನ್ನೂರು : ರೈತ ಮುಖಂಡ ರವೀಂದ್ರಗೌಡ ಪಾಟೀಲ ಅಭಿಮತ



ರಾಣೇಬೆನ್ನೂರು, ಸೆ. 30- ಶೇಕಡ ನೂರಕ್ಕೆ ನೂರು ಪರಿಪೂರ್ಣ ಕೆಲಸಗಳು ಮಹಿಳೆಯರಿಂದ ಮಾತ್ರ ಸಾಧ್ಯವಾಗಿದೆ. ಹಾಗಾಗಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಈಗ ಮಹಿಳಾ ವಾಹನ ಚಾಲಕರು ಹಾಗೂ ಸಹಾಯಕರನ್ನು ಸಹ ಆಯ್ಕೆ ಮಾಡಿಕೊಳ್ಳಲಾಗುತ್ತಿದೆ ಎಂದು ತಾಲ್ಲೂಕು ರೈತ ಸಂಘದ ಅಧ್ಯಕ್ಷ ರವೀಂದ್ರಗೌಡ ಪಾಟೀಲ ತಿಳಿಸಿದರು.

ಮಹಾತ್ಮಾಗಾಂಧಿ ಗ್ರಾಮೀಣ ಇಂಧನ ಅಭಿವೃದ್ಧಿ ಸಂಸ್ಥೆ, ಕೌಶಲ್ಯಾಭಿವೃದ್ಧಿ ಇಲಾಖೆ, ಜಿಲ್ಲಾ ಪಂಚಾಯಿತಿ ಹಾವೇರಿ, ತಾಲೂಕು ಪಂಚಾಯಿತಿ ಹಾಗೂ ನೀಡ್ಸ್ ಸಂಸ್ಥೆ ಸಹಯೋಗದಲ್ಲಿ ಇಲ್ಲಿನ ಗುಪ್ತಾ ಸಭಾ ಭವನದಲ್ಲಿ ಘನತ್ಯಾಜ್ಯ ನಿರ್ವಹಣಾ ಘಟಕದಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಮಹಿಳೆಯರಿಗೆ ಹಮ್ಮಿಕೊಳ್ಳಲಾಗಿದ್ದ ಮೂರು ದಿನಗಳ ಘನತ್ಯಾಜ್ಯ ನಿರ್ವಹಣೆ ಪುನಶ್ಚೇತನ ಶಿಬಿರದ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿತರಿಸಿ ಅವರು ಮಾತನಾಡಿದರು.

ನೀಡ್ಸ್ ಸಂಸ್ಥೆಯಿಂದ ಈ ತರಬೇತಿ ಮತ್ತು ಪ್ರಮಾಣ ಪತ್ರ ಪಡೆದ ಶಿಬಿರಾರ್ಥಿಗಳಿಗೆ ಸ್ವಚ್ಛ ಸಂಕೀರ್ಣದಲ್ಲಿ ಕೆಲಸ ದೊರೆಯಲು ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಚರ್ಚೆ ಮಾಡುವಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದಾಗಿ ಅವರು ತಿಳಿಸಿದರು.

ನೀಡ್ಸ್ ಸಂಸ್ಥೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಚ್.ಎಫ್. ಅಕ್ಕಿ ಮಾತನಾಡಿ, ತಾವು ಪಡೆದಂತಹ ತರಬೇತಿಗಳನ್ನು, ನಮ್ಮ ಘನತ್ಯಾಜ್ಯ ನಿರ್ವಹಣಾ ಘಟಕದಲ್ಲಿ ಅನುಷ್ಠಾನಗೊಳಿಸಲು ಇದೊಂದು ಸದವಕಾಶವಾಗಿದೆ ಎಂದು ತಿಳಿಸಿದರು.

ಮೂರು ದಿನಗಳ ತರಬೇತಿ ಕುರಿತು ಸಂಕ್ಷಿಪ್ತವಾಗಿ ಶಿಬಿರಾರ್ಥಿಗಳು ವಿಷಯವನ್ನು ಹಂಚಿಕೊಂಡರು.

ನೀಡ್ಸ್ ಸಂಸ್ಥೆಯ ಸಿಬ್ಬಂದಿ ಸುಧೀರ ಈಟಿ, ಅಬ್ದುಲ್ ಖಾದರ್ ಹಾಗೂ 10 ಪಂಚಾಯಿತಿಗಳಿಂದ ಒಟ್ಟು 30 ಜನ ಶಿಬಿರಾರ್ಥಿಗಳು ಭಾಗವಹಿಸಿದ್ದರು.

ನೀಡ್ಸ್ ಸಂಸ್ಥೆ ಯೋಜನಾ ಸಹಾಯಕ ಎಂ. ಕರಿಬಸಪ್ಪ ಸ್ವಾಗತಿಸಿದರು. ತಿಪ್ಪೇಶಪ್ಪ ಕನ್ನಮ್ಮನವರು ನಿರೂಪಿಸಿ, ವಂದಿಸಿದರು.

# ರಾಮನಗರ ಗಾಂಧಿ ಭವನದಲ್ಲಿ ಜಯಂತಿ ಆಚರಣೆಗೆ ಸಿದ್ದತೆ

## ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಆಚರಿಸಲು ಜಿಲ್ಲಾಧಿಕಾರಿ ಗಂಗಾಧರ ಸ್ವಾಮಿ ಸೂಚನೆ

ದಾವಣಗೆರೆ, ಸೆ.30- ನಾಡಿದ್ದು ದಿನಾಂಕ 2ರಂದು ಗಾಂಧಿ ಜಯಂತಿ ಕಾರ್ಯಕ್ರಮವನ್ನು ಸ್ಥಳೀಯ ರಾಮನಗರದಲ್ಲಿನ ಗಾಂಧಿ ಭವನದಲ್ಲಿ ಆಯೋಜನೆ ಮಾಡುವ ಮೂಲಕ ಸರ್ವಧರ್ಮ ಪ್ರಾರ್ಥನೆ, ವಿದ್ಯಾರ್ಥಿಗಳಿಂದ ಗಾಂಧಿ ಚಿಂತನೆಗಳ ಕುರಿತು ಭಾಷಣವನ್ನು ಏರ್ಪಡಿಸಲಾಗುತ್ತದೆ ಎಂದು ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಮೊನ್ನೆ ನಡೆದ ಗಾಂಧಿ ಜಯಂತಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರೀಜಿಯವರ ಜನ್ಮ ದಿನಾಚರಣೆ ಕಾರ್ಯಕ್ರಮದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



ಗಾಂಧೀಜಿಯವರ ಚಿಂತನೆ ಹಾಗೂ ತತ್ವಗಳು ಇಂದಿಗೂ ಜಾಗತಿಕವಾಗಿ ಪ್ರಸ್ತುತವಾಗಿದ್ದು ಅವರ ಚಿಂತನೆಗಳನ್ನು ಜೀವಂತವಾಗಿಡುವ ಕೆಲಸ ಮಾಡುವ ಮೂಲಕ ಯುವ ಜನಾಂಗದಲ್ಲಿ ಸತ್ಯ, ಅಹಿಂಸೆ, ಶಾಂತಿ, ಸರಳತೆಯ ಭಾವನೆಗಳನ್ನು ಬಿತ್ತಬೇಕಾಗಿದೆ. ಈ ನಿಟ್ಟಿನಲ್ಲಿ ರಾಮನಗರದಲ್ಲಿನ ಗಾಂಧಿ ಭವನದಲ್ಲಿ ವಿದ್ಯಾರ್ಥಿಗಳಿಗೆ ನಿರಂತರ ಚಟುವಟಿಕೆಗಳನ್ನು ನಡೆಸುವ ಮೂಲಕ ಗಾಂಧೀಜಿಯವರ ತತ್ವ, ಚಿಂತನೆಗಳ ಕುರಿತು ಮನವರಿಕೆ ಮಾಡುವ ಕೆಲಸವನ್ನು ಮಾಡಲು ವಿವಿಧ ಇಲಾಖೆಗಳಿಂದ ಕ್ರಮವಹಿಸಲು ಆದೇಶ ನೀಡಲಾಗುತ್ತದೆ ಎಂದರು.

ಕಾರ್ಯಕ್ರಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ಪಾಲಿಕೆ ಮೇಯರ್ ಸೇರಿದಂತೆ ಎಲ್ಲಾ ಜನಪ್ರತಿನಿಧಿಗಳನ್ನು ಆಹ್ವಾನಿಸಲಾಗುತ್ತದೆ. ಎಲ್ಲಾ ಇಲಾಖೆ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಸೂಚನೆ ನೀಡಿದರು.

ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಗಾಂಧಿ ಜಯಂತಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿಯವರ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಆಯೋಜಿಸಬೇಕು. ಶಾಲಾ, ಕಾಲೇಜುಗಳಲ್ಲಿಯೂ ಜಯಂತಿ ಆಚರಣೆ ಮಾಡಬೇಕು, ಶ್ರಮದಾನ, ಸ್ವಚ್ಛತಾ ಕಾರ್ಯಕ್ರಮಗಳನ್ನು ಆಯೋಜನೆ ಮಾಡಿಕೊಳ್ಳಲು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಉಪವಿಭಾಗಾಧಿಕಾರಿ ಅಭಿಷೇಕ್, ಸಂತೋಷ್ ಪಾಟೀಲ್, ಪಾಲಿಕೆ ಆಯುಕ್ತೆ ರೇಣುಕಾ, ಯೋಜನಾ ನಿರ್ದೇಶಕ ಡಾ. ಮಹಂತೇಶ್ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

**ಶ್ರೀ ಅಕ್ಕಮಹಾದೇವಿ ಸಮಾಜ (ರಿ)**

ಅಕ್ಕಮಹಾದೇವಿ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.

**ಕಂಪ್ಯೂಟರ್ ಟೀಚರ್ (ಶಿಕ್ಷಕಿ) ಬೇಕಾಗಿದ್ದಾರೆ**

ಶ್ರೀ ಅಕ್ಕಮಹಾದೇವಿ ಸಮಾಜದ ಕಂಪ್ಯೂಟರ್ ಶಾಲೆಗೆ ಅನುಭವವುಳ್ಳ ಕಂಪ್ಯೂಟರ್ ಶಿಕ್ಷಕಿ ಬೇಕಾಗಿದ್ದಾರೆ. ಕನಿಷ್ಠ 2 ವರ್ಷ ಅನುಭವವಿದ್ದು, BBM, BCA ಅಥವಾ B.Com ನಲ್ಲಿ ಉತ್ತೀರ್ಣರಾಗಿದ್ದು, Basic, Window, Foxpro, MS Office, Power Point, Corel draw, PhotoShop, Tally ಇನ್ನೂ ಮುಂತಾದ ಕಂಪ್ಯೂಟರ್ ಶಿಕ್ಷಣದಲ್ಲಿ ಉತ್ತೀರ್ಣರಾಗಿರುವ ಶಿಕ್ಷಕಿ ಬೇಕಾಗಿದ್ದಾರೆ.

ಆಸಕ್ತಿವುಳ್ಳ ಅಭ್ಯರ್ಥಿಗಳು ಸದರಿ ವಿಳಾಸಕ್ಕೆ ಪೂರ್ಣ ಮಾಹಿತಿ ಹಾಗೂ ವಿದ್ಯಾರ್ಹತೆ ಪ್ರಮಾಣ ಪತ್ರಗಳೊಂದಿಗೆ ಅರ್ಜಿಯನ್ನು ದಿನಾಂಕ 9.10.2024ರೊಳಗೆ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಕ್ಕೆ ಸಂಪರ್ಕಿಸಿ.

ಕೆ.ಕೆ. ಸುಶೀಲಮ್ಮ
ಅಧ್ಯಕ್ಷರು

ಡಿ.ಡಿ. ಸುವರ್ಣಮ್ಮ
ಕಾರ್ಯದರ್ಶಿ

# ಭಕ್ತಿ - ಶ್ರದ್ಧೆ ಹೆಚ್ಚಾದಷ್ಟೂ ನಾಡು ಸಮೃದ್ಧಿ

## ಹರಿಹರ: ಧರ್ಮ ಜಾಗೃತಿ,ಗುರುರಕ್ಷೆ ಕಾರ್ಯಕ್ರಮದಲ್ಲಿ ಓಂಕಾರ ಶಿವಾಚಾರ್ಯ ಸ್ವಾಮೀಜಿ



ಹರಿಹರ, ಸೆ.30- ದೇವರ ಬಗ್ಗೆ ಭಕ್ತಿ, ಶ್ರದ್ಧೆ ಹೆಚ್ಚಾದಷ್ಟೂ ನಾಡು ಸಮೃದ್ಧಿಯಿಂದ ಇರುತ್ತದೆ. ಮನುಷ್ಯನ ಬದುಕು ಸುಸ್ಥಿರವಾಗಿ ಸಾಗುತ್ತದೆ ಎಂದು ಆವರಗೊಳ್ಳ ಶ್ರೀ ಓಂಕಾರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ನಗರದ ವಾಗೀಶ ಬಡಾವಣೆಯ ಶ್ರೀ ಮೂಗ ಬಸವೇಶ್ವರ ದೇವಸ್ಥಾನದಲ್ಲಿ ನಡೆದ 48 ದಿನದ ಮಂಡಲ ಪೂಜಾ ಸಮಾರೋಪ, ಧರ್ಮಜಾಗೃತಿ ಮತ್ತು ಗುರುರಕ್ಷೆ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ದೇವರ ಪೂಜೆ ಹಾಗೂ ಆರಾಧನೆಯಿಂದ ಅಧ್ಯಾತ್ಮಿಕ ಒಲವು ಉಂಟಾಗುವುದರ ಜೊತೆಗೆ ಕಷ್ಟಗಳು ದೂರವಾಗುತ್ತವೆ. ಎಲ್ಲರೂ ಸಹಬಾಳ್ವೆಯಿಂದ ಇದ್ದಾಗ ಸಮಾಜದಲ್ಲಿ ಮುಂದಿನ ಪೀಳಿಗೆ ಸ್ಮರಿಸುವಂತಹ ಕಲ್ಯಾಣ ಕೆಲಸವನ್ನು ಮಾಡಲು ಸಾಧ್ಯವಾಗುತ್ತದೆ ಎಂದರು.

ವಿದೇಶದಲ್ಲಿ ಧರ್ಮದ ಆಚರಣೆಗಿಂತ ಹಣ ಸಂಪಾದನೆ ಹೆಚ್ಚು ಪ್ರಾಮುಖ್ಯತೆ ಇದೆ. ಆದರೆ ಭಾರತ ದೇಶದಲ್ಲಿ ಅಧ್ಯಾತ್ಮಿಕತೆಗೆ ಹೆಚ್ಚು ಒಲವನ್ನು ತೋರಿಸುವುದರಿಂದ ನಮ್ಮ ದೇಶ ಅಧ್ಯಾತ್ಮದ ನೆಲೆ ಬೀಡು ಆಗಿದೆ ಎಂದರು.

ಲೋಕದ ಉಪಕಾರಕ್ಕೆ ಹರಿಹರ ನಗರದಲ್ಲಿ ಮೂರ್ಕಲ್ ಮನೆತನದವರ ಕೊಡುಗೆ ಅಪಾರ. ಅವರು ಮಾಡಿದ ಧರ್ಮ ಹಾಗೂ ಪುಣ್ಯದ ಕೆಲಸದ ಇಂದಿಗೂ ಸಮಾಜದ ಜನರು ಸ್ಮರಿಸುತ್ತಾರೆ ಎಂದು ಹೇಳಿದರು.

ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಮೂಗ ಬಸವೇಶ್ವರ ದೇವರ ಆಶೀರ್ವಾದದಿಂದ ನಾಡಿನಾದ್ಯಂತ ಮಳೆ, ಬೆಳೆಗಳು ಚೆನ್ನಾಗಿ ಆಗುವಂತಾಗಲಿ ಎಂದರಲ್ಲದೆ, ಪೋಷಕರು ಮನೆಯಲ್ಲಿ ಮಕ್ಕಳಿಗೆ ದೇವರು, ಧರ್ಮದ ಬಗ್ಗೆ ತಿಳಿಸುವಂತಹ ಕಾರ್ಯ ಆಗಬೇಕು ಎಂದರು.

ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಎಸ್.ಎ. ಮುರುಗೇಶ್ ಆರಾಧ್ಯ ಮಾತನಾಡಿ, ಪೂರ್ವಜರು ನಡೆಸಿಕೊಂಡು ಬಂದಿರುವ ಹಿಂದಿನ ಧರ್ಮವೇ ಸನಾತನ ಧರ್ಮವಾಗಿದೆ. ಅನ್ಯ ಧರ್ಮದವರ ಆಚರಣೆ ವಿರೋಧ ಮಾಡುವುದಕ್ಕಿಂತ ನಮ್ಮ ಧರ್ಮವನ್ನು ಉಳಿಸಲು ಮುಂದಾಗಬೇಕು ಎಂದರು.

ಈ ವೇಳೆ ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಮೂರ್ಕಲ್ ಶಿವಶಂಕರ್, ಆರ್. ಆರ್. ಕಾಂತರಾಜ್, ಪತ್ರಕರ್ತ ಎಂ. ಚಿದಾನಂದ ಕಂಚಿಕೇರಿ, ಉಪನ್ಯಾಸಕಿ, ಶ್ವೇತಾ ಈಶ್ವರ ಕತ್ತಲಗೇರಿ, ಸಮಾಳ ಚಂದ್ರಪ್ಪ, ಮಿಥುನ್ ಮೂರ್ಕಲ್, ಹೆಚ್. ಲಿಂಗೇಶ್, ಶಿಲ್ಪಿ ಅಣ್ಣಪ್ಪ ಆಚಾರ್, ಇಂದೂದರ ಸ್ವಾಮಿ, ಚಂದ್ರಮ್ಮ ಕರಿಬಸಪ್ಪ, ಸುರೇಶ ಸಕ್ರಿ, ಟೈಲರ್ ಗಣೇಶ, ಕೊಂಡಜ್ಜಿ ರೇವಣಸಿದ್ದಪ್ಪ, ಮೂರ್ಕಲ್ ಜಯವಿಭವ, ಹಿಂದೂ ಮಹಾಗಣಪತಿ ಟ್ರಸ್ಟ್ ಅಧ್ಯಕ್ಷ ಬಸವನಗೌಡ, ಹಿಂದೂ ಜಾಗರಣ ವೇದಿಕೆಯ ದಿನೇಶ್ ಇತರರಿಗೆ ಗುರು ರಕ್ಷೆ ನೀಡಿ ಗೌರವಿಸಲಾಯಿತು.

ಹಿರೇಮಠ ಸ್ವಾಮೀಜಿ, ಮೂರ್ಕಲ್ ಮುರುಗೇಂದ್ರಪ್ಪ, ವೀರೇಂದ್ರ ಕೊಂಡಜ್ಜಿ, ವಿಜಯ್, ಬಸವರಾಜ್ ಕೊಂಡಜ್ಜಿ, ಜಗದೀಶ್ವರಯ್ಯ ಹಿರೇಮಠ, ಜಿ.ಬಿ. ರಮೇಶ್ ದಾವಣಗೆರೆ, ಶಂಭುಲಿಂಗಪ್ಪ, ಜಿ.ಕೆ. ಮಲ್ಲಿಕಾರ್ಜುನ್, ಸುಂದರೇಶ್ ಇತರರು ಹಾಜರಿದ್ದರು.



# ಸರ್ವರಿಗೂ ವಿದ್ಯೆಯನ್ನು ಧಾರೆ ಎರೆದ ಜಯದೇವ ಶ್ರೀ

**(6ನೇ ಪುಟದಿಂದ)** ದಿನ ನಿಗದಿಯಾಗುತ್ತಿದ್ದು, ಇಂತಹ ಪರಿಸ್ಥಿತಿ ಬದಲಾಗಬೇಕಿದೆ. ಭಕ್ತಿಯಿಂದ ಆಚರಿಸುವಂತಾಗಬೇಕು ಎಂದು ಹೇಳಿದರು.

ಮಹಾನಗರ ಪಾಲಿಕೆ ಉಪ ಮೇಯರ್ ಸೋಗಿ ಶಾಂತಕುಮಾರ್ ಮಾತನಾಡಿ, ನಾನು ಉಪ ಮೇಯರ್ ಆಗಿ ಆಯ್ಕೆಯಾಗಲು ಜಯದೇವ ಜಗದ್ಗುರುಗಳ ಕೃಪಾಶೀರ್ವಾದ ಕಾರಣ. ನಿತ್ಯ ಶಿವಯೋಗಾಶ್ರಮದ ಆವರಣದಲ್ಲಿರುವ ಜಯದೇವ ಶ್ರೀ ಅಥಣಿ ಮುರುಗೇಂದ್ರ ಶರಣರ ಗದ್ದುಗೆಗೆ ಬಂದು ಭಕ್ತಿ ಸಮರ್ಪಿಸಿದ ನಂತರವೇ ನನ್ನ ಕಾಯಕ ಮುಂದುವರೆಯುವುದು. ನಂಬಿದ ಭಕ್ತರಿಗೆ ಒಳಿತಾಗುತ್ತಲೇ ಬಂದಿದೆ ಎಂದು ತಿಳಿಸಿದರು.

ಗುರುಮಠಕಲ್ ಶ್ರೀ ಶಾಂತವೀರ ಗುರು ಮುರುಘರಾಜೇಂದ್ರ ಸ್ವಾಮೀಜಿ, ಹಾವೇರಿ ಶ್ರೀ ಬಸವ ಶಾಂತಲಿಂಗ ಸ್ವಾಮೀಜಿ, ಶಿಕಾರಿಪುರದ ಶ್ರೀ ಚನ್ನಬಸವ ಸ್ವಾಮೀಜಿ, ನಿಪ್ಪಾಣಿಯ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ, ಚಿತ್ರದುರ್ಗದ ಶ್ರೀ ಬಸವ ಮುರುಘೇಂದ್ರ ಸ್ವಾಮೀಜಿ, ಹೊಳಲ್ಕೆರೆಯ ಶ್ರೀ ತಿಪ್ಪೇರುದ್ರ ಸ್ವಾಮೀಜಿ, ತಿಳುವಳ್ಳಿಯ ಶ್ರೀ ಬಸವ ನಿರಂಜನ ಸ್ವಾಮೀಜಿ, ಐರಣಿಯ ಶ್ರೀ ಗಜದಂಡ ಸ್ವಾಮೀಜಿ, ಶ್ರೀ ಪ್ರಭುಲಿಂಗ ಸ್ವಾಮೀಜಿ, ಮೈಸೂರಿನ ಶ್ರೀ ಬಸವಲಿಂಗಮೂರ್ತಿ ಸ್ವಾಮೀಜಿ, ಹುಲಸೂರು ಶ್ರೀ ಶಿವಾನಂದ ಸ್ವಾಮೀಜಿ, ಚಿತ್ರದುರ್ಗ ಶ್ರೀ ಬಸವಾದಿತ್ಯ ದೇವರು, ಸಿ.ಆರ್. ನಸೀರ್ ಅಹಮದ್, ಬೆಳ್ಳೂಡಿ ಮಂಜುನಾಥ್, ಶಿವಯೋಗಾಶ್ರಮ ಟ್ರಸ್ಟ್ ಪದಧಿಕಾರಿಗಳು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಇದೇ ವೇಳೆ ಮಹಾನಗರ ಪಾಲಿಕೆ ಸದಸ್ಯರಾದ ಬಸಪ್ಪ ದಂಪತಿಯನ್ನು ಹಾಗೂ ಪ್ರವಚನಕಾರ ಮಹಾಂತೇಶ್ ಶಾಸ್ತ್ರಿ ಅವರನ್ನು ಗೌರವಿಸಲಾಯಿತು.

# ಶ್ರೀ ರಾಮಲಿಂಗೇಶ್ವರಸ್ವಾಮಿ ಪ.ಪೂ. ಕಾಲೇಜಿನ ಬಾಲಕಿಯರು ರಾಜ್ಯಮಟ್ಟಕ್ಕೆ



**ಮಲೇಬೆನ್ನೂರು**

ಮಲೇಬೆನ್ನೂರು, ಸೆ. 30- ಈಚೆಗೆ ನಡೆದ ಪದವಿ ಪೂರ್ವ ಕಾಲೇಜುಗಳ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಹರನಹಳ್ಳಿ-ಕೆಂಗಾಪುರದ ಶ್ರೀ ರಾಮಲಿಂಗೇಶ್ವರ ಸ್ವಾಮಿ ಪ.ಪೂ. ಕಾಲೇಜಿನ ಬಾಲಕಿಯರು ಕಬಡ್ಡಿ ಪಂದ್ಯದಲ್ಲಿ ಐತಿಹಾಸಿಕ ಗೆಲುವು ಸಾಧಿಸಿ, ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಜಿಲ್ಲಾ ಮಟ್ಟದ ಬಾಲಕಿಯರ ಕಬಡ್ಡಿ ಪಂದ್ಯಗಳಲ್ಲಿ ಜಗಳೂರು, ಹರಿಹರ ತಂಡಗಳನ್ನು ಸೋಲಿಸಿ, ಅಂತಿಮ ಪಂದ್ಯದಲ್ಲಿ ದಾವಣಗೆರೆ ತಂಡದ ವಿರುದ್ಧ ಮುಖಾಮುಖಿಯಾಗಿ ಈ ರೋಚಕ ಪಂದ್ಯದಲ್ಲಿ ಅಭೂತ ಪೂರ್ವ ಗೆಲುವು ಸಾಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಪಂದ್ಯದಲ್ಲಿ ತಂಡದ ನಾಯಕಿ ಹೇಮಶ್ರೀ, ಲೀಲಾವತಿ, ಮಂಜುಳಾ, ಸಂಜನಾ, ಸಹನಾ, ಅಭಿನಯ, ದರ್ಶಿನಿ, ಅಮೃತ, ರಕ್ಷಾ ಇದ್ದರು.ವಿದ್ಯಾರ್ಥಿನಿಯರನ್ನು ಶ್ರೀ ರಾಮಲಿಂಗೇಶ್ವರ ಸ್ವಾಮೀಜಿ, ಸಂಸ್ಥೆಯ ಅಧ್ಯಕ್ಷ ಹೆಚ್.ಆರ್. ವಿಜಯಕುಮಾರ್, ಪ್ರಾಂಶುಪಾಲ ಟಿ.ಎಂ. ದಾದಾಪೀರ್ ಅಭಿನಂದಿಸಿದ್ದಾರೆ.

# ಚುನಾವಣಾ ಬಾಂಡ್ : ನಿರ್ಮಲಾ ವಿರುದ್ಧದ ಎಫ್ಐಆರ್ ಗೆ ತಡೆ

**(1ನೇ ಪುಟದಿಂದ)** ತಿಳಿಸಿದ್ದಾರೆ. ಮುಂದಿನ ವಿಚಾರಣೆಯನ್ನು ಅಕ್ಟೋಬರ್ 22ಕ್ಕೆ ನಿಗದಿ ಪಡಿಸಲಾಗಿದೆ.

ಕಟೀಲ್ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲ ಕೆ.ಜಿ. ರಾಘವನ್, ದೂರಿನಲ್ಲಿ ಇಲ್ಲವೇ ಮ್ಯಾಜಿಸ್ಟ್ರೇಟರು ಹೊರಡಿಸಿರುವ ಆದೇಶದಲ್ಲಿ ಯಾವುದೇ ಹಣ ವಸೂಲಿಯು ಮೇಲ್ನೋಟಕ್ಕೆ ಕಂಡು ಬರುವ ಅಂಶಗಳಿಲ್ಲ ಎಂದು ಹೇಳಿದರು. ಅಲ್ಲದೇ, ದೂರು ಸಹ ಅಸ್ಪಷ್ಟವಾಗಿದೆ. ಸೆಕ್ಷನ್ 384 ಅನ್ನು ಯಾರು ಬೇಕಾದರೂ ಬಳಸಲಾಗದು. ಸಂತ್ರಸ್ತರು ಮಾತ್ರ ಈ ಸೆಕ್ಷನ್ ಬಳಸಬಹುದು ಎಂದು ವಾದಿಸಿದರು.

# ಅನುಪಮ್ ಖೇರ್ ಚಿತ್ರದ ನೋಟು ನೀಡಿ ವಂಚನೆ

**(1ನೇ ಪುಟದಿಂದ)** 1.6 ಕೋಟಿ ರೂ. ಕೊಡುವುದಾಗಿ ಹೇಳಿದ್ದರು.

ಸೆಪ್ಟೆಂಬರ್ 24ರಂದು ಪಟೇಲ್‌ರನ್ನು ಹವಾಲಾ ವ್ಯವಹಾರ ನಡೆಯುವ ಅಂಗಾಡಿಯ ಪೇಡಿಯಲ್ಲಿ ಭೇಟಿ ಮಾಡಿ ಬಂಗಾರ ಹಾಗೂ ಹಣ ವಿನಿಮಯ ಮಾಡಿಕೊಳ್ಳುವಂತೆ ಠಕ್ಕರ್ ಅವರು ತಮ್ಮ ಸಿಬ್ಬಂದಿಗೆ ತಿಳಿಸಿದ್ದರು. ಹೇಳಿದ ಸ್ಥಳಕ್ಕೆ ಮೂವರು ಬಂದಿದ್ದರು. ಬಂಗಾರದ ಅಂಗಡಿಯ ಸಿಬ್ಬಂದಿ ಬಂಗಾರ ನೀಡಿ 500 ರೂ.ಗಳ 1.30 ಕೋಟಿ ರೂ.ಗಳ ಬಂಡಲ್‌ಗಳನ್ನು ಪಡೆದರು. ಹಣ ನೀಡಿದವರು ತಾವೇ ತಂದಿದ್ದ ಯಂತ್ರದಲ್ಲಿ ಹಣ ಎಣಿಸಿಕೊಳ್ಳುವಂತೆ ತಿಳಿಸಿದ್ದರು.

ಅದರಲ್ಲಿ ಹಣ ಎಣಿಸಿಕೊಂಡ ನಂತರ, ಖರೀದಿದಾರರು ಬಂಗಾರದ ಗಟ್ಟಿಗಳನ್ನು ಪಡೆದುಕೊಂಡರು. ಉಳಿದ 30 ಲಕ್ಷ ರೂ.ಗಳನ್ನು ನೆರೆಯ ಅಂಗಡಿಯಿಂದ ತರುತ್ತೇವೆ. ಅಲ್ಲಿಯವರೆಗೂ ಒಬ್ಬರು ಇಲ್ಲೇ ಇರುತ್ತಾರೆ ಎಂದು ಹೇಳಿ, ಇಬ್ಬರು ಹೊರ ನಡೆದರು.

ನಂತರದಲ್ಲಿ ಈ ನೋಟುಗಳು ನಕಲಿ ಎಂಬುದು ಪತ್ತೆಯಾಯಿತು. ಜೊತೆಯಲ್ಲಿದ್ದ ಮೂರನೇ ವ್ಯಕ್ತಿಯನ್ನು ಪ್ರಶ್ನಿಸಿದಾಗ, ನಾನು ಅಂಗಡಿಯಾ ಪೇಡಿಗೆ ಹಣ ಎಣಿಕೆ ಯಂತ್ರವನ್ನು ಕೊಡಲಷ್ಟೇ ಬಂದಿದ್ದೇನೆ ಎಂದಿದ್ದಾನೆ.

ಈ ಘಟನೆ ನಡೆಯುವ ಎರಡು ದಿನಗಳ ಮೊದಲಷ್ಟೇ ಅಂಗಡಿಯಾ ಪೇಡಿ ತೆರೆಯಲಾಗಿತ್ತು ಎಂಬುದು ಪೊಲೀಸರ ತನಿಖೆಯಿಂದ ತಿಳಿದು ಬಂದಿದೆ. ಈ ಬಗ್ಗೆ ಗುರುತಿಸಲಾಗದ ಇಬ್ಬರು ವ್ಯಕ್ತಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

# ಚನ್ನಗಿರಿಯಲ್ಲಿ ಶೇ.10 ಮಳೆ ಕೊರತೆ

**(1ನೇ ಪುಟದಿಂದ)** ವಾಡಿಕೆ ಮಳೆ ಇದ್ದರೆ, ವಾಸ್ತವಿಕವಾಗಿ 448 ಮಳೆಯಾಗಿದೆ. ಮಳೆ ಪ್ರಮಾಣ ಶೇ.29ರಷ್ಟು ಹೆಚ್ಚಾಗಿದೆ.

ಹೊನ್ನಾಳಿಯಲ್ಲಿ 366 ಮಿ.ಮೀ. ವಾಡಿಕೆ ಮಳೆ ಇದ್ದರೆ, ವಾಸ್ತವಿಕವಾಗಿ 502 ಮಿ.ಮೀ. ಮಳೆಯಾಗಿದೆ. ಶೇ.37ರಷ್ಟು ಮಳೆ ಹೆಚ್ಚಾಗಿದೆ. ಜಗಳೂರಿನಲ್ಲಿ ವಾಡಿಕೆ ಮಳೆ 287 ಮಿ.ಮೀ. ಆಗಿದ್ದರೆ, ವಾಸ್ತವಿಕವಾಗಿ 517 ಮಿ.ಮೀ. ಮಳೆಯಾಗಿದೆ. ವಾಡಿಕೆಗಿಂತ ಶೇ.80ರಷ್ಟು ಹೆಚ್ಚು ಮಳೆಯಾಗಿದೆ.

ನ್ಯಾಮತಿಯಲ್ಲಿ ವಾಡಿಕೆ ಮಳೆ ಪ್ರಮಾಣ 535 ಮಿ.ಮೀ. ಆಗಿದ್ದರೆ, ವಾಸ್ತವಿಕವಾಗಿ 572 ಮಿ.ಮೀ. ಮಳೆಯಾಗಿದೆ. ಶೇ.7ರಷ್ಟು ಮಳೆ ಹೆಚ್ಚಾಗಿದೆ.

ದಾವಣಗೆರೆ ಜಿಲ್ಲೆಯಲ್ಲಿ ವಾಡಿಕೆ ಮಳೆ ಪ್ರಮಾಣ 393 ಮಿ.ಮೀ. ಆಗಿದ್ದರೆ, ವಾಸ್ತವಿಕವಾಗಿ 506 ಮಿ.ಮೀ. ಮಳೆಯಾಗಿದೆ. ವಾಡಿಕೆಗಿಂತ ಮಳೆ ಪ್ರಮಾಣ ಶೇ.29ರಷ್ಟು ಹೆಚ್ಚಾಗಿದೆ.

ಸೆಪ್ಟೆಂಬರ್ ತಿಂಗಳಲ್ಲಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿದೆ. ಸೆಪ್ಟೆಂಬರ್‌ನಲ್ಲಿ 29ರವರೆಗೆ ಜಿಲ್ಲೆಯಲ್ಲಿ ವಾಡಿಕೆ ಮಳೆ ಪ್ರಮಾಣ 93.6 ಮಿ.ಮೀ. ಆಗಿದ್ದರೆ, ವಾಸ್ತವಿಕವಾಗಿ 33.2 ಮಿ.ಮೀ. ಮಾತ್ರ ಮಳೆಯಾಗಿದೆ. ಮಳೆಯ ಕೊರತೆ ಶೇ.65ರಷ್ಟಿದೆ.

# ಬೆಂಗಳೂರಿನಲ್ಲಿ ನೆಲೆಸಿದ್ದ ಪಾಕಿಸ್ತಾನ್-ಬಾಂಗ್ಲಾ ದಂಪತಿ ಬಂಧನ

ಬೆಂಗಳೂರು, ಸೆ. 30 - ನಕಲಿ ಗುರುತಿನಲ್ಲಿ ಬೆಂಗಳೂರಿನಲ್ಲಿ ಆರು ವರ್ಷಗಳಿಂದ ನೆಲೆಸಿದ್ದ ಪಾಕಿಸ್ತಾನದ ವ್ಯಕ್ತಿಯನ್ನು ಆತನ ಪತ್ನಿ ಹಾಗೂ ಇಬ್ಬರು ಇತರರ ಜೊತೆ ಬಂಧಿಸಲಾಗಿದೆ. ಪತ್ನಿ ಬಾಂಗ್ಲಾ ದೇಶದವಳಾಗಿದ್ದು, ಅಲ್ಲಿಯೇ ಉಭಯರು ಮದುವೆಯಾಗಿದ್ದರು ಎಂಬುದು ತನಿಖೆಯಿಂದ ತಿಳಿದು ಬಂದಿದೆ. 2014ರಲ್ಲಿ ದೆಹಲಿಗೆ ಬಂದಿದ್ದ ದಂಪತಿ, 2018ರಲ್ಲಿ ಬೆಂಗಳೂರಿಗೆ ತೆರಳಿದ್ದರು. ಉಭಯರ ಜೊತೆಗೆ ಪಾಕಿಸ್ತಾನದ ವ್ಯಕ್ತಿಯ ಅತ್ತೆ - ಮಾವಂದಿರನ್ನೂ ಬಂಧಿಸಲಾಗಿದೆ.

ನಕಲಿ ದಾಖಲೆಗಳ ಆಧಾರದ ಮೇಲೆ ಈ ನಾಲ್ವರು ಬೆಂಗಳೂರಿನ ಜಿಗಣಿಯಲ್ಲಿ ನೆಲೆಸಿದ್ದಾರೆ ಎಂದು ದೂರು ದಾಖಲಿಸಲಾಗಿತ್ತು. ತನಿಖೆಯ ನಂತರ ಅವರನ್ನು ಬಂಧಿಸಲಾಗಿದೆ. ವ್ಯಕ್ತಿಯ ಜಾಲ ಹಾಗೂ ಆತನ ಚಟುವಟಿಕೆಗಳ ಬಗ್ಗೆ ತನಿಖೆ ನಡೆಸಲಾಗುತ್ತಿದೆ.

**ಭದ್ರಾ ಜಲಾಶಯ**

ನೀರಿನ ಮಟ್ಟ : 186
ಒಳ ಹರಿವು : 3950 ಕ್ಯೂಸೆಕ್ಸ್
ಹೊರ ಹರಿವು : 3950 ಕ್ಯೂಸೆಕ್ಸ್
ಕಳೆದ ವರ್ಷ : 159 ಅಡಿ 9 ಇಂಚು

# ಆಂಜನೇಯ ಬಡಾವಣೆ ನಾಗರಿಕ ಹಿತ ರಕ್ಷಣಾ ಸಮಿತಿ ವಾರ್ಷಿಕ ಮಹಾಸಭೆ



ದಾವಣಗೆರೆ, ಸೆ. 30- ಆಂಜನೇಯ ಬಡಾವಣೆ ನಾಗರಿಕ ಹಿತ ರಕ್ಷಣಾ ಸಮಿತಿಯ 26ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಸಮಿತಿಯ ಕಾರ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಸಮಿತಿಯ ಅಧ್ಯಕ್ಷರಾದ ಶ್ರೀಮತಿ ಕುಸುಮಾ ಲೋಕೇಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಕೆ.ಎಂ. ಗುರುಬಸವರಾಜ್, ಗೌರವ ಸಲಹೆಗಾರರಾದ ಎಸ್.ಬಿ. ರುದ್ರಗೌಡ, ಎಲ್.ಎಸ್. ಅಜಗಣ್ಣನವರ್, ಖಜಾಂಚಿ ಎಂ.ಹೆಚ್. ರಂಗಪ್ಪ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶ್ರೀಮತಿ ಸುಶಿಲಾ ಗುರುಬಸವರಾಜ್ ಪ್ರಾರ್ಥಿಸಿದರು. ಗುರುಬಸವರಾಜ್ ಸ್ವಾಗತಿಸಿದರು. ಸಮಿತಿಯ ಗೌರವಾಧ್ಯಕ್ಷ ಕೆ.ಎಸ್. ಈಶ್ವರಪ್ಪ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಂಘಟನಾ ಕಾರ್ಯದರ್ಶಿ ಶ್ರೀಮತಿ ಮಮತಾ ನಾಗರಾಜ್ ವಾರ್ಷಿಕ ವರದಿ ಮಂಡಿಸಿದರು. ಎಂ.ಹೆಚ್. ರಂಗಪ್ಪ ವಾರ್ಷಿಕ ಆಯವ್ಯಯ ಮಂಡಿಸಿ, ಅನುಮೋದನೆ ಪಡೆದರು. ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆಯನ್ನು ಎಸ್.ಬಿ. ರುದ್ರಗೌಡ ನೆರವೇರಿಸಿದರು.

ನೂತನ ಅಧ್ಯಕ್ಷರಾಗಿ ನಾಗಪ್ಪ ತಳಕಲ್ ನೇಮಕಗೊಂಡರು. ನಿರ್ದೇಶಕರಾದ ಶ್ರೀಮತಿ ಸುಜಾತ ರವಿ ಕಾರ್ಯಕ್ರಮ ನಿರೂಪಿಸಿದರು. ಸಮಿತಿಯ ನಿರ್ದೇಶಕ ಮಲ್ಲಿಕಾರ್ಜುನ ಚನ್ನಳ್ಳಿ ವಂದಿಸಿದರು. ರಂಗಪ್ಪ ಉಪಹಾರದ ಪ್ರಾಯೋಜಕರಾಗಿದ್ದರು.

# ಮುಸ್ಲಿಂ ಜನಸಂಖ್ಯೆ ಹೆಚ್ಚಳದ ಕಾರಣದಿಂದ 2027ರಲ್ಲಿ ಬಿಜೆಪಿಗೆ ಸೋಲು : ಎಸ್ಪಿ ಶಾಸಕ

ಬಿಜ್ನೌರ್, ಸೆ. 30 - ಹೆಚ್ಚುತ್ತಿರುವ ಮುಸ್ಲಿಮರ ಜನಸಂಖ್ಯೆ ಕಾರಣದಿಂದಾಗಿ 2027ರ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಧಿಕಾರದಿಂದ ನಿರ್ಗಮಿಸಲಿದೆ ಎಂದು ಸಮಾಜವಾದಿ ಪಕ್ಷದ ಶಾಸಕ ಮಹಬೂಬ್ ಅಲಿ ಹೇಳಿದ್ದಾರೆ.ಸಭೆಯೊಂದರಲ್ಲಿ ಮಾತನಾಡಿರುವ ಅವರು, ಮುಸ್ಲಿಮರ ಜನಸಂಖ್ಯೆ ಹೆಚ್ಚಾಗುವುದು ಸಮಾಜವಾದಿ ಪಕ್ಷಕ್ಕೆ ಅನುಕೂಲ ತರಲಿದೆ. 2027ರಲ್ಲಿ ಜನಸಂಖ್ಯೆ ಎಷ್ಟು ಹೆಚ್ಚಾಗಲಿದೆ ಎಂದರೆ ಸಮಾಜವಾದಿ ಪಕ್ಷ ಅಧಿಕಾರಕ್ಕೆ ಬರಲಿದೆ ಎಂದು ಹೇಳಿದರು.

# ಇ.ಡಿ. ಸಂಕಟ

**(1ನೇ ಪುಟದಿಂದ)** ಮುಡಾ ಪ್ರಕರಣದ ಸಿಬಿಐ ತನಿಖೆಗೆ ಕೋರಿ ದೂರುದಾರ ಸ್ನೇಹಮಯಿ ಕೃಷ್ಣ ಹೈಕೋರ್ಟ್ ಮೊರೆ ಹೋಗಿದ್ದಾರೆ. ಲೋಕಾಯುಕ್ತ ರಾಜ್ಯ ಸರ್ಕಾರದ ಅಧೀನದಲ್ಲಿ ನಡೆಯುವ ಸಂಸ್ಥೆಯಾಗಿದೆ. ಹೀಗಾಗಿ ಪಾರದರ್ಶಕ ತನಿಖೆಯಾಗಬೇಕು ಎಂದಾದರೆ ಪ್ರಕರಣ ಸಿಬಿಐಗೆ ಕೊಡಿ ಎಂದು ಮನವಿ ಮಾಡಿದ್ದಾರೆ. ಈ ಸಂಬಂಧ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ದಸರಾ ರಜೆ ಬಳಿಕ ಈ ಅರ್ಜಿ ವಿಚಾರಣೆ ನಡೆಯುವ ಸಾಧ್ಯತೆಗಳಿವೆ. ಇದು ಸಿದ್ದರಾಮಯ್ಯ ಅವರ ಸಮ ಸ್ಯೆಗಳನ್ನು ಮತ್ತಷ್ಟು ಹೆಚ್ಚಿಸುವ ಸಾಧ್ಯತೆ ಇದೆ.


**ಮನೆಗಳು ಮಾರಾಟಕ್ಕಿವೆ**
ಎಸ್.ಎಸ್. ಬಿ ಬ್ಲಾಕ್, ದಕ್ಷಿಣ 30x40 ಡುಪ್ಲೆಕ್ಸ್, ಆಂಜನೇಯ ಬಡಾವಣೆ ಉತ್ತರ 30x40 ಮೇಲೆ ಕೆಳಗೆ, ಶಿವ-ಪಾರ್ವತಿ ಬಡಾವಣೆ ಉತ್ತರ 30x40 ಮೇಲೆ+ಕೆಳಗೆ. ತರಳಬಾಳು ಬಡಾವಣೆ ದಕ್ಷಿಣ 30x35 ಮೇಲೆ, ಕೆಳಗೆ.
ಐಗೂರು ವಿಜಯಕುಮಾರ್
99457 02495

**ಸೈಟುಗಳು ಮಾರಾಟಕ್ಕಿವೆ**
ಪಿ.ಬಿ.ರಸ್ತೆ ಹತ್ತಿರ ಶನೈಶ್ವರ ದೇವಸ್ಥಾನ ಹಿಂಭಾಗದಲ್ಲಿ 30x40 30x40 East ಅಕ್ಕ-ಪಕ್ಕ, 60x40 East, Rate : 2600/-
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
50x80 North, 40x60 North 120 ಅಡಿ ರೋಡ್‌ಗಿದೆ. 50x80 East, 40x60 East, 40x60, 40x60 South ಅಕ್ಕ-ಪಕ್ಕ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಕೆಲಸ ಖಾಲಿ ಇದೆ**
ಹೋಲ್‌ಸೇಲ್ ಫಾರ್ಮಾದಲ್ಲಿ ಡೆಲಿವರಿ ಬಾಯ್ ಕೆಲಸ ಖಾಲಿ ಇದೆ. ಕರೆ ಮಾಡಿ :
74066 59695
79751 77934

**ಸೈಟುಗಳು ಮಾರಾಟಕ್ಕಿವೆ**
ಹೊಸ ಕುಂದುವಾಡ ಹತ್ತಿರ ಸುಶಿ ಕನ್‌ವೆನ್ಷನ್ ಹಾಲ್ ಹಿಂಭಾಗ ಹೊಸ ಬಡಾವಣೆಗಳಲ್ಲಿ 30x50 ಉತ್ತರ, 30x40 ಪಶ್ಚಿಮ, 30x5 ಪೂರ್ವ, 30x50 ಉತ್ತರ-ಪಶ್ಚಿಮ ಕಾರ್ನರ್.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಡ್ರೈವರ್ ಬೇಕಾಗಿದ್ದಾರೆ**
ನಗರದ ಪ್ಯಾಕೇಜ್ಡ್ ಡ್ರಿಂಕಿಂಗ್ ವಾಟರ್ ಫ್ಯಾಕ್ಟರಿಗೆ ಟಾಟಾ ಏಸ್ ಹಾಗೂ ಟಾಟಾ ವಿಂಟ್ರಾ -30 ಓಡಿಸಲು ಲೈಸೆನ್ಸ್ ಹೊಂದಿರುವವ ಡ್ರೈವರ್ ಕೆಲಸಕ್ಕೆ ಬೇಕಾಗಿದ್ದಾರೆ. ಆಸಕ್ತರು ಖುದ್ದಾಗಿ ಸಂಪರ್ಕಿಸಿ :
ಪ್ರತೀಕ್ ಎಂಟರ್‌ಪ್ರೈಸಸ್
ನಾಗನೂರು- ಶಾಮನೂರು ರಸ್ತೆ, ಶಾಮನೂರು, ದಾವಣಗೆರೆ.
94481 10287

**ಲ್ಯಾಬ್ ಟೆಕ್ನೀಷಿಯನ್ ಕೆಲಸಕ್ಕೆ ಬೇಕಾಗಿದ್ದಾರೆ**
ಹುಡುಗ ಅಥವಾ ಹುಡುಗಿಯರು ಬೇಕಾಗಿದ್ದಾರೆ.
ಗುರುನಾಥ ಆಸ್ಪತ್ರೆ
ಕೆ.ಆರ್. ರಸ್ತೆ, ದಾವಣಗೆರೆ.
96633 67838

**ಸೈಟುಗಳು ಮಾರಾಟಕ್ಕಿವೆ**
ಎಸ್.ಎಸ್. ಎ ಬ್ಲಾಕ್, ದಕ್ಷಿಣ 30x49 ಕೆ.ಬಿ. ಬಡಾವಣೆ, ಲಾಯರ್ ರಸ್ತೆ ಹತ್ತಿರ, ದಕ್ಷಿಣ 40x40 ವಿದ್ಯಾನಗರ ಪಶ್ಚಿಮ 50x32 ಹಳೆ ಬನಶಂಕರಿ ಪೂರ್ವ+ಪಶ್ಚಿಮ 40x60 ಹಿಂದೆ-ಮುಂದೆ (4 ಸೈಟುಗಳು)
ಐಗೂರು ವಿಜಯಕುಮಾರ್
99457 02495

**ಸೈಟುಗಳು ಮಾರಾಟಕ್ಕಿವೆ**
1) ಬನಶಂಕರಿ ಲೇಔಟ್‌ನಲ್ಲಿ 30x38 West 40 ಅಡಿ ರೋಡ್‌ಗಿದೆ. Rate :4000/-,
2) ಡಾಲರ್ಸ್ ಕಾಲೋನಿಯಿಂದ ಸ್ವಲ್ಪ ಮೇಲೆ 30x50, North Rate : 3600/-
3) M.B ಸಿಟಿಯಲ್ಲಿ 40x60 East, Rate : 2000/-
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಎಸ್. ಎಸ್.ಎಲ್ ಸಿ ಪಾಸ್/ಫೇಲಾಗಿರುವವರು ಸೇಲ್ಸ್ ಮನ್ ಹಾಗೂ ಕಲೆಕ್ಷನ್ ಬಾಯ್ಸ್ ಕೆಲಸಕ್ಕೆ ಪಾರ್ಟ್ ಟೈಂ/ಫುಲ್ ಟೈಮ್ ಬೇಕಾಗಿದ್ದಾರೆ. 18 ವರ್ಷ ಮೇಲ್ಪಟ್ಟ ಅನುಭವವುಳ್ಳವರು ಸಂಪರ್ಕಿಸಿ :
ಮಣಿಕಂಠ ಏಜೆನ್ಸೀಸ್, ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
94482 33326, 78991 35660

**ಸೈಟುಗಳು ಮಾರಾಟಕ್ಕಿವೆ**
ಹದಡಿ ರಸ್ತೆ, ಶಿರಮಗೊಂಡನಹಳ್ಳಿ ಸುತ್ತ-ಮುತ್ತ 30x50 ಪಶ್ಚಿಮ ಅಕ್ಕ-ಪಕ್ಕ, 30x46 ಪೂರ್ವ ಅಕ್ಕ-ಪಕ್ಕ, 30x50 ಪೂರ್ವ, 30x40 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ರೆಡಿಮೇಡ್ ಗಾರ್ಮೆಂಟ್ ಶೋ ರೂಂನಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
ಸಂಪರ್ಕಿಸಿ : ಬುನಿಯಾದ್
ಮಹಿಳಾ ಸಮಾಜ ಕಾಂಪ್ಲೆಕ್ಸ್, ಅಶೋಕ ರಸ್ತೆ, ದಾವಣಗೆರೆ-2.
98445 82000

**ನೇರ ಸಂದರ್ಶನ**
ದಾವಣಗೆರೆಯ ಪ್ರತಿಷ್ಠಿತ ಸಸ್ಯಹಾರಿ ಊಟದ ಹೋಟೆಲ್‌ಗೆ ಕ್ಯಾಷಿಯರ್ ಮಹಿಳೆಯರು ಎರಡು - ಮೂರು ವರ್ಷ ಅನುಭವ, ಸರ್ವೀಸ್ ಹಾಗೂ ಕ್ಲೀನ್ ಮಾಡಲು ಹುಡುಗರು ಮತ್ತು ಮಹಿಳೆಯರು ಪಾರ್ಟ್ ಟೈಮ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಜೆ 6 ರಿಂದ ರಾತ್ರಿ 11ರ ವರೆಗೆ. ರೊಟ್ಟಿ, ಚಪಾತಿ ಮಾಡಲು ಮಹಿಳೆಯರು ಬೇಕಾಗಿದ್ದಾರೆ.
94489 80070, 88847 04025

**ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ ಫೈನಾನ್ಸ್,**
GST & Income tax ,
ನೋಂದಣಿ, ನವೀಕರಣ ಆಡಿಟ್ ಮಾಡಿಕೊಡುತ್ತೇವೆ.
94838 62779

**SALES EXECUTIVES WANTED**
Male / Female
Good Communication Skill
Attractive Salary
Kabbur Furnitures
Beside Sultan Diamonds & Gold Showroom
P.B Road, Davanagere.
8951916300

**ಬೇಕಾಗಿದ್ದಾರೆ**
ನಮ್ಮ ಆಫೀಸ್‌ನಲ್ಲಿ SSLCಯಾದ ಮಹಿಳೆಯರು ಬೇಕಾಗಿದ್ದಾರೆ.
ಶ್ರೀ ಈಶ್ವರಿ ಕ್ರಿಯೇಷನ್ಸ್
ವಸಂತ ರಸ್ತೆ, ದಾವಣಗೆರೆ.
94484 06702

**ಮನೆ ಮಾರಾಟಕ್ಕಿದೆ**
20x30 ಪಶ್ಚಿಮ ಮುಖದ ಮನೆ SOG ಕಾಲೋನಿ, ದಾವಣಗೆರೆ. ನೆಲ ಮಹಡಿ ಮತ್ತು 1ನೇ ಮಹಡಿ ಮನೆ. ಮಾರಾಟಕ್ಕಿದೆ.
96860 29934

**ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ**
ಡಿಗ್ರಿ ಪಾಸಾದ 18/35 ವರ್ಷದೊಳಗಿನ ಹುಡುಗರು/ಹುಡುಗಿಯರು ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ. ಕಂಪ್ಯೂಟರ್‌ನಲ್ಲಿ MS Office ಆದವರಿಗೆ ಮೊದಲ ಆದ್ಯತೆ. ಆಕರ್ಷಕ ವೇತನ ನೀಡಲಾಗುವುದು.
ಈ ಕೆಳಗಿನ ಫೋನ್‌ಗೆ ಸಂಪರ್ಕಿಸಿ:
89708 16788

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ದೋಸೆ ಹಾಕಲು ದೋಸೆ ಭಟ್ಟರು ಬೇಕಾಗಿದ್ದಾರೆ. ಹಾಗೂ ಹೋಟೆಲ್‌ನಲ್ಲಿ ಕ್ಲಿನಿಂಗ್ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಸಂಪರ್ಕಿಸಿ.
90367 34919

**ಹೋಟೆಲ್ ಬಾಡಿಗೆಗೆ ಇದೆ**
ದಾವಣಗೆರೆ-ಚಿತ್ರದುರ್ಗ NH-48 ಹೆಬ್ಬಾಳು ಗ್ರಾಮದಲ್ಲಿ ಸರ್ವೀಸ್ ರಸ್ತೆಗೆ ಮತ್ತು BPCL ಪೆಟ್ರೋಲ್ ಬಂಕ್ ಪಕ್ಕದಲ್ಲಿ ಇರುವ ಡಾಬಾ ಹೋಟೆಲ್ ನಡೆಸಲು ಎಲ್ಲ ಅನುಕೂಲ ಇರುವ ಹೋಟೆಲ್ ಬಾಡಿಗೆಗೆ ಇದೆ.
ಸಂಪರ್ಕಿಸಿ : ಪಾಲಾಕ್ಷಪ್ಪ / ಮಧು
98447 11299, 96639 95281

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ. 2ಕೆಜಿ ಚೀಲಗಳು ರೂ. 25/- ಸ್ಥಳ : ದೊಡ್ಡಬಾತಿ
88920 08800

**ಬೇಕಾಗಿದ್ದಾರೆ**
ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ :
93410 10582

**ರಕ್ತ ದಾನ ಶ್ರೇಷ್ಠ ದಾನ**

**ಒದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಸೇಲ್ಸ್ ಬಾಯ್ಸ್/ಗರ್ಲ್ಸ್ ಅಸಿಸ್ಟೆಂಟ್ ಸೇಲ್ಸ್ ಬಾಯ್ಸ್/ಗರ್ಲ್ಸ್ ಹೆಲ್ಪರ್ಸ್ ಬೇಕಾಗಿದ್ದಾರೆ**
ಶ್ರೀ ಮಾರುತಿ ಟೆಕ್ಸ್‌ಟೈಲ್ಸ್ & ಗಾರ್ಮೆಂಟ್ಸ್
ಡೋ.ನಂ. 1212, ರಿಂಗ್ ರೋಡ್ ಹತ್ತಿರ, ಶಾರದಾಂಬ ದೇವಸ್ಥಾನ ವೃತ್ತ, ಎಸ್. ನಿಜಲಿಂಗಪ್ಪ ಬಡಾವಣೆ, ದಾವಣಗೆರೆ - 04
86603 81629
98449 76176

**ಶ್ರೀ ಸಾಯಿ ಫೈನಾನ್ಸ್ (ರಿ)**
ನಮ್ಮಲ್ಲಿ ವ್ಯಾಪಾರಿಗಳಿಗೆ ಫೈನಾನ್ಸ್ ನೀಡಲಾಗುವುದು. ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್ ಪ್ರಾವಿಜನ್ ಸ್ಟೋರ್, ಎಗ್‌ರೈಸ್ ಸೆಂಟರ್ ಇತ್ಯಾದಿ. ಶಿವಪ್ಪಯ್ಯ ಸರ್ಕಲ್, ದಾವಣಗೆರೆ. ಸಂಪರ್ಕಿಸಿ.
96860 22969

**JOB OPPORTUNITY**
Female Office Assistant
Good In Office Work-Computer Skills
Good In Customer Dealing Freshers can also apply B.Com., M.Com., & MBA
Cor Contact :
97312 18567
Send C.V-hardsoftdvg@gmail.com

**2 BHK HOUSE FOR RENT**
1st floor, Kirwadi Layout, 4th main Road, Near Montessori Convent, Davangere-2.
99010 33555, 99457 13192

**ಬೇಕಾಗಿದ್ದಾರೆ**
SSLC ಅಥವಾ PUC ಆದ ಮಹಿಳಾ ಕ್ಲರ್ಕ್ ಬೇಕಾಗಿದ್ದಾರೆ.
ಮಹಮ್ಮಡನ್ NTC ಕಾಲೇಜ್ 1ನೇ ಮೇನ್, 12ನೇ ಕ್ರಾಸ್ ಕೆಟಿಜೆ ನಗರ, ದಾವಣಗೆರೆ.
9341119195, 9980032237

**WANTED**
Marketing Executive
Superviser
Graphic Designer
video editor
sale manager
99019 11421

**ಬೇಕಾಗಿದ್ದಾರೆ**
ಹೊಳಲ್ಕೆರೆ ತಾಲ್ಲೂಕಿನಲ್ಲಿ ತೋಟ ನೋಡಿಕೊಳ್ಳಲು ಒಂದು ಕುಟುಂಬ ಬೇಕಾಗಿದ್ದಾರೆ. ಅನುಭವವಿದ್ದವರಿಗೆ ಆದ್ಯತೆ
94484 39639

**SSLC/PUC ಪರೀಕ್ಷೆಯಲ್ಲಿ ಮತ್ತು ಅವಕಾಶ ವಂಚಿತ ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ**
ದೂರ ಶಿಕ್ಷಣದ ಮುಖಾಂತರ ಆನ್‌ಲೈನ್ ಪರೀಕ್ಷೆ ಮುಖಾಂತರ ಉತ್ತಮ ಫಲಿತಾಂಶಕ್ಕಾಗಿ ಮುಂದಿನ ವಿದ್ಯಾಭ್ಯಾಸ ಮುಂದುವರಿಸಲು/ಸರ್ಕಾರಿ/ಖಾಸಗಿ ಉದ್ಯೋಗಾವಕಾಶ ಪಡೆಯಬಹುದಾದ ಕರ್ನಾಟಕ ಸರ್ಕಾರದ ಪ.ಪೂ. ಮಾರ್ಗಸೂಚಿ ಪಟ್ಟಿಯಲ್ಲಿ (ಸಿಬಿಎಸ್‌ಇ) ಅನುಮೋದಿತಗೊಂಡಿದೆ.
BOSSE-SIKKIM (ಪ್ರವೇಶ ಪ್ರಾರಂಭವಾಗಿದೆ)
SHREYAS CORRESPONDENCE COLLEGE, DCM TownShip, Davangere.
97317 40827, 83107 47112, 97432 20274

**HOUSE FOR RENT**
#5628/D-23 2BHK ground floor 4th main, 6th cross (left) East facing Near Indoor Nehru Stadium, S.S Badavane B Block, House name SHIVARATNA. Contact No.
94489 29509

**TO-LET**
2nd floor, 1BHK for rent # 303/4, PJ Extension, 2nd main Road, Stadium Road, Davangere.
96111 74878

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET / CLAT - Printed Notes + Study Materials
97398 65711, 94822 44114

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards,
NEET / IIT - JEE / Olympiads
Memory Techniques + Hand Writing
97398 65711, 94822 44114

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

## ಶ್ರೀ ದಾನಮ್ಮ ದೇವಸ್ಥಾನದಲ್ಲಿ ನಾಳೆ ಮಹಾನವಮಿ ಅಮಾವಾಸ್ಯೆ



ದಾವಣಗೆರೆ, ಸೆ. 30- ನಗರದ ದೊಡ್ಡಪೇಟೆಯಲ್ಲಿರುವ ಶ್ರೀ ಬಸವೇಶ್ವರ ಮತ್ತು ಶ್ರೀ ದಾನಮ್ಮ ದೇವಿ ದೇವಸ್ಥಾನ ದಲ್ಲಿ ಮಹಾನವಮಿ ಅಮಾವಾಸ್ಯೆ ಪ್ರಯುಕ್ತ ನಾಡಿದ್ದು ದಿನಾಂಕ 2ರ ಬುಧವಾರ ಬೆಳಿಗ್ಗೆ ಶ್ರೀ ಸ್ವಾಮಿಗೆ ಅಭಿಷೇಕ, ಪೂಜೆ, ಹೂವಿನ ಅಲಂಕಾರ ನಡೆಯಲಿದೆ. ನಂತರ ಮಧ್ಯಾಹ್ನ 12.30ಕ್ಕೆ ಸರ್ವ ಭಕ್ತಾದಿಗಳಿಗೆ ದಾಸೋಹ ಏರ್ಪಡಿಸಲಾಗಿದೆ.

ಬೇತೂರು ಶ್ರೀಮತಿ ಪುಷ್ಪಲತಾ ಕರಿಬಸಪ್ಪ, ಸೋಮಶೇಖರ, ದೇವರಮನಿ ರತ್ನಮ್ಮ ಮಹಾರುದ್ರಪ್ಪ ಮತ್ತು ಮಕ್ಕಳು, ಅಮೃತ್, ಕಾರ್ತಿಕ್, ಕೊಟ್ರಮ್ಮ ಹಾಗೂ ಕುಟುಂಬ, ಶ್ರೀಮತಿ ಎಮ್ಮಿ ಗಿರಿಜಮ್ಮ ಬಸವರಾಜಪ್ಪ ಮತ್ತು ಕುಟುಂಬದವರು ದಾಸೋಹದ ಸೇವಾರ್ಥಿಗಳಾಗಿದ್ದಾರೆ.

## ಲೋಕಿಕೆರೆ : ಶ್ರೀ ವಿಜಯ ದುರ್ಗಾ ಅಮ್ಮನವರ ನವರಾತ್ರಿ ಮಹೋತ್ಸವ

ದಾವಣಗೆರೆ, ಸೆ. 30- ಲೋಕಿಕೆರೆ ಲೋಕನಾಯಕಿಪುರದ ಶ್ರೀ ವಿಜಯದುರ್ಗಾ ಪರಮೇಶ್ವರಿ ಅಮ್ಮನವರ ನವರಾತ್ರಿ ಮಹೋತ್ಸವವು ಇದೇ ದಿನಾಂಕ 3ರ ಗುರುವಾರದಿಂದ ದಿನಾಂಕ 12ರ ಶನಿವಾರದವರೆಗೆ ನಡೆಯಲಿದೆ. ಪ್ರತಿದಿನ ದೇವಿಗೆ ಉತ್ಸವ ನಡೆಯಲಿದ್ದು, ವಿಶೇಷ ಅಲಂಕಾರ, ಅಭಿಷೇಕ, ವಿಶೇಷ ಪೂಜೆ, ಕುಂಕುಮಾರ್ಚನೆ, ಕ್ಷೀರಾಭಿಷೇಕ, ಅನ್ನಸಂತರ್ಪಣೆ ಕಾರ್ಯಕ್ರಮಗಳು ನಡೆಯಲಿವೆ.

ದಿನಾಂಕ 6ರ ಭಾನುವಾರ ಯುಗಧರ್ಮ ರಾಮಣ್ಣ ಅವರ ತತ್ವಪದಗಳ ಗಾಯನ, ಟಿವಿ, ಧಾರಾವಾಹಿ ನಟ ದಾಗಿನಕಟ್ಟೆ ಸಿದ್ದಪ್ಪ ಅವರಿಂದ ಭಕ್ತಿಗೀತೆ ಕಾರ್ಯಕ್ರಮಗಳು ನಡೆಯಲಿವೆ ಎಂದು ತ್ರಿಕೋಟ ದೇವಾಲಯ ಧರ್ಮದರ್ಶಿ ಕತ್ತಲಗೆರೆ ತಿಪ್ಪಣ್ಣ, ದೇವಾಲಯ ಉಸ್ತುವಾರಿ ಓಂಕಾರಪ್ಪ ತಿಳಿಸಿದ್ದಾರೆ.

# ಆರ್ಥಿಕ ಶಕ್ತಿಯಾಗುವ ಭರದಲ್ಲಿ ಪಾರಂಪರಿಕ ಮೌಲ್ಯ ಮರೆಯಬಾರದು

### ಜಿಲ್ಲಾ ಪದವಿ ಪೂರ್ವ ಕಾಲೇಜು ಪ್ರಾಚಾರ್ಯರ ಸಂಘದ ಪ್ರತಿಭಾ ಪುರಸ್ಕಾರದಲ್ಲಿ ಹಿರಿಯ ಪತ್ರಕರ್ತ ಹೆಚ್.ಬಿ.ಮಂಜುನಾಥ

ದಾವಣಗೆರೆ, ಸೆ.30- ವಿಶ್ವಮಟ್ಟದ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಲಿರುವ ಭಾರತ ಇದರ ಭರದಲ್ಲಿ ಪಾರಂಪರಿಕ ಮೌಲ್ಯಗಳನ್ನು ಅಲಕ್ಷಿಸಬಾರದು. ಶಾಲಾ - ಕಾಲೇಜು ಶಿಕ್ಷಕರು ಪಠ್ಯೇತರವಾಗಿ ನಮ್ಮ ದೇಶದ ಪಾರಂಪರಿಕ ಮೌಲ್ಯಗಳನ್ನು ವಿದ್ಯಾರ್ಥಿಗಳಿಗೆ ಹೇಳಬೇಕು ಎಂದು ಹಿರಿಯ ಪತ್ರಕರ್ತ ಹೆಚ್.ಬಿ.ಮಂಜುನಾಥ ಕರೆ ನೀಡಿದರು.



ಅವರಿಂದು ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರ ಸಂಘದ ವತಿಯಿಂದ ಏರ್ಪಡಾಗಿದ್ದ ಪ್ರತಿಭಾ ಪುರಸ್ಕಾರ ಹಾಗೂ ನಿವೃತ್ತ ಪ್ರಾಚಾರ್ಯರುಗಳಿಗೆ ಅಧಿಕಾರಿಗಳಿಗೆ ಸನ್ಮಾನ ಸಮಾರಂಭದ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ರಾಜ್ಯದ 2084 ಪದವಿ ಪೂರ್ವ ಕಾಲೇಜುಗಳಿಂದ 6,90,000 ವಿದ್ಯಾರ್ಥಿಗಳು ಕಳೆದ ಸಾಲಿನಲ್ಲಿ ಪಿಯು ಪರೀಕ್ಷೆ ತೆಗೆದುಕೊಂಡಿದ್ದು, 5,52,000 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.ದೇಶದ 1,163 ವಿಶ್ವ ವಿದ್ಯಾನಿಲಯಗಳ 56769 ಕಾಲೇಜುಗಳಿಂದ ಸುಮಾರು ನಾಲ್ಕೂವರೆ ಕೋಟಿ ಪದವೀಧರರು ಪ್ರತಿ ವರ್ಷ ಹೊರ ಬರುತ್ತಿದ್ದು, ಎಲ್ಲರೂ ನೌಕರಿಯನ್ನೇ ಅರಸದೇ ಸ್ವ-ಉದ್ಯೋಗಿಗಳಾದಲ್ಲಿ ದೇಶದ ಆರ್ಥಿಕತೆ ಐದು ಟ್ರಿಲಿಯನ್ ಡಾಲರ್ ತಲುಪಲು ಕಷ್ಟವಾಗುವುದಿಲ್ಲ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳನ್ನು ಪ್ರೇರೇಪಿಸುವ ವಿಧಾನದ ಶಿಕ್ಷಣವು ಅಗತ್ಯ ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಮಾಗನೂರು ಬಸಪ್ಪ ಎಜುಕೇಷನ್ ಟ್ರಸ್ಟಿನ ಕಾರ್ಯದರ್ಶಿ ಸಂಗಮೇಶ್ವರ ಗೌಡರು, ಅನುಕೂಲ ಸ್ಥಿತಿಯಲ್ಲಿರುವ ಶಿಕ್ಷಕರುಗಳು ಬಡ ವಿದ್ಯಾರ್ಥಿಗಳನ್ನು ಶೈಕ್ಷಣಿಕವಾಗಿ ದತ್ತು ತೆಗೆದುಕೊಂಡು ಓದಿಸಿದಲ್ಲಿ ಅದು ಸಮಾಜಕ್ಕೆ ದೊಡ್ಡ ದೇಣಿಗೆಯಾಗುತ್ತದೆ ಎಂದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಸ್.ಜಿ.ಕರಿಸಿದ್ದಪ್ಪ, ಪದವಿ ಪೂರ್ವ ಕಾಲೇಜುಗಳ ನಿವೃತ್ತ ಪ್ರಾಚಾರ್ಯರುಗಳು ವೃತ್ತಿಯಿಂದ ನಿವೃತ್ತರಾದರೂ ಪ್ರವೃತ್ತಿಯಿಂದ ನಿವೃತ್ತರಾಗದೇ ಆತ್ಮ ಸಂತೋಷಕ್ಕಾಗಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಪಾಠ ಮಾಡಬೇಕು ಎಂದು ಕರೆ ಕೊಟ್ಟರು.

ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಜಿಲ್ಲಾ ಶಾಖೆ ಅಧ್ಯಕ್ಷ ಸಿ.ಬಿ.ರವಿ ಮಾತನಾಡಿ, ಶಿಕ್ಷಕರು ಜ್ಞಾನ ದಾನದಲ್ಲಿ ಜಿಪುಣ ರಾಗಬಾರದು. ತಮ್ಮಲ್ಲ ಜ್ಞಾನವನ್ನೂ ನಿತ್ಯವೂ ವಿದ್ಯಾರ್ಥಿಗಳಿಗೆ ನೀಡುತ್ತಿರಬೇಕು. ವಿದ್ಯಾರ್ಥಿಗಳು ಸತ್ಪ್ರಜೆಗಳಾಗಿ ಭ್ರಷ್ಟಾಚಾರ ರಹಿತ ಮೌಲ್ಯಾಧಾರಿತ ಜನ ಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರ ಸಂಘದ ಅಧ್ಯಕ್ಷ ಎಸ್. ಪ್ರದೀಪ್ ಕುಮಾರ್, ಸರ್ಕಾರಿ ಅಷ್ಟೇ ಅಲ್ಲದೇ ಅನುದಾನಿತ ಮತ್ತು ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳ ಪ್ರತಿಭಾವಂತ ವಿದ್ಯಾರ್ಥಿಗಳನ್ನೂ ಸಹಾ ತಮ್ಮ ಸಂಘದ ವತಿಯಿಂದ ಸನ್ಮಾನಿಸಲಾಗುತ್ತಿದೆ ಎಂದರು.

ಮಾಗನೂರು ಬಸಪ್ಪ ಪದವಿ ಪೂರ್ವ ಕಾಲೇಜು ಸಭಾಂಗಣದಲ್ಲಿ ನೆರವೇರಿದ ಕಾರ್ಯಕ್ರಮದ ನಿರೂಪಣೆಯನ್ನು ಉಪನ್ಯಾಸಕರಾದ ಉಷಾ ಪ್ರಸನ್ನ ಮಾಡಿದರು.

ಸ್ವಾಗತವನ್ನು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ವಿ.ಎಸ್. ಮಲ್ಲಿಕಾರ್ಜುನ ಕೋರಿದರು. ಸಂಘದ ಪ್ರಧಾನ ಕಾರ್ಯದರ್ಶಿ ಶರಣಪ್ಪ ಎನ್. ಗೋವಿನ ಗಿಡದ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು.

ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರವನ್ನು ಜಿ.ವಿ.ಭೀಮಕುಮಾರ, ಆರ್. ದೇವೀರಪ್ಪ ನಿರ್ವಹಿಸಿದರೆ, ನಿವೃತ್ತ ಪ್ರಾಚಾರ್ಯರುಗಳಿಗೆ ಸನ್ಮಾನವನ್ನು ಕೆ.ಎ.ಮಂಜುಳಾ, ಟಿ.ಡಿ.ಸುಜಾತ ಹಾಗೂ ಬಿ.ಆರ್. ಮಂಜುಳಾ ನಿರ್ವಹಿಸಿದರು.

ಮಾಗನೂರು ಬಸಪ್ಪ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಪ್ರಸಾದ್ ಬಂಗೇರ, ಸಂಘದ ರಾಜ್ಯ ಪ್ರತಿನಿಧಿ ಆರ್.ನಂದೀಶ್, ಸಂಘಟನಾ ಕಾರ್ಯದರ್ಶಿ ಹೆಚ್.ಎಸ್. ರಂಗಪ್ಪ, ಹೆಚ್.ವಿ. ಶ್ರೀನಿವಾಸ, ಹೆಚ್. ಚಂದ್ರಪ್ಪ, ಎನ್.ಶಿವಪ್ಪ, ಸಿ.ಪಿ.ಜಗದೀಶ್, ಆರ್.ದೇವಿರಪ್ಪ, ಎ.ಟಿ.ರಂಗಪ್ಪ ಮತ್ತಿತರರು ಉಪಸ್ಥಿತರಿದ್ದರು.

ಸಂಘದ ಖಜಾಂಚಿ ಕಾರಿಗನೂರು ಕತ್ತಲಗೆರೆ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಶಿವಾನಂದ ಆರ್.ಕುಡಪಲಿ ವಂದಿಸಿದರು.



## ಹುಚ್ಚು ನಾಯಿ ಕಡಿತಕ್ಕೆ ವೈದ್ಯರ ಸಲಹೆ

### ಮಲೇಬೆನ್ನೂರಿನಲ್ಲಿ ವಿಶ್ವ ರೇಬಿಸ್ ದಿನಾಚರಣೆ

ಮಲೇಬೆನ್ನೂರು, ಸೆ. 30 - ಹುಚ್ಚುನಾಯಿ ಕಡಿತದಿಂದ ಬರುವ ರೋಗವನ್ನು ರೇಬಿಸ್ ರೋಗ ಎಂದು ಕರೆಯುತ್ತಾರೆ ಎಂದು ಟಿ.ಹೆಚ್.ಓ ಡಾ. ಅಬ್ದುಲ್ ಖಾದರ್ ಹೇಳಿದರು.

ಅವರು ಸೋಮವಾರ ಕುಂಬಳೂರಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಮಾತನಾಡಿದರು.

ವಿಶ್ವದಲ್ಲಿಯೇ ನಾಯಿ ಕಡಿತಕ್ಕೆ ಭಾರತ ದೇಶವು ಮೂರನೆಯ ಒಂದು ಪಾಲನ್ನು ಪಡೆದಿದೆ. ನಮ್ಮ ದೇಶದಲ್ಲಿ ಸಾಕು ನಾಯಿಗಳಿಗಿಂತ ಬೀದಿ ನಾಯಿಗಳ ಸಂಖ್ಯೆಗಳು ಹೆಚ್ಚಾಗಿರುವುದರಿಂದ ವಿಶ್ವದಲ್ಲಿ ಮೂರು ಜನ ಹುಚ್ಚುನಾಯಿ ಕಡಿತದಿಂದ ಸಾವನ್ನಪ್ಪಿದರೆ ಭಾರತ ಪಾಲು ಮೂರರಲ್ಲಿ ಒಬ್ಬರು ಎಂದರು.

ಯಾವುದೇ ನಾಯಿ ಕಡಿದರೂ ನಿರ್ಲಕ್ಷ್ಯ ಮಾಡದೇ 15 ನಿಮಿಷಗಳವರೆಗೆ ನಾಯಿ ಕಚ್ಚಿದ ಜಾಗವನ್ನು ನೀರಿನಿಂದ ತೊಳೆಯಬೇಕು. ಆಗ 90 ಪರ್ಸೆಂಟ್ ರೇಬಿಸ್ ವೈರಸ್ ಅನ್ನು ಕಡಿಮೆ ಮಾಡಿಕೊಳ್ಳಬಹುದು. ನಾಯಿ ಕಡಿತಕ್ಕೆ ಎಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ಔಷಧಿ ಇದೆ ಎಂದು ಡಾ. ಖಾದರ್ ಹೇಳಿದರು.

ತಾಲ್ಲೂಕು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ. ಉಮಣ್ಣ ಮಾತನಾಡಿ, ಸಾಕು ಪ್ರಾಣಿಗಳ ಮಾಲೀಕರು ರೇಬೀಸ್ ಲಸಿಕೆಗಳಲ್ಲಿ ಸಾಕು ಪ್ರಾಣಿಗಳನ್ನು ನವೀಕೃತವಾಗಿರಿಸುವುದರ ಮೂಲಕ ತಮ್ಮ ಅಪಾಯವನ್ನು ಕಡಿಮೆ ಮಾಡಬಹುದು ಅಲ್ಲದೆ, ನಿಮ್ಮ ಸಾಕು ಪ್ರಾಣಿಗಳನ್ನು ಕಾಡು ಪ್ರಾಣಿಗಳಿಂದ ಮತ್ತು ಪರಿಚಯವಿಲ್ಲದ ಸಾಕು ಪ್ರಾಣಿಗಳಿಂದ ಸಾಧ್ಯವಾದಷ್ಟು ದೂರವಿಡಿ ಎಂದು ಹೇಳಿದರು.

ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ನಾಗರಾಜ್ ಮಾತನಾಡಿ, ಪ್ರೀ. ಎಕ್ಸ್ಪೋಸರ್ ಹಾಗೂ ಪೋಸ್ಟ್ ಎಕ್ಸ್ಪೋಸರ್ ವಿಷಯ ಕುರಿತು ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಭಾರ ಪ್ರಾಂಶುಪಾಲ ಹನುಮಂತಯ್ಯ ವಹಿಸಿಕೊಂಡಿದ್ದರು. ಉಪ ಪ್ರಾಂಶುಪಾಲ ಗೋವಿಂದಪ್ಪ, ಆರೋಗ್ಯ ನಿರೀಕ್ಷಣಾಧಿಕಾರಿ ಕಿರಣ್, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಯಶ್ವಿನ್ ಬಾನು ಹಾಗೂ ಆಶಾ ಕಾರ್ಯಕರ್ತೆಯರು ಈ ವೇಳೆ ಉಪಸ್ಥಿತರಿದ್ದರು. ಇತಿಹಾಸ ಉಪನ್ಯಾಸಕ ಮಂಜುನಾಥ್ ಕಾರ್ಯಕ್ರಮ ನಿರೂಪಿಸಿದರು.

## ಸಂಚಾರಿ ಕುರಿಗಾರರಿಗೆ ಗುರುತಿನ ಚೀಟಿ ನೀಡಲು ಅರ್ಜಿ

ದಾವಣಗೆರೆ, ಸೆ. 30 - ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ವತಿಯಿಂದ ಜಿಲ್ಲೆಯಲ್ಲಿ 20ಕ್ಕೂ ಹೆಚ್ಚು ಕುರಿ, ಮೇಕೆಗಳನ್ನು ಹೊಂದಿರುವ ಅರ್ಹ ವಲಸೆ ಸಂಚಾರಿ ಕುರಿಗಾರರಿಗೆ ಗುರುತಿನ ಚೀಟಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಸಂಚಾರಿ ಕುರಿಗಾಹಿಗಳು ತಮ್ಮ ತಾಲ್ಲೂಕಿನ ಪಶು ಆಸ್ಪತ್ರೆಯ ಮುಖ್ಯ ಪಶುವೈದ್ಯಾಧಿಕಾರಿಗಳಿಂದ ಅರ್ಜಿಗಳನ್ನು ಪಡೆದು, ವಲಸೆ ಕುರಿಗಾರರು ಎಂಬುದಕ್ಕೆ ಸ್ಥಳೀಯ ಗ್ರಾಮ ಲೆಕ್ಕಾಧಿಕಾರಿಗಳಿಂದ ಮಹಜರ್ ಪ್ರಮಾಣ ಪತ್ರ ಲಗತ್ತಿಸಿ ಸೂಕ್ತ ದಾಖಲೆಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು ತಮ್ಮ ತಾಲ್ಲೂಕಿನ ಪಶು ಆಸ್ಪತ್ರೆಯ ಮುಖ್ಯ ಪಶು ವೈದ್ಯಾಧಿಕಾರಿಗಳಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಸ್ಥಳೀಯ ಪಶು ಆಸ್ಪತ್ರೆಯ ಪಶು ವೈದ್ಯಾಧಿಕಾರಿಗಳು, ಆಯಾ ತಾಲ್ಲೂಕಿನ ಪಶು ಆಸ್ಪತ್ರೆಯ ಮುಖ್ಯ ಪಶುವೈದ್ಯಾಧಿಕಾರಿಗಳು ಅಥವಾ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಸಹಾಯಕ ನಿರ್ದೇಶಕರು ದಾವಣಗೆರೆ ಇವರನ್ನು ಸಂಪರ್ಕಿಸಲು ತಿಳಿಸಲಾಗಿದೆ.

## ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಳೆ ಅಮಾವಾಸ್ಯೆ



ದಾವಣಗೆರೆ, ಸೆ. 30 - ನಗರದ ಡಿ. ದೇವರಾಜ ಅರಸು ಬಡಾವಣೆಯಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 2ರ ಬುಧವಾರಮಹಾನವಮಿ ಅಮಾವಾಸ್ಯೆ ಪೂಜಾ ಕಾರ್ಯಕ್ರಮಗಳು ನಡೆಯಲಿವೆ.

ಅಂದು ಬೆಳಿಗ್ಗೆ ಶ್ರೀ ನಾಗಲಿಂಗೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಮೃತ್ಯುಂಜಯ ಹೋಮ, ಪ್ರಧಾನ ದೇವತೆ, ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಂಗಳಾರತಿ, ಪ್ರಸಾದ ವಿನಿಯೋಗ ನಡೆಯುವುದು ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

ಶ್ರೀಮತಿ ರಾಜಮ್ಮ ಮತ್ತು ಜೆ.ಎ. ಬಸವರಾಜು, ಶ್ರೀಮತಿ ಸರೋಜಮ್ಮ ಜೆ.ಎ. ರವಿಕುಮಾರ್ ಗಾಂಧಿ, ಜೆ.ಎ. ಕರಿಸಿದ್ದಪ್ಪ ಹಾಗೂ ಕುಟುಂಬದವರು (ಮಾಲೀಕರು ರಾಜಭವನ ಹೋಟೆಲ್, ದಾವಣಗೆರೆ) ಇವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

## ನಗರದಲ್ಲಿ ಇಂದು ಅನ್ನ ಸಂತರ್ಪಣೆ

ಬಡಗಿ ಕೃಷ್ಣಪ್ಪ ಅವರ 11ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಇಂದು ಅಂಧ ಮಕ್ಕಳ ಶಾಲೆಯಲ್ಲಿ ಹಣ್ಣು ವಿತರಣೆ ಮತ್ತು ಮಧ್ಯಾಹ್ನ 12 ಗಂಟೆಗೆ ವೀರ ಮದಕರಿ ನಾಯಕ ವೃತ್ತದಲ್ಲಿ ಅನ್ನ ಸಂತರ್ಪಣೆ ಏರ್ಪಡಿಸ ಲಾಗಿದೆ ಎಂದು ವಾಲ್ಮೀಕಿ ಸಮಾಜದ ಅಧ್ಯಕ್ಷ ವೀರಣ್ಣ ತಿಳಿಸಿದ್ದಾರೆ.

## ನಾಳೆ ಸಿಪಿಐ ಶಾಖಾ ಕಾರ್ಯದರ್ಶಿಗಳಿಗೆ ಒಂದು ದಿನದ ಕಾರ್ಯಾಗಾರ

ದಾವಣಗೆರೆ, ಸೆ.30 - ಬುಧವಾರ ಜಿಲ್ಲೆಯ ಭಾರತ ಕಮ್ಯುನಿಸ್ಟ್ ಪಕ್ಷದ ಶಾಖಾ ಕಾರ್ಯದರ್ಶಿಗಳಿಗೆ ಮತ್ತು ಸಹಕಾರ್ಯದರ್ಶಿಗಳಿಗೆ ಒಂದು ದಿನದ ಶಾಖಾ ನಿರ್ವಹಣಾ ಕಾರ್ಯಾಗಾರ ನಡೆಯಲಿದೆ ಎಂದು ಸಿಪಿಐ ದಾವಣಗೆರೆ ಜಿಲ್ಲಾ ಕಾರ್ಯದರ್ಶಿ ಕಾಂ. ಆವರಗೆರೆ ಚಂದ್ರು ತಿಳಿಸಿದ್ದಾರೆ. ಅಂದು ಬೆಳಿಗ್ಗೆ 11 ಗಂಟೆಗೆ ಆರಂಭವಾಗುವ ಶಾಖಾ ನಿರ್ವಹಣಾ ಕಾರ್ಯಾಗಾರಕ್ಕೆ ಸಿಪಿಐ ರಾಜ್ಯ ಕಾರ್ಯದರ್ಶಿ ಕಾಂ. ಸಾತಿ ಸುಂದರೇಶ್ ಸಹಕಾರ್ಯದರ್ಶಿ ಕಾಂ. ಬಿ ಅಮ್ಜದ್ ರವರಗಳು ಆಗಮಿಸಿ ಕಾರ್ಯಾಗಾರವನ್ನು ನಡೆಸಿಕೊಡಲಿದ್ದಾರೆ.

## ಜಿಲ್ಲಾ ಸ್ಕೌಟ್ಸ್ - ಗೈಡ್ಸ್ ವಾರ್ಷಿಕ ಮಹಾಸಭೆ



ದಾವಣಗೆರೆ, ಸೆ.30- ಬಸವ ಸಮಿತಿ ವತಿಯಿಂದ ದಿ. ಬಿ.ಡಿ.ಜತ್ತಿಯವರ 112ನೇ ಜನ್ಮೋತ್ಸವದ ಅಂಗವಾಗಿ 'ದಾಸೋಹ ರತ್ನ' ಪುರಸ್ಕಾರಕ್ಕೆ ಭಾಜನರಾದ ಚಿಗಟೇರಿ ಮುರಿಗೆಪ್ಪ ವಂಶದವರೂ, ದಾವಣಗೆರೆ ಜಿಲ್ಲಾ ಸ್ಕೌಟ್ಸ್ - ಗೈಡ್ಸ್ ಮುಖ್ಯ ಆಯುಕ್ತ ಮುರುಘರಾಜೇಂದ್ರ ಚಿಗಟೇರಿ ಅವರನ್ನು ದಾವಣಗೆರೆ ಜಿಲ್ಲಾ ಸ್ಕೌಟ್ಸ್ - ಗೈಡ್ಸ್ ವಾರ್ಷಿಕ ಮಹಾಸಭೆಯಲ್ಲಿ ಅಭಿನಂದಿಸಿ, ಸನ್ಮಾನಿಸುವಾಗ ಜಿಲ್ಲಾ ಸ್ಕೌಟ್ಸ್ ಅಧ್ಯಕ್ಷ ಆರ್.ಡಿ.ಬದರೀನಾಥ್, ಉಪಾಧ್ಯಕ್ಷರುಗಳಾದ ಹಿರಿಯ ಪತ್ರಕರ್ತ ಹೆಚ್.ಬಿ.ಮಂಜುನಾಥ್, ಶಾಂತಾ ಯಾವಗಲ್, ಆಯುಕ್ತ ಎ.ಪಿ.ಷಡಾಕ್ಷರಪ್ಪ, ಕಾರ್ಯದರ್ಶಿ ಶಾರದಾ ಮಾಗಾನಹಳ್ಳಿ, ಎಂ.ರತ್ನ, ಹಾಲಪ್ಪ, ಸುಖವಾಣಿ, ಅಶ್ವಿನಿ, ಶಿವಪ್ಪ, ಅಶೋಕ್, ಶಕುಂತಲಾ, ಡಾ. ಎಂ.ಜಿ.ಶಶಿಧರ್, ಮರುಳಪ್ಪ, ವಿಜಯ್ ಕುಮಾರ್, ಎನ್. ಕೆ.ಕೊಟ್ರೇಶ್, ಹಾಲಪ್ಪ ಮುಂತಾದವರು ಅಲ್ಲಿದ್ದರು.

## ಜುಮ್ಮಾ (ಜಾಮೀಯಾ) ಮಸೀದಿ ಆಡಳಿತ ಮಂಡಳಿಗೆ ಆಯ್ಕೆ



### ಮಲೇಬೆನ್ನೂರು

ಮಲೇಬೆನ್ನೂರು, ಸೆ.30- ತೀವ್ರ ಗಮನ ಸೆಳೆದಿದ್ದ ಪಟ್ಟಣದ ಪ್ರತಿಷ್ಠಿತ ಜುಮ್ಮಾ (ಜಾಮೀಯಾ) ಮಸೀದಿಯ ಆಡಳಿತ ಮಂಡಳಿಯ 11 ನಿರ್ದೇಶಕ ಸ್ಥಾನಗಳಿಗೆ ಭಾನುವಾರ ಶಾಂತಿಯುತ ಚುನಾವಣೆ ನಡೆಯಿತು.

ದರ್ಗಾ ಬಳಿಯ ಜಾಮೀಯಾ ನ್ಯಾಷನಲ್ ಪ್ರೌಢಶಾಲೆಯಲ್ಲಿ ನಡೆದ ಚುನಾವಣೆಯಲ್ಲಿ ಒಟ್ಟು 2466 ಮತದಾರರ ಪೈಕಿ 2300 ಮತದಾರರು ಮತದಾನ ಮಾಡಿದರು. ನಂತರ ಮತ ಎಣಿಕೆ ನಡೆದು, ಫಲಿತಾಂಶ ಪ್ರಕಟಿಸಲಾಯಿತು.

11 ನಿರ್ದೇಶಕ ಸ್ಥಾನಗಳಿಗೆ 40 ಜನ ಅಭ್ಯರ್ಥಿಗಳು ಚುನಾವಣೆಗೆ ಸ್ಪರ್ಧಿಸಿದರು. ಚುನಾವಣೆಯಲ್ಲಿ ಸೈಯದ್ ಖಾಲೀದ್ ಪಾಷಾ, ಎಂ.ಬಿ.ಮೊಹಮ್ಮದ್ ಹಸಾಮ್, ಎಂ.ಬಿ. ಆಸೀಫ್, ದಾದಾವಲ್ಲಿ, ಡಿ.ಭಾಷಾ, ಸುಲ್ತಾನ್ ಹುಸೇನ್, ಸೈಯದ್ ಶಬ್ಬೀರ್, ಅನ್ವರ್ ಭಾಷಾ, ಯುಸೂಫ್ ಖಾನ್, ಇನಾಯತ್ ಖಾನ್, ಶೋಯೆಬ್ ಇವರುಗಳು ಅಧಿಕ ಮತಗಳನ್ನು ಪಡೆದು ಜುಮ್ಮಾ ಮಸೀದಿಯ ನೂತನ ನಿರ್ದೇಶಕರುಗಳಾಗಿ ಆಯ್ಕೆಯಾಗಿದ್ದಾರೆ.

## ವಿಶೇಷ ಶಿಕ್ಷಕರಿಗೆ ರಾಜ್ಯ ಪ್ರಶಸ್ತಿಗಾಗಿ ಅರ್ಜಿ

ದಾವಣಗೆರೆ, ಸೆ.30- ವಿಶ್ವ ವಿಕಲ ಚೇತನರ ದಿನಾಚರಣೆ ಅಂಗವಾಗಿ ಪ್ರಸಕ್ತ ಸಾಲಿನಲ್ಲಿ ವಿಕಲ ಚೇತನರ ಕ್ಷೇತ್ರದಲ್ಲಿ ಸಾಧನೆ ಗೈದ ವ್ಯಕ್ತಿ, ಸಂಸ್ಥೆ ಮತ್ತು ವಿಶೇಷ ಶಾಲೆಗಳಲ್ಲಿ 15 ವರ್ಷಕ್ಕೂ ಅಧಿಕ ಕಾಲ ಸೇವೆ ಸಲ್ಲಿಸಿರುವ, ಸಲ್ಲಿಸುತ್ತಿರುವ ವಿಶೇಷ ಶಿಕ್ಷಕರಿಗೆ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಲು ಅರ್ಜಿ ಆಹ್ವಾನಿಸಲಾಗಿದೆ. ಜಿಲ್ಲಾ ವಿಕಲ ಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಅಧಿ ಕಾರಿಗಳ ಕಚೇರಿಯಲ್ಲಿ ಅರ್ಜಿ ಲಭ್ಯವಿದ್ದು, ಅ.15 ಅರ್ಜಿ ಸಲ್ಲಿ ಸಲು ಕೊನೆ ದಿನವಾಗಿದೆ.

ಮಾಹಿತಿ ಗಾಗಿ 08192-263936, 263939 ಸಂಪರ್ಕಿಸಿ.

## ವೃತ್ತಿಪರ ಸಾಮಾಜಿಕ ಕಾರ್ಯಕರ್ತರಿಂದ ಪತ್ರ ಚಳುವಳಿ

ದಾವಣಗೆರೆ, ಸೆ.30- ವಿವಿಧ ಇಲಾಖೆಗಳಲ್ಲಿ ಗುತ್ತಿಗೆ ಮತ್ತು ಹೊರ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಎಂಎಸ್‌ಡಬ್ಲ್ಯೂ ನೌಕರರನ್ನು ಖಾಯಂ ಗೊಳಿಸುವುದೂ ಸೇರಿ ಹಲವು ಬೇಡಿಕೆಗಳ ಈಡೇರಿಕೆಗಾಗಿ ಪತ್ರ ಚಳುವಳಿ ಮೂಲಕ ಮನವಿ ಮಾಡಲಿದ್ದೇವೆ ಎಂದು ರಾಜ್ಯ ಪ್ರೊಫೇಷನಲ್ ಸೋಷಿಯಲ್ ವರ್ಕರ್ಸ್ ವೆಲ್‌ಫೇರ್ ಅಸೋಸಿಯೇಷನ್ ಅಧ್ಯಕ್ಷ ಡಾ. ಎಂ. ಸಂತೋಷ ಕುಮಾರ್ ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತ ನಾಡಿ, ಎಂಎಸ್‌ಡಬ್ಲ್ಯೂ ನೌಕರರಿಗೆ ಖಾಲಿ ಹುದ್ದೆಗಳಿದ್ದರೂ 5-10 ವರ್ಷಗಳಿಂದ ಸರ್ಕಾರ ನೇಮಕಾತಿ ಹೊರಡಿಸಿಲ್ಲ. ನಾವು 15 ವರ್ಷಗ ಳಿಂದ ಜೀತ ಪದ್ದತಿ ಮಾದರಿಯಲ್ಲಿ ದುಡಿಯು ತ್ತಿದ್ದೇವೆ ಎಂದು ಅಳಲು ತೋಡಿದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ ತೆಗೆದುಕೊಂಡ ನೌಕರರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಬೇಕು ಜತೆಗೆ ಯಾವುದೇ ಇಲಾಖೆಯಲ್ಲಾಗಲೀ ಎಂಎಸ್‌ಡಬ್ಲ್ಯೂ ನೌಕರರನ್ನು ವಿವಿಧ ಹುದ್ದೆ ಗಳಿಗೆ ನೇಮಿಸಬೇಕು ಎಂದು ಒತ್ತಾಯಿಸಿದರು.

ಪ್ರಸ್ತುತ ಆರೋಗ್ಯ ಇಲಾಖೆಯಲ್ಲಿ ಗುತ್ತಿಗೆ ನೌಕರರಿಗೆ ನೀಡುತ್ತಿರುವ ಕೃಪಾಂಕವನ್ನು 2ರಿಂದ 4ಕ್ಕೆ ಏರಿಸಬೇಕು. ಎಂಎಸ್‌ಡಬ್ಲ್ಯೂ ಪದವೀಧರ ನೌಕರರು ಸುಮಾರು ವರ್ಷಗಳಿಂದ ಕಡಿಮೆ ವೇತನದ ಜತೆಗೆ ಇಎಸ್‌ಐ, ಪಿಎಫ್, ವಿಮೆ ಸೌಲಭ್ಯವಿಲ್ಲದೇ ದುಡಿಯುತ್ತಿದ್ದು ಇವರಿಗೆ ವೇತನ ಹೆಚ್ಚಿಸುವ ಜತೆಗೆ ವಿವಿಧ ಸೌಲಭ್ಯ ಕಲ್ಪಿಸಬೇಕು ಎಂದರು.

ಎಂಎಸ್‌ಡಬ್ಲ್ಯೂ ಪದವೀಧರರು ಕಾರ್ಯ ನಿರ್ವಹಿಸುವ ಎಲ್ಲಾ ಹುದ್ದೆಗಳಿಗೂ 25 ಸಾವಿರ ರೂ. ಮೂಲ ವೇತನ ನಿಗದಿ ಪಡಿಸಬೇಕು. ಆರೋಗ್ಯ ಇಲಾಖೆಯಲ್ಲಿನ ಸಿಪಿಎಂ, ಡಿಪಿಎಂ ಸೇರಿದಂತೆ ಬಿಪಿಎಂ ಹುದ್ದೆಗಳಲ್ಲಿ ಮಾಸ್ಟರ್ ಆಫ್ ಸೋಶಿಯಲ್ ವರ್ಕರ್ ಪದವೀಧರರಿಗೆ ಮೊದಲ ಆದ್ಯತೆ ನೀಡಬೇಕು ಎಂದು ಆಗ್ರಹಿಸಿದರು.

ನಿನ್ನೆಯಿಂದಲೇ ಈ ಚಳುವಳಿ ಪ್ರಾರಂಭ ಮಾಡಿದ್ದು, ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಸಂಬಂಧಿಸಿದ ಸಚಿವರಿಗೆ ಪತ್ರ ಚಳುವಳಿಯ ಮೂಲಕ ಬೇಡಿಕೆ ಈಡೇರಿಕೆಗಾಗಿ ಮನವಿ ಸಲ್ಲಿಸುತ್ತೇವೆ.

ಆದಾಗ್ಯೂ ನಮ್ಮ ಮನವಿಗೆ ಸ್ಪಂದಿಸದಿದ್ದಲ್ಲಿ ವಿಧಾನ ಸೌಧ ಮುತ್ತಿಗೆ ಹಾಕಲು ಯೋಚಿಸಿದ್ದೇವೆ ಎಂದು ಹೇಳಿದರು.

ಈ ವೇಳೆ ರಾಜ್ಯ ಕಾರ್ಯದರ್ಶಿ ಸಿ. ಚಂದನ್ ಕುಮಾರ್, ಜಿಲ್ಲಾಧ್ಯಕ್ಷೆ ಪ್ರತಿಭಾ, ಶ್ವೇತಾ, ರಕ್ಷಿತ್ ಗೌಡ, ಅಂಜಿನಪ್ಪ ಸುದ್ದಿಗೋಷ್ಠಿಯಲ್ಲಿದ್ದರು.

## ಧ್ಯಾನಮಂದಿರದಲ್ಲಿ ಪೂಜಾ ಸಂಕಲ್ಪ



ದಾವಣಗೆರೆ, ಸೆ.30- ಇಲ್ಲಿನ ಶಿವಕುಮಾರ ಸ್ವಾಮಿ ಬಡಾವಣೆಯ ವೀರಾಂಜನೇಯ ಮಹಾಸ್ವಾಮಿ ಸಾರ್ವಜನಿಕ ಧ್ಯಾನಮಂದಿರದಲ್ಲಿ ಶ್ರೀ ವೀರಭದ್ರೇಶ್ವರ, ವೀರಾಂಜನೇಯ, ಓಂಕಾರ ಗಣಪತಿ, ಸುಬ್ರಹ್ಮಣ್ಯ ಸ್ವಾಮಿ ಹಾಗೂ ವರಹ ಭೀಮಾ ಶಂಕರ ಲಿಂಗುವಿಗೆ ವಿಶೇಷ ಪೂಜೆ ಸಲ್ಲಿಸಿದರು.

ಈ ವೇಳೆ ಹರಿಹರದ ಹೆಚ್. ಚಂದ್ರಶೇಖರಪ್ಪ, ಸಂಗಪ್ಪ ತೋಟದ, ಪ್ರಕಾಶ್ ಹೊಸಮನಿ, ಮಹೇಶಪ್ಪ ಗಂಗನಕಟ್ಟೆ, ಮಹಾದೇವಮ್ಮ ಮಲ್ಲಿಕಾರ್ಜುನಪ್ಪ, ಬಿ. ಮಂಜಮ್ಮ, ಬಿ. ಗೀತಾ ಉದಯಕುಮಾರ್, ಪರಮೇಶ್ವರ ನಾಯ್ಕ, ಸುಧಾ, ಡಿ.ಪಿ. ಚೇತನ್ ಕುಮಾರ್ ಮತ್ತಿತರರಿದ್ದರು.

# ಜಾತಿಗಳ ಮಧ್ಯೆ ಸಮನ್ವಯತೆ ಇದ್ದಾಗ ಮಾತ್ರ ಸಮಾಜವು ಚಲನಶೀಲವಾಗಿರಲಿದೆ

### ಇನ್‌ಸೈಟ್ಸ್ ಐಎಎಸ್ ತರಬೇತಿ ಕೇಂದ್ರದ ಸಂಸ್ಥಾಪಕ ಜಿ.ಬಿ. ವಿನಯಕುಮಾರ್

ದಾವಣಗೆರೆ, ಸೆ.30- ಎಲ್ಲಾ ಜಾತಿಗಳ ಮಧ್ಯೆ ಸಮನ್ವಯತೆ ಇದ್ದಾಗ ಮಾತ್ರ ಸಮಾಜವು ಚಲನಶೀಲವಾಗಿರಲಿದೆ ಎಂದು ಇನ್‌ಸೈಟ್ಸ್ ಐಎಎಸ್ ತರಬೇತಿ ಕೇಂದ್ರದ ಸಂಸ್ಥಾಪಕ ಜಿ.ಬಿ. ವಿನಯಕುಮಾರ್ ಹೇಳಿದರು.



ನಗರದ ರೋಟರಿ ಬಾಲಭವನದಲ್ಲಿ ಪೆರಿಯಾರ್ ರಾಮಸ್ವಾಮಿ ನಾಯಕರ್ ವಿಚಾರ ವೇದಿಕೆಯಿಂದ ಸೋಮವಾರ ಹಮ್ಮಿಕೊಂಡಿದ್ದ ಪೆರಿಯಾರ್ ಅವರ ಜನ್ಮ ದಿನೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪೆರಿಯಾರ್ ರಾಮಸ್ವಾಮಿ ನಾಯಕರ್ ಅವರು ಸಾಮಾಜಿಕ ಬದಲಾವಣೆಗೆ ನಾಂದಿ ಹಾಡಿದ ಮಹಾತ್ಮರಾಗಿದ್ದು, ಸಮಾಜದ ಬದಲಾವಣೆಗಾಗಿ ಸಾಕಷ್ಟು ಶ್ರಮಿಸಿದ್ದಾರೆ ಎಂದು ಅವರನ್ನು ಸ್ಮರಿಸಿದರು.

ಅಂಬೇಡ್ಕರ್, ನಾರಾಯಣ ಗುರು, ಪೆರಿಯಾರ್, ಜ್ಯೋತಿಬಾ ಫುಲೆಯಂತವರು ಸಾಮಾಜಿಕ ಬದಲಾವಣೆಗೆ ಅಂದೇ ತುಡಿದಿದ್ದರು. ಆದರೆ, ಇಂದಿಗೂ ಸಾಮಾಜಿಕ ಬದಲಾವಣೆ ಸಾಧ್ಯವಾಗಿಲ್ಲ. ಅದಕ್ಕಾಗಿಯೇ ಅಂಬೇಡ್ಕರ್ ರಾಜಕೀಯ ಪರಿವರ್ತನೆ ಬರುವ ವರೆಗೂ ಸಾಮಾಜಿಕ ಬದಲಾವಣೆ ಅಸಾಧ್ಯ ಎಂದಿದ್ದರು ಎಂದರು.

ಹಿಂದುಳಿದ ವರ್ಗಕ್ಕೆ ಸೇರಿದ ಸಿದ್ದರಾಮಯ್ಯ 2ನೇ ಬಾರಿ ಸಿಎಂ ಆಗಿರುವುದನ್ನು ಸಹಿಸಲಾಗದವರು, ಅವರನ್ನು ಅಧಿಕಾರದಿಂದ ಕೆಳಗಿಳಿಸುವ ಪಿತೂರಿ ನಡೆಸುತ್ತಿದ್ದಾರೆ. ಇದರ ಹಿಂದೆ ತಳ ಸಮುದಾಯದವರು ಬೆಳೆಯಬಾರದು ಎಂಬ ಹುನ್ನಾರ ಅಡಗಿದೆ ಎಂದು ಆರೋಪಿಸಿದರು.

ಶಿಕ್ಷಣ ಇಲ್ಲದೇ ಹೋರಾಟ ಮಾಡುವುದು ನಿರರ್ಥಕ. ರಾಜಕಾರಣದಲ್ಲಿ ಭಾಗಿಯಾಗದೇ ಹೋರಾಟ ಮಾಡಲಾಗದು. ಕೆಲವರ ಮೇಲಿನ ಹೆದರಿಕೆ ಹಾಗೂ ನಮಗೆ ಸಿಗುತ್ತಿರುವ ಸಣ್ಣ, ಪುಟ್ಟ ಅವಕಾಶಗಳಿಗಾಗಿ ರಾಜೀ ಮಾಡಿಕೊಂಡು ಹೋಗುತ್ತಿರುವುದರಿಂದಲೇ ಸಮಾಜದಲ್ಲಿನ ತಾರತಮ್ಯ ಮತ್ತಷ್ಟು ಹೆಚ್ಚುತ್ತಿದೆ. ಸಿದ್ಧಾಂತವನ್ನು ಕಾರ್ಯರೂಪಕ್ಕೆ ತರದೇ ಭಾಷಣ ಮಾಡುವುದು ವ್ಯರ್ಥ ಪ್ರಯತ್ನವಾಗಲಿದೆ ಎಂದರು.

ಮಾನವ ಬಂಧುತ್ವ ವೇದಿಕೆ ರಾಜ್ಯ ಸಂಚಾಲಕ ಪ್ರೊ.ಎ.ಬಿ. ರಾಮಚಂದ್ರಪ್ಪ ಮಾತನಾಡಿ, ಸ್ಥಾಪಿತ ವ್ಯವಸ್ಥೆಯನ್ನು ನಾಶಗೊಳಿಸಿ, ಹೊಸದನ್ನು ಕಟ್ಟಲು ಬುದ್ಧ, ಬಸವ, ಅಂಬೇಡ್ಕರ್, ಪೆರಿಯಾರ್ ಪ್ರಯತ್ನಿಸಿದ್ದರು. ಅನಾದಿ ಕಾಲದಿಂದ ಬಂದ ಶ್ರೇಣೀಕೃತ ವ್ಯವಸ್ಥೆಯನ್ನು ಧ್ವಂಸಗೊಳಿಸಲು ಪೆರಿಯಾರ್ ಶ್ರಮಿಸಿದ್ದರು ಎಂದು ಹೇಳಿದರು.

ಸತ್ಯದ ಪರವಾಗಿ ಮಾತನಾಡಿದವರು ಮತ್ತು ಬಹುಜನರ ಒಳಿತಿಗಾಗಿ ಕೆಲಸ ಮಾಡಿದವರು ಅಧಿಕಾರ ಅಥವಾ ಅವಕಾಶವನ್ನು ಕಳೆದು ಕೊಳ್ಳುತ್ತಲೇ ಬಂದಿದ್ದಾರೆ. ಆದರೆ, ಜನರಿಗಾಗಿ ಏನೂ ಮಾಡದೇ ಅಚ್ಛೇ ದಿನ್ ಘೋಷಣೆ ಕೊಟ್ಟು ಸುಳ್ಳು ಹೇಳುತ್ತಿರುವವರನ್ನು ಸಂಭ್ರಮಿಸುತ್ತಿರುವುದು ವಿಪರ್ಯಾಸ ಎಂದರು.

ಕಾರ್ಯಕ್ರಮದಲ್ಲಿ ವಕೀಲ ಅನೀಸ್ ಪಾಷ, ವೇದಿಕೆಯ ಹೆಚ್. ಮಲ್ಲೇಶ್, ಬುಳಸಾಗರದ ಸಿದ್ದರಾಮಪ್ಪ, ರಂಗನಾಥ್, ಎಚ್.ಸಿ. ಗುಡ್ಡಪ್ಪ, ತಿಪ್ಪಣ್ಣ ಮತ್ತಿತರರಿದ್ದರು.

## ವಿದ್ಯಾನಗರ ಲಯನ್ಸ್ ಕ್ಲಬ್‌ನಿಂದ ಇಂಜಿನಿಯರ್ಸ್ ದಿನಾಚರಣೆ



ದಾವಣಗೆರೆ, ಸೆ. 30- ಲಯನ್ಸ್ ಕ್ಲಬ್ ವಿದ್ಯಾನಗರ ವತಿಯಿಂದ ಇಂಜಿನಿಯರ್ಸ್ ದಿನಾಚರಣೆ ಆಚರಿಸಲಾಯಿತು. ನಿವೃತ್ತ ಮುಖ್ಯ ಇಂಜಿನಿಯರ್ ಬಸವನಗೌಡ, ನಿವೃತ್ತ ಅಧೀಕ್ಷಕ ಇಂಜಿನಿಯರ್ ಟಿ. ಲಕ್ಷ್ಮಪ್ಪ ಮತ್ತು ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರುಗಳಾದ ಬಿ.ಬಿ. ರಾಮಚಂದ್ರ, ಬಿ. ಪುಟ್ಟಸ್ವಾಮಿ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು. ಲಯನ್ಸ್ ಕ್ಲಬ್ ಅಧ್ಯಕ್ಷ ಎಲ್.ಎಸ್. ಪ್ರಭುದೇವ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಲಯನ್ಸ್ ಮಾಜಿ ರಾಜ್ಯಪಾಲರುಗಳಾದ ಡಾ. ಜಿ. ಶಿವಯೋಗಪ್ಪ, ಡಾ. ಟಿ. ಬಸವರಾಜ್, ಹೆಚ್.ಎನ್. ಶಿವಕುಮಾರ್, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ ಮತ್ತಿತರರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

# ಸರ್ವರಿಗೂ ವಿದ್ಯೆಯನ್ನು ಧಾರೆ ಎರೆದ ಜಯದೇವ ಶ್ರೀ

## ಜಯದೇವ ಶ್ರೀ ಸತ್ಕಾರ್ಯದಿಂದ ಸಾಕ್ಷರತೆ ಪ್ರಮಾಣ ಹೆಚ್ಚಳ: ಬಸವಪ್ರಭು ಶ್ರೀ



ದಾವಣಗೆರೆ, ಸೆ. 30- ಜಯದೇವ ಜಗದ್ಗುರುಗಳು ಶಿಕ್ಷಣ ಕ್ರಾಂತಿ ಮಾಡದಿದ್ದರೆ ಇವತ್ತು ದೇಶ, ರಾಜ್ಯ ಉದ್ಧಾರವಾಗಲು ಸಾಧ್ಯವಾಗುತ್ತಿರಲಿಲ್ಲ. ಅವರು ಪ್ರಸಾದ ನಿಲಯಗಳನ್ನು ಸ್ಥಾಪಿಸುವ ಮೂಲಕ ಲಕ್ಷಾಂತರ ವಿದ್ಯಾರ್ಥಿಗಳ ಬದುಕಿಗೆ ದಾರಿ ದೀಪವಾಗಿದ್ದರು. ಕಳೆದ 120 ವರ್ಷಗಳಿಂದ ಇಂತಹ ಸತ್ಕಾರ್ಯಗಳು ನಡೆದಿದ್ದರಿಂದ ದೇಶದಲ್ಲಿ ಸಾಕ್ಷರತೆ ಪ್ರಮಾಣ ಹೆಚ್ಚಾಗಲು ಜಯದೇವ ಜಗದ್ಗುರುಗಳು ಕಾರಣಕರ್ತರಾಗಿದ್ದಾರೆಂದು ವಿರಕ್ತಮಠದ ಚರಮೂರ್ತಿ ಶ್ರೀ ಬಸವ ಪ್ರಭು ಸ್ವಾಮೀಜಿ ಹೇಳಿದರು.

ನಗರದ ಶ್ರೀ ಶಿವಯೋಗಾಶ್ರಮದ ಸಭಾಂಗಣದಲ್ಲಿ ಶ್ರೀ ಮುರುಘರಾಜೇಂದ್ರ ವಿರಕ್ತಮಠ, ಶ್ರೀ ಜಗದ್ಗುರು ಮುರುಘರಾಜೇಂದ್ರ ಶಿವಯೋಗಾಶ್ರಮ ಟ್ರಸ್ಟ್ ವತಿಯಿಂದ ಇಂದು ಹಮ್ಮಿಕೊಂಡಿದ್ದ ಲಿಂ. ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ 68 ನೇ ಸ್ಮರಣೋತ್ಸವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ನಾಡಿನ ಹೆಸರಾಂತ ಕವಿ ಜಿ.ಎಸ್. ಶಿವರುದ್ರಪ್ಪ, ಸಂಶೋಧಕ ಎಂ. ಚಿದಾನಂದಮೂರ್ತಿ, ಹಂಗಾಮಿ ರಾಷ್ಟ್ರಪತಿಯಾಗಿದ್ದ ಬಿ.ಡಿ. ಜತ್ತಿ, ಹಿರಿಯ ಪತ್ರಕರ್ತ ಪಾಟೀಲ ಪುಟ್ಟಪ್ಪ, ಕವಿ ಚನ್ನವೀರ ಕಣವಿ, ಮಾಜಿ ಸಚಿವರಾಗಿದ್ದ ದಿ. ಹೆಚ್. ಶಿವಪ್ಪ, ಕೊಂಡಜ್ಜಿ ಬಸಪ್ಪ ಮುಂತಾದವರು ಜಯದೇವ ಪ್ರಸಾದ ನಿಲಯದಲ್ಲಿ ಓದಿ ನಾಡಿಗೆ ಬೆಳಕಾದವರು ಎಂದು ಹೇಳಿದರು.

ಹತ್ತೊಂಬತ್ತನೇಯ ಶತಮಾನದಲ್ಲಿ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು ಉದಯಿಸಿ ಬರದಿದ್ದರೆ ಇವತ್ತು ದೇಶದಲ್ಲಿ ಹೆಬ್ಬೆಟ್ಟು ಒತ್ತುವ ಜನರೇ ಅಧಿಕವಾಗಿರುತ್ತಿದ್ದರು ಎಂದರು.

'ಹಳ್ಳಿಗೆ ಏಕರಾತ್ರಿ, ಪಟ್ಟಣಕ್ಕೆ ಪಂಚರಾತ್ರಿ' ಎಂಬಂತೆ ನಾಡನ್ನು ಸಂಚರಿಸಿ ದಾವಣಗೆರೆ, ಚಿತ್ರದುರ್ಗ, ಬೆಂಗಳೂರು, ತುಮಕೂರು, ತಿಪಟೂರು, ಅರಸೀಕೆರೆ, ಧಾರವಾಡ, ಕೊಲ್ಲಾಪುರ, ನಿಪ್ಪಾಣಿ, ಕಾಶಿ ಮುಂತಾದ ಸ್ಥಳಗಳಲ್ಲಿ ಉಚಿತವಾಗಿ ಪ್ರಸಾದ ನಿಲಯಗಳನ್ನು ಸ್ಥಾಪಿಸಿ ಸರ್ವರಿಗೂ ವಿದ್ಯೆಯನ್ನು ಧಾರೆ ಎರೆದ ಪುಣ್ಯಾತ್ಮರು ಜಯದೇವ ಶ್ರೀಗಳು ಎಂದರು.

ಜಯದೇವ ಶ್ರೀಗಳ ಜೀವನ ಈಗಿನ ಮಠಗಳ ಪೀಠಾಧಿಪತಿಗಳಿಗೆ ಮೇಲ್ಪಂಕ್ತಿಯಾಗಿದೆ. ಆಯಾ ಊರಿನ ಜನರಿಂದ ಪಡೆದ ಕಾಣಿಕೆಯನ್ನು ಅದೇ ಸ್ಥಳದಲ್ಲೇ ಉಚಿತ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿ ವಿದ್ಯಾ ಪ್ರಸಾರವನ್ನು ಮಾಡಿದರು. ಜಗತ್ತಿನ ಕತ್ತಲೆ ಕಳೆಯಲು ಸೂರ್ಯ ಬರುವಂತೆ ಸ್ವಾತಂತ್ರ್ಯ ಪೂರ್ವದಲ್ಲಿ ಅಸಮಾನತೆ, ಅಸ್ಪೃಶ್ಯತೆ, ಅನಕ್ಷರತೆ, ಬಡತನ, ಹಸಿವು, ನಿರುದ್ಯೋಗ ಎಂಬ ಕತ್ತಲನ್ನು ನಿರ್ಮೂಲನೆ ಮಾಡಲು ಜ್ಞಾನ ಸೂರ್ಯರಾಗಿ ಬಂದವರು ಜಯದೇವಶ್ರೀಗಳು ಎಂದು ಬಣ್ಣಿಸಿದರು.

ಮಹಾನಗರ ಪಾಲಿಕೆ ಮೇಯರ್ ಕೆ. ಚಮನ್ ಸಾಬ್ ಮಾತನಾಡಿ, ಶಿಕ್ಷಣ ಕ್ಷೇತ್ರಕ್ಕೆ ಮುರುಘಾ ಮಠ ನೀಡಿದ ಕೊಡುಗೆ ಅನನ್ಯವಾದುದು. ಜಾತ್ಯಾತೀತವಾಗಿ ಸರ್ವರಿಗೂ ಶಿಕ್ಷಣ ಮತ್ತು ದಾಸೋಹ ಸೇವೆ ನಿರಂತರವಾಗಿ ಮಾಡುತ್ತಾ ಬರುತ್ತಿದೆ. ಇವತ್ತಿನ ಸಂಕೀರ್ಣ ಸಂದರ್ಭದಲ್ಲಿ ಸಮಾಜದಲ್ಲಿ ಶಾಂತಿ ನೆಲೆಸಲು ಬಸವಾದಿ ಪ್ರಮಥರ ಕಾರಣ. ವಚನ ಸಾಹಿತ್ಯದಿಂದಲೇ ಕನ್ನಡ ಭಾಷೆಗೆ ಹೆಚ್ಚು ಸತ್ವ ಬಂದಿದೆ ಎಂದರು.

ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಗಣೇಶೋತ್ಸವ ಆಚರಣೆಗೆ ಕಾಲಮಿತಿ ಇಲ್ಲವಾಗಿದೆ. ಡಿಜೆಗೆ ತಕ್ಕಂತೆ ವಿಸರ್ಜನೆ (4ನೇ ಪುಟಕ್ಕೆ)

# ನಿವೇಶನಗಳು ತೃಣಕ್ಕೆ ಸಮ, ಪತಿಯ ಘನತೆಗಿಂತ ಆಸ್ತಿ ದೊಡ್ಡದಲ್ಲ



ಮುಡಾಗೆ ಬರೆದ ಪತ್ರದಲ್ಲಿ ಸಿಎಂ ಪತ್ನಿ

ಬೆಂಗಳೂರು, ಸೆ. 30 - ಈ ನಿವೇಶನ, ಮನೆ, ಆಸ್ತಿ, ಸಂಪತ್ತು ಯಾವುದೂ ಕೂಡ ನನ್ನ ಪತಿಯ ಗೌರವ, ಘನತೆ, ಮರ್ಯಾದೆ ಮತ್ತು ಅವರ ನೆಮ್ಮದಿಗಿಂತ ದೊಡ್ಡದಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರು ಮುಡಾ ಆಯುಕ್ತರಿಗೆ ಪತ್ರದಲ್ಲಿ ಸ್ಪಷ್ಟಪಡಿಸಿದ್ದಾರೆ.

ಮುಡಾಗೆ ನೀಡಿದ ಜಮೀನಿಗಾಗಿ ನೀಡಲಾಗಿದ್ದ 14 ನಿವೇಶನಗಳನ್ನು ವಾಪಸ್ ಪಡೆಯುವಂತೆ ಬರೆದ ಪತ್ರದಲ್ಲಿ ಅವರು ಈ ನಿಲುವು ತಿಳಿಸಿದ್ದಾರೆ. ಮುಡಾ ವಿವಾದಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ವಿರುದ್ಧ ಲೋಕಾಯುಕ್ತ ಹಾಗೂ ಜಾರಿ ನಿರ್ದೇಶನಾಲಯಗಳು ಕ್ರಮ ತೆಗೆದುಕೊಳ್ಳುತ್ತಿವೆ.

ನನಗೆ ಈ ನಿವೇಶನ, ಮನೆ, ಆಸ್ತಿ, ಸಂಪತ್ತು ಯಾವುದೂ ಕೂಡ ನನ್ನ ಪತಿಯ ಗೌರವ, ಘನತೆ, ಮರ್ಯಾದೆ ಮತ್ತು ಅವರ ನೆಮ್ಮದಿಗಿಂತ ದೊಡ್ಡದಲ್ಲ. ಇಷ್ಟು ವರ್ಷಗಳ ಕಾಲ ಅಧಿಕಾರದಲ್ಲಿದ್ದ ಅವರಿಂದ ಏನನ್ನೂ ನನಗಾಗಲೀ, ನನ್ನ ಕುಟುಂಬಕ್ಕಾಗಲೀ ಬಯಸದೇ ಇದ್ದ ನನಗೆ ಈ ನಿವೇಶನಗಳು ತೃಣಕ್ಕೆ ಸಮ.

ಈ ಹಿನ್ನೆಲೆಯಲ್ಲಿ ವಿವಾದಕ್ಕೆ ಕಾರಣವಾಗಿರುವ ಮುಡಾದ 14 ನಿವೇಶನಗಳನ್ನು ವಾಪಸ್ ಮಾಡಲು ನಿರ್ಧರಿಸಿದ್ದೇನೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಈ ಬಗ್ಗೆ ನನ್ನ ಪತಿಯವರ ಅಭಿಪ್ರಾಯ ಏನಿದೆ ಎನ್ನುವುದು ನನಗೆ ತಿಳಿದಿಲ್ಲ. ನನ್ನ ಮಗನ ಬಳಿಯಾಗಲಿ, ನನ್ನ ಕುಟುಂಬದ ಇತರ ಸದಸ್ಯರ ಬಳಿಯಾಗಲಿ ಇದರ ಬಗ್ಗೆ ನಾನು ಚರ್ಚಿಸಿಲ್ಲ. ಇದು ನಾನು ನನ್ನ ಆತ್ಮಸಾಕ್ಷಿಯ ಕರೆಗೆ ಓಗೊಟ್ಟು ಪ್ರಜ್ಞಾಪೂರ್ವಕವಾಗಿ ಕೈಗೊಂಡಿರುವ ತೀರ್ಮಾನ ಎಂದು ಹೇಳಿದ್ದಾರೆ.

ಈ ಹಂತದಲ್ಲಿ ಇಂತಹ ನಿರ್ಧಾರಕ್ಕೆ ಏಕೆ ಬಂದಿರಿ? ಎಂದು ಯಾರಾದರೂ ಕೇಳಬಹುದು. ಆರೋಪ ಕೇಳಿ ಬಂದ ದಿನವೇ ನಾನು ಈ ನಿರ್ಧಾರ ಮಾಡಿದ್ದೆ. ಆದರೆ, ಈ ಮುಡಾ ನಿವೇಶನ ಹಂಚಿಕೆಯ ಆರೋಪವನ್ನು ರಾಜಕೀಯ ದುರುದ್ದೇಶದಿಂದ ಮಾಡಲಾಗಿದ್ದು, ಈ ಅನ್ಯಾಯದ ವಿರುದ್ಧ ಹೋರಾಡಬೇಕು. ಅವರ ಸಂಚಿಗೆ ನಾವು ಬಲಿಯಾಗಬಾರದು ಎಂದು ಕೆಲವು ಹಿತೈಷಿಗಳು ಹೇಳಿದ ಕಾರಣಕ್ಕೆ ನಿವೇಶನ ವಾಪಸು ಮಾಡಬೇಕೆಂಬ ನಿರ್ಧಾರವನ್ನು ಕೈ ಬಿಟ್ಟಿದ್ದೆ.

ನನ್ನ ಈ ನಿರ್ಧಾರ ಅಚಲವಾಗಿದ್ದು, ಈ ನಿವೇಶನಗಳನ್ನು ವಾಪಸು ನೀಡುವುದರ ಜೊತೆಗೆ ಮುಡಾಕ್ಕೆ ಸಂಬಂಧಿಸಿದ ಎಲ್ಲಾ ಆರೋಪಗಳ ಬಗ್ಗೆ ಸಮಗ್ರ ತನಿಖೆ ಮಾಡಬೇ ಕೆಂದು ಆಗ್ರಹಿಸುತ್ತೇನೆ ಎಂದಿದ್ದಾರೆ. ರಾಜಕೀಯ ಕ್ಷೇತ್ರದಿಂದ ದೂರವಿದ್ದು, ತಮ್ಮ ಪಾಡಿಗೆ ತಾವಿರುವ ರಾಜಕೀಯ ಕುಟುಂಬದ ಹೆಣ್ಣು ಮಕ್ಕಳನ್ನು ರಾಜ ಕೀಯ ದ್ವೇಷ ಸಾಧನೆಗಾಗಿ ವಿವಾದದ ಕಣಕ್ಕೆ ಎಳೆದು ತಂದು ಅವರ ಘನತೆ, ಗೌರವಗಳಿಗೆ ಹಾನಿ ಮಾಡಬೇಡಿ ಎಂದು ಪಾರ್ವತಿ ಸಿದ್ದರಾಮಯ್ಯ ಅವರು ಪತ್ರದಲ್ಲಿ ಹೇಳಿದ್ದಾರೆ.

# ದೇಶದಲ್ಲಿ ಹೆಚ್ಚುತ್ತಿರುವ ಒಂಟಿ ವೃದ್ಧರ ಸಂಖ್ಯೆ

## ಹಣಕಾಸು - ಸಾಮಾಜಿಕವಾಗಿ ಸ್ವತಂತ್ರವಾಗಿರುತ್ತೇವೆ ಎಂದ ಶೇ.31ರಷ್ಟು ಹಿರಿಯರು

ನವದೆಹಲಿ, ಸೆ. 30 - ದೇಶದಲ್ಲಿ ಏಕಾಂಗಿಯಾಗುತ್ತಿರುವ ವೃದ್ಧರ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ಇತ್ತೀಚಿನ ಅಧ್ಯಯನವೊಂದು ತಿಳಿಸಿದೆ. ಈ ರೀತಿಯ ಒಂಟಿತನಕ್ಕೆ ಹಣಕಾಸು ಹಾಗೂ ಸಾಮಾಜಿಕ ಸ್ವಾತಂತ್ರ್ಯ ಬಯಸುವುದೂ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ.

ಸೆಪ್ಟೆಂಬರ್‌ನಲ್ಲಿ ಈ ಬಗ್ಗೆ ಏಜ್‌ವೆಲ್ ಫೌಂಡೇಷನ್ ಸಮೀಕ್ಷೆ ನಡೆಸಿತ್ತು. ನಗರ ಹಾಗೂ ಗ್ರಾಮೀಣ ಭಾಗಗಳ 10 ಸಾವಿರಕ್ಕೂ ಹೆಚ್ಚು ವೃದ್ಧರು ಸಮೀಕ್ಷೆಯಲ್ಲಿ ಭಾಗಿಯಾಗಿದ್ದರು. ಈ ಅಧ್ಯಯನದ ಪ್ರಕಾರ, ಶೇ.14.3 ರಷ್ಟು ಹಿರಿಯರು ಒಂಟಿಯಾಗಿದ್ದಾರೆ. ನಗರ ಪ್ರದೇಶಗಳಲ್ಲಿ ಇವರ ಸಂಖ್ಯೆ ಶೇ.15 ಹಾಗೂ ಗ್ರಾಮೀಣ ಭಾಗದಲ್ಲಿ ಶೇ.13.4ರಷ್ಟಾಗಿದೆ.

ಒಂಟಿಯಾಗಿರುವವರಲ್ಲಿ ಶೇ.41.9 ರಷ್ಟು ವೃದ್ಧರು, ಐದು ವರ್ಷಗಳಿಗೂ ಹೆಚ್ಚು ಕಾಲ ಸ್ವತಂತ್ರ ವಾಗಿದ್ದಾರೆ. ಒಂಟಿಯಾಗಿರುವುದು ಸವಾಲಿನದ್ದಾಗಿ ದ್ದರೂ, ಇದರಲ್ಲೇ ಸಂತೋಷವಿದೆ ಎಂದು ಶೇ.46.9ರಷ್ಟು ಜನರು ಹೇಳಿದ್ದಾರೆ. ಶೇ.41.5ರಷ್ಟು ಜನರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಹಣಕಾಸು ಹಾಗೂ ಸಾಮಾಜಿಕ ಸ್ವಾತಂತ್ರ್ಯ ಬಯಸುವುದೇ ಒಂಟಿಯಾಗಿ ಬದುಕಲು ಇಷ್ಟಪಡುವುದಕ್ಕೆ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ. ಶೇ.31ರಷ್ಟು ಜನರು ಒಂಟಿಯಾಗಿ ಬದುಕುವುದನ್ನು ಇಷ್ಟಪಡುವುದಾಗಿ ಹೇಳಿದ್ದಾರೆ.

ಶೇ.26.7ರಷ್ಟು ಜನರು ಸಾಮಾಜಿಕ - ಆರ್ಥಿಕ ಬದಲಾವಣೆಗಳಿಂದಾಗಿ ಒಂಟಿತನದ ಪರಿಸ್ಥಿತಿ ಎದುರಾಗಿದೆ ಎಂದಿದ್ದಾರೆ. ಹಿರಿಯರಿಗೆ ಅನುಕೂಲ ವಾಗುವಂತಹ ಆರೋಗ್ಯ ಸೇವೆಗಳ ವಿಸ್ತರಣೆ, ಭಾವನಾತ್ಮಕ ಆರೋಗ್ಯಕ್ಕೆ ನೆರವು ಹಾಗೂ ಹಿರಿಯರ ರಕ್ಷಣೆ ಮತ್ತು ಹಣಕಾಸು ಸುರಕ್ಷತೆಗೆ ಕ್ರಮಗಳ ಅಗತ್ಯವಿದೆ ಎಂದು ಅಧ್ಯಯನದಲ್ಲಿ ತಿಳಿಸಲಾಗಿದೆ. ಸ್ವಯಂ ಸೇವಕರ ಜಾಲವನ್ನು ವಿಸ್ತರಿಸಲು ಹಾಗೂ ಹಿರಿಯರ ಜೀವನ ಮಟ್ಟವನ್ನು ಸುಧಾರಿಸಲು ತಂತ್ರಜ್ಞಾನದ ಬಳಕೆಯ ಅಗತ್ಯವಿದೆ ಎಂದೂ ಅಧ್ಯಯನದಲ್ಲಿ ಹೇಳಲಾಗಿದೆ.

# ನಗರದಲ್ಲಿ ನಾಳೆ ಮಾಂಸ ಮಾರಾಟ, ಪ್ರಾಣಿ ವಧೆ ನಿಷೇಧ

ದಾವಣಗೆರೆ, ಸೆ. 30 - ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಮಾಂಸದ ಉದ್ಯಮ ನಡೆಸುತ್ತಿರುವ ಉದ್ದಿಮೆದಾರರು ನಾಡಿದ್ದು ದಿನಾಂಕ 2 ರ ಬುಧವಾರ ಮಹಾತ್ಮಗಾಂಧಿ ಜಯಂತಿ ಪ್ರಯುಕ್ತ ಪ್ರಾಣಿ ವಧೆ, ಪ್ರಾಣಿ ಮಾಂಸ ಹಾಗೂ ಮೀನಿನ ಮಾಂಸ ಮಾರಾಟವನ್ನು ನಿಷೇಧಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಮಾಂಸ ಮಾರಾಟ ಮಾಡಬಾರದು, ತಪ್ಪಿದಲ್ಲಿ ಮಹಾನಗರಪಾಲಿಕೆ ಕಾಯ್ದೆಯ ಪ್ರಕಾರ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಆಯುಕ್ತರಾದ ಶ್ರೀಮತಿ ರೇಣುಕಾ ಎಚ್ಚರಿಸಿದ್ದಾರೆ.

# ದೇವರನ್ನಾದರೂ ರಾಜಕೀಯದಿಂದ ದೂರವಿಡಿ

## ತಿಮ್ಮಪ್ಪನ ಪ್ರಸಾದದ ನಾಯ್ಡು ಹೇಳಿಕೆಗೆ ಸುಪ್ರೀಂ ಆಕ್ಷೇಪ

ನವದೆಹಲಿ, ಸೆ. 30 - ತಿರುಪತಿ ತಿಮ್ಮಪ್ಪನ ಪ್ರಸಾದದ ಲಡ್ಡೂವಿನಲ್ಲಿ ಪ್ರಾಣಿಯ ಕೊಬ್ಬು ಇತ್ತು ಎಂದು ಆಂಧ್ರ ಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಹೇಳಿರುವುದಕ್ಕೆ ಆಕ್ಷೇಪಿಸಿರುವ ಸುಪ್ರೀಂ ಕೋರ್ಟ್, ಈ ಹೇಳಿಕೆಯನ್ನು ಸಾಬೀತು ಪಡಿಸುವಂತೆ ತಿಳಿಸಿದೆ.

ಕನಿಷ್ಠ ದೇವರನ್ನಾದರೂ ರಾಜಕೀಯದಿಂದ ದೂರವಿಡಿ ಎಂದು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಹಾಗೂ ಕೆ.ವಿ. ವಿಶ್ವನಾಥನ್ ಅವರನ್ನು ಒಳಗೊಂಡ ಪೀಠ ಹೇಳಿದೆ.

ಪ್ರಸಾದದಲ್ಲಿ ಪ್ರಾಣಿಗಳ ಕೊಬ್ಬಿರುವ ಅಂಶ ಇರುವುದು ಪ್ರಯೋಗಾಲಯದ ಪರೀಕ್ಷೆಯಿಂದ ಪತ್ತೆಯಾಗಿತ್ತು ಎಂದು ನಾಯ್ಡು ಹೇಳಿದ್ದರು. ನಂತರ ನಾಯ್ಡು ಹೇಳಿದ್ದನ್ನು ದೇವಾಲಯ ನಿರ್ವಹಿಸುವ ಟಿ.ಟಿ.ಡಿ. ಖಚಿತ ಪಡಿಸಿತ್ತು. ಈ ಬಗ್ಗೆ ಸೆಪ್ಟೆಂಬರ್ 25ರಂದು ಎಫ್.ಐ.ಆರ್. ದಾಖಲಿಸಲಾಗಿತ್ತು. ನಂತರ ಪ್ರಕರಣವನ್ನು ಎಸ್.ಐ.ಟಿ. ವಿಚಾರಣೆಗೆ ವಹಿಸಲಾಗಿತ್ತು.

ಸಂವಿಧಾನಿಕ ಉನ್ನತ ಸ್ಥಾನದಲ್ಲಿರುವವರು ಸಾರ್ವಜನಿಕವಾಗಿ ಈ ರೀತಿಯ ಹೇಳಿಕೆ ನೀಡುವುದರಿಂದ ಕೋಟ್ಯಂತರ ಜನರ ಭಾವನೆಗಳಿಗೆ ಧಕ್ಕೆಯಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಪೀಠ ಹೇಳಿದೆ.

ರಾಜ್ಯ ಸರ್ಕಾರ ನೇಮಿಸಿರುವ ಎಸ್.ಐ.ಟಿ. ತನಿಖೆ ಮುಂದುವರೆಯಬೇಕೇ ಅಥವಾ ತನಿಖೆಯನ್ನು ಸ್ವತಂತ್ರ ಸಂಸ್ಥೆಗೆ ವಹಿಸಬೇಕೇ ಎಂಬುದನ್ನು ನಿರ್ಧರಿಸಲು ನೆರವಾಗುವಂತೆ ಸಾಲಿಸಿಟರ್ ಜನರಲ್ ತುಶಾರ್ ಮೆಹ್ತಾಗೆ ಸುಪ್ರೀಂ ಕೋರ್ಟ್ ಪೀಠ ಹೇಳಿದೆ.

ತಿರುಪತಿ ಲಡ್ಡು ವಿಷಯಕ್ಕೆ ಸಂಬಂಧಿಸಿದಂತೆ ನ್ಯಾಯಾಂಗದ ಉಸ್ತುವಾರಿಯಲ್ಲಿ ತನಿಖೆ ನಡೆಸಬೇಕು ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು. ನ್ಯಾಯಾಲಯ ಪ್ರಕರಣದ ವಿಚಾರಣೆಯನ್ನು ಅಕ್ಟೋಬರ್ 3ಕ್ಕೆ ಮುಂದೂಡಿದೆ.

# ನಗರದ ಕೃಷಿ ವಿಜ್ಞಾನ ಕೇಂದ್ರದಲ್ಲಿ ಇಂದು ಸಸ್ಯ ಸಂತೆ

ದಾವಣಗೆರೆ, ಸೆ. 30 - ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ ಹಾಗೂ ತೋಟಗಾರಿಕೆ ಇಲಾಖೆ, ಜಿಲ್ಲಾ ಪಂಚಾಯತ್‌ಗಳ ಸಂಯುಕ್ತಾಶ್ರಯದಲ್ಲಿ ಬರುವ ಅ.1 ಹಾಗೂ 2ರಂದು ಕೃಷಿ ವಿಜ್ಞಾನ ಕೇಂದ್ರದಲ್ಲಿ 'ಸಸ್ಯ ಸಂತೆ ಮತ್ತು ಸಾವಯವ ಪರಿಕರಗಳ ಮಾರಾಟ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿರುವ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಟಿ.ಎನ್. ದೇವರಾಜ, ಈ ಕಾರ್ಯಕ್ರಮದಲ್ಲಿ 40ಕ್ಕೂ ಹೆಚ್ಚು ಮಳಿಗೆಗಳನ್ನು ಸ್ಥಾಪಿಸಲಾಗುವುದು. 50 ಕ್ಕೂ ಹೆಚ್ಚು ಹಣ್ಣಿನ ಗಿಡಗಳ ಮಾರಾಟ, ದೇಸಿ ಬೀಜಗಳ ಪ್ರದರ್ಶನ ಮತ್ತು ಮಾರಾಟ, ಕೈತೋಟ ಮತ್ತು ತಾರಸಿ ತೋಟಗಳಿಗೆ ಬೇಕಾಗುವ ಸಲಕರಣೆಗಳು, ಸಾವಯವ ಪರಿಕರ ಗೊಬ್ಬರಗಳ ಮಾರಾಟ, ಸಿರಿಧಾನ್ಯಗಳ ಉಪ ಉತ್ಪನ್ನಗಳು, ಸಾವಯವ ಆಹಾರ ಪದಾರ್ಥಗಳ ಮಾರಾಟ ಹೀಗೆ ಹಲವಾರು ವಿಶೇಷತೆಗಳಿವೆ ಎಂದರು.

ಅ.1ರ ಮಧ್ಯಾಹ್ನ 2 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಸಸ್ಯ ಸಂತೆಗೆ ಚಾಲನೆ ನೀಡಲಿದ್ದಾರೆ.

ಬೆಂಗಳೂರಿನ ಐಸಿಎಆರ್-ಕೃಷಿ ತಂತ್ರಜ್ಞಾನ ಅಳವಡಿಕೆ ಸಂಶೋಧನಾ ಸಂಸ್ಥೆಯ ನಿರ್ದೇಶಕ ವಿ. ವೆಂಕಟಸುಬ್ರಮಣ್ಯಂ ಸಾವಯವ ಪರಿಕರಗಳ ವಸ್ತು ಪ್ರದರ್ಶನವನ್ನು ಉದ್ಘಾಟಿಸಲಿದ್ದಾರೆ.

ದಾವಣಗೆರೆ ಜಿ.ಪಂ. ಸಿಇಒ ಸುರೇಶ್ ಬಿ. ಇಟ್ನಾಳ್ 'ಅಡಿಕೆ ಬೆಳೆಯಲ್ಲಿ ಅಂತರ ಬೆಳೆಗಳು ಮತ್ತು ತೋಟಗಾರಿಕೆ ಬೆಳೆಗಳಲ್ಲಿ ಸಾವಯವ ಪದ್ಧತಿ ಅಳವಡಿಕೆ' ಕುರಿತ ಕಾರ್ಯಗಾರ ಉದ್ಘಾಟಿಸಲಿದ್ದಾರೆ. ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಕಾರ್ಯದರ್ಶಿ ಕೆ.ಪಿ. ಬಸವರಾಜಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ದೇವರಾಜ್ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಕೃಷಿ ವಿಜ್ಞಾನ ಕೇಂದ್ರದ ಎಂ.ಜಿ. ಬಸವನಗೌಡ, ಸುಪ್ರಿಯ ಪಿ. ಪಾಟೀಲ್ ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ಅನ್ನ ಸಂತರ್ಪಣೆ, ರಕ್ತದಾನ ಶಿಬಿರ



ಹಿಂದೂ ಮಹಾ ಗಣಪತಿ ಟ್ರಸ್ಟ್ ವತಿಯಿಂದ ನಗರದ ಹೈಸ್ಕೂಲ್ ಮೈದಾನದಲ್ಲಿ ಪ್ರತಿಷ್ಠಾಪಿಸಲಾಗಿರುವ ಹಿಂದೂ ಮಹಾಗಣಪತಿ ವಿಸರ್ಜನೆಯು ಇದೇ ದಿನಾಂಕ 5ರಂದು ನಡೆಯಲಿದ್ದು, ಈ ಹಿನ್ನೆಲೆಯಲ್ಲಿ ಇಂದು ಮಂಗಳವಾರ ಅನ್ನ ಸಂತರ್ಪಣೆ ಏರ್ಪಡಿಸ ಲಾಗಿದೆ. ಹಾಗೂ ಕರ್ನಾಟಕ ಸರ್ಕಾರ, ಚಿಗಟೇರಿ ಜಿಲ್ಲಾ ಆಸ್ಪತ್ರೆ ಇವರ ಸಂಯುಕ್ತಾಶ್ರಯದಲ್ಲಿ ಬೃಹತ್ ರಕ್ತ ದಾನ ಶಿಬಿರವನ್ನು ಏರ್ಪಡಿಸಲಾಗಿದೆ ಎಂದು ಹಿಂದೂ ಮಹಾ ಗಣಪತಿ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಜೊಳ್ಳಿ ಗುರು ತಿಳಿಸಿದ್ದಾರೆ.

# ಕೋಡಿ ಕ್ಯಾಂಪ್ ಕೊಟ್ಟೂರೇಶ್ವರ ಸ್ವಾಮಿ ಮಠದಲ್ಲಿ ನಾಳೆ ಮಹಾಲಯ ಅಮಾವಾಸ್ಯೆ

ದಾವಣಗೆರೆ, ಸೆ. 30 - ಕೊಟ್ಟೂರು ಶ್ರೀ ಗುರುಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ಇವರಿಂದ, ಮಾಗಾನಹಳ್ಳಿ ಕೋಡಿ ಕ್ಯಾಂಪ್ ಬಳಿ ಇರುವ ಶ್ರೀ ಗುರು ಕೊಟ್ಟೂರೇಶ್ವರ ಮಹಾಸ್ವಾಮಿಗಳಿಗೆ ನಾಗರ ಅಮಾವಾಸ್ಯೆ ಪ್ರಯುಕ್ತ ನಾಡಿದ್ದು ದಿನಾಂಕ 2 ರ ಬುಧವಾರ ಬೆಳಿಗ್ಗೆ 6.30ಕ್ಕೆ ಅಭಿಷೇಕ, ವಿಶೇಷ ಪೂಜೆ ನಡೆಯಲಿದೆ. ನಂತರ ಬೆಳಿಗ್ಗೆ 8 ರಿಂದ ಪ್ರಸಾದ ವಿನಿಯೋಗವಿರುತ್ತದೆ. ವಿವರಕ್ಕೆ ಕಣಕುಪ್ಪಿ ಮುರುಗೇಶಪ್ಪ (96118 89151), ಟಿ.ಜಿ. ಬಕ್ಕೇಶಪ್ಪ (91089 88898), ಬಿ. ಚಿದಾನಂದಪ್ಪ (98455 28449), ಮಲ್ಲಾಬಾದಿ ಗುರು ಬಸವರಾಜ್ (79757 97079) ತಿಳಿಸಿದ್ದಾರೆ. ದಾಸೋಹ ಮನೆ ಮತ್ತು ಸಭಾಂಗಣ ಕಟ್ಟಡವು ಪ್ರಗತಿ ಹಂತದಲ್ಲಿದೆ. ಭಕ್ತಾದಿಗಳು ದೇಣಿಗೆ ಸಲ್ಲಿಸಬಹುದು.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಸಿದ್ದವೀರಪ್ಪ ಬಡಾವಣೆ 2, 3, 4, 5, 6, 7 ಕ್ರಾಸ್, ಶಾಮನೂರು ರಸ್ತೆ, ಸುತ್ತಮುತ್ತ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ಇರುವುದಿಲ್ಲ.

## ನೀಲಗುಂದ ಷಣ್ಮುಖಪ್ಪ ನಿಧನ



ದಾವಣಗೆರೆ ಪಿ.ಜೆ. ಬಡಾವಣೆ # 503/1, 4ನೇ ಮೇನ್, 5ನೇ ಕ್ರಾಸ್ ವಾಸಿ

**ನೀಲಗುಂದ ಷಣ್ಮುಖಪ್ಪ**

ಇವರು ದಿನಾಂಕ 30.9.2024ರ ಸೋಮವಾರ ರಾತ್ರಿ 7.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 70 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 1.10.2024ರ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ದಾವಣಗೆರೆ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತರು :** ಶ್ರೀಮತಿ ಜಯಮ್ಮ ನೀಲಗುಂದ ಮತ್ತು ಮಕ್ಕಳು.

ಮೊ : 95389 36574, 96865 67103

## ಸವಿನೆನಪು



**ಲಿಂ॥ ಶ್ರೀಮತಿ ಸಂಶಿ ಅನ್ನಪೂರ್ಣಮ್ಮ (ಗಂಗೂ)**

ನೀವು ನಮ್ಮನ್ನಗಲಿ ಇಂದಿಗೆ (1.10.2024) ಹನ್ನೊಂದು ವರ್ಷಗಳಾದವು.
ನಿಮ್ಮ ಪ್ರೀತಿ, ತಾಳ್ಮೆ, ಆದರ್ಶಮಯ ಜೀವನವೇ ನಮಗೆ ದಾರಿದೀಪ.
ಅನುದಿನ, ಅನುಕ್ಷಣ ನಿಮ್ಮ ಸ್ಮರಣೆಯಲ್ಲಿರುವ

ದಿ.ಸಂಶಿ ಜಯ್ಯಣ್ಣನವರ ಮಕ್ಕಳು, ಅಳಿಯಂದಿರು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು, ದಾವಣಗೆರೆ.

ಮೊ : 98802-14143

# 11ನೇ ವರ್ಷದ ಪುಣ್ಯಸ್ಮರಣೆ



ದಾವಣಗೆರೆ ಜಿಲ್ಲೆಯ ವಾಲ್ಮೀಕಿ ನಾಯಕ ಸಮಾಜದ ಹಿರಿಯ ಮುಖಂಡರು, ಜಿಲ್ಲೆಯ ಧೀಮಂತ ನಾಯಕರು, ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರು, ಪಾಲಿಕೆ ನೌಕರರ ಸಂಘದ ಅಧ್ಯಕ್ಷರು, ನಮ್ಮ ನಿಮ್ಮೆಲ್ಲರ ನೆಚ್ಚಿನ ನಾಯಕರಾದ

**ದಿ॥ ಬಡಗಿ ಕೃಷ್ಣಪ್ಪನವರು**

ನಮ್ಮನ್ನಗಲಿ ಇಂದಿಗೆ 11 ವರ್ಷಗಳಾದವು. ನೀವು ಹಾಕಿಕೊಟ್ಟ ಸನ್ಮಾರ್ಗದಲ್ಲೇ ನಡೆಯುತ್ತಿರುವ ನಿಮ್ಮ ಕುಟುಂಬ ವರ್ಗ.

11ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ದಿನಾಂಕ:01–10–2024ನೇ ಮಂಗಳವಾರ ನಗರದ ದೇವರಾಜ್ ಅರಸ್ ಬಡಾವಣೆ, ಬಿ ಬ್ಲಾಕ್‌ನಲ್ಲಿರುವ ಅಂಧ ಮಕ್ಕಳ ಶಾಲೆಯಲ್ಲಿ ಅಂಧ ಮಕ್ಕಳಿಗೆ ಹಣ್ಣು ಮತ್ತು ಸಿಹಿ ವಿತರಣೆ ಮಾಡಲಾಗುವುದು ಹಾಗೂ ವೀರಮದಕರಿ ನಾಯಕ ವೃತ್ತದಲ್ಲಿ ಮಧ್ಯಾಹ್ನ 12.00 ಗಂಟೆಗೆ ಸಾರ್ವಜನಿಕರಿಗೆ ಅನ್ನಸಂತರ್ಪಣೆಯನ್ನು ಏರ್ಪಡಿಸಲಾಗಿದೆ.

**ಸದಾ ನಿಮ್ಮ ಸ್ಮರಣೆಯಲ್ಲಿರುವ**

- ಶ್ರೀ ಬಿ.ವೀರಣ್ಣ ಮತ್ತು ಮಕ್ಕಳು, ಅಧ್ಯಕ್ಷರು, ಜಿಲ್ಲಾ ವಾಲ್ಮೀಕಿ ನಾಯಕ ಸಮಾಜ, ಮಾಜಿ ನಗರಸಭಾಧ್ಯಕ್ಷರು.
- ಶ್ರೀಮತಿ ಲಕ್ಷ್ಮೀದೇವಿ, ಮಹಾನಗರ ಪಾಲಿಕೆ ಮಾಜಿ ಸದಸ್ಯರು
- ಶ್ರೀಮತಿ ಲೀಲಾವತಿ ಶ್ರೀ ಮಲ್ಲೇಶಪ್ಪ ಮತ್ತು ಮಕ್ಕಳು, ರೈಲ್ವೆ ಇಲಾಖೆ.
- ಶ್ರೀಮತಿ ಶಾಂತಮ್ಮ ಮತ್ತು ಶ್ರೀ ರಂಗಸ್ವಾಮಿ ಹಾಗೂ ಮಕ್ಕಳು, ಆರೋಗ್ಯ ಇಲಾಖೆ.
- ಶ್ರೀಮತಿ ಶ್ವೇತಾ ಮತ್ತು ಶ್ರೀ ಬಿ.ಕೆ.ರಾಮಕೃಷ್ಣ ಹಾಗೂ ಮಕ್ಕಳು
- ಶ್ರೀಮತಿ ಲಾವಣ್ಯ ಮತ್ತು ಶ್ರೀ ಬಿ.ಕೆ.ರಾಘವೇಂದ್ರ ಹಾಗೂ ಮಕ್ಕಳು
- ಶ್ರೀಮತಿ ಭೂಮಿಕಾ ಮತ್ತು ಶ್ರೀ ವಿನಾಯಕ ಫೈಲ್ವಾನ್, ಮಾಜಿ ಮಹಾಪೌರರು.
- ಶ್ರೀಮತಿ ದೇವಿರಮ್ಮ, ಶ್ರೀಮತಿ ದುಗ್ಗಮ್ಮ ಮತ್ತು ಶ್ರೀ ಬಿ.ಹೆಚ್.ಮಂಜುನಾಥ್ ಮತ್ತು ಮೊಮ್ಮಕ್ಕಳು ಹಾಗೂ ಬಂಧು–ಮಿತ್ರರು.

KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas